## ಅಧ್ಯಾಯ 3

# ಬುದ್ಧಿವಾದಗಳು

### ಪೌಲನಿಗಾಗಿ ಮತ್ತು ಆತನ ಜೊತೆಗೆಲಸದವರಿಗಾಗಿ ಪ್ರಾರ್ಥಿಸಬೇಕೆಂಬ ಒಂದು ಮನವಿ (3:1, 2)

**[1]ಕಡೇ ಮಾತೇನಂದರೆ, ಸಹೋದರರೇ, ನಮಗೋಸ್ಕರ ಪ್ರಾರ್ಥನೆ ಮಾಡಿರಿ. ಕರ್ತನ ವಾಕ್ಯವು ನಿಮ್ಮಲ್ಲಿ ಹಬ್ಬಿದ ಪ್ರಕಾರ ಎಲ್ಲೆಲ್ಲಿಯೂ ಬೇಗನೆ ಹಬ್ಬಿ ಪ್ರಖ್ಯಾತಿ ಹೊಂದುವ ಹಾಗೆಯೂ [2]ದೇವರು ನಮ್ಮನ್ನು ಮೂರ್ಖರಾದ ದುಷ್ಟಜನರ ಕೈಯಿಂದ ತಪ್ಪಿಸುವ ಹಾಗೆಯೂ ಪ್ರಾರ್ಥಿಸಿರಿ; ಎಲ್ಲರಲ್ಲಿ ಕ್ರಿಸ್ತ ನಂಬಿಕೆಯಿಲ್ಲವಲ್ಲಾ.**

**ವಚನ 1.** ಅವರಿಗೋಸ್ಕರ ಪ್ರಾರ್ಥಿಸಿದವನಾಗಿ (2:16, 17), ಪೌಲನು ತನಗೋಸ್ಕರ ಮತ್ತು ತನ್ನ ಜೊತೆಗೆಲಸದವರಿಗೋಸ್ಕರ ಪ್ರಾರ್ಥನೆ ಮಾಡಬೇಕೆಂದು ಥೆಸಲೋನಿಕದವರನ್ನು ಕೇಳಿಕೊಳ್ಳುತ್ತಾನೆ. **ಕಡೇ ಮಾತೇನಂದರೆ** ಎಂಬ ಪದವು ಪೌಲನು ಏನು ಹೇಳಬೇಕೆಂದಿದ್ದನೋ ಅದರ ಮುಕ್ತಾಯದ ಕಡೆಗೆ ಸಾಗುತ್ತಿದ್ದಾನೆ ಮತ್ತು ಎಲ್ಲಾ ಸಡಿಲವಾದ ತುದಿಗಳನ್ನು ಒಂದುಗೂಡಿಸುತ್ತಿದ್ದಾನೆಂಬುದನ್ನು ತೋರಿಸುತ್ತದೆ (1 ಥೆಸಲೋನಿಕ 4:1 ರೊಂದಿಗೆ ಹೋಲಿಸಿರಿ). (ಆತನು ಬಳಸುವ **ಸಹೋದರರೇ** ಎಂಬ ಪದದ ವಿಷಯದಲ್ಲಿ, 2:13ರ ಮೇಲಿನ ಚರ್ಚೆಯನ್ನು ನೋಡಿರಿ.)

ಪೌಲನು ಎಷ್ಟೊಂದು ಸಾರಿ ಪ್ರಾರ್ಥಿಸಬೇಕೆಂದು ಮನವಿ ಮಾಡಿಕೊಂಡನೆಂಬುದರಿಂದ ಯೋಚಿಸಿ ನೋಡುವದಾದರೆ (1 ಥೆಸಲೋನಿಕ 5:25; ಕೊಲೊಸ್ಸೆ 4:3; ಎಫೆಸ 6:19; ರೋಮಾ 15:30), ಕ್ರೈಸ್ತರ ಪ್ರಾರ್ಥನೆಗಳು ಪರಿಣಾಮಕಾರಿಯಾಗಿವೆ ಎಂಬ ಅನುಭವ ಪೌಲನಿಗೆ ಸಹ ಆಗಿರಬಹುದಾಗಿದೆ (ಯಾಕೋಬ 5:16 ರೊಂದಿಗೆ ಹೋಲಿಸಿರಿ). ಪ್ರಾರ್ಥನೆಯ ಲಕ್ಷ್ಯವು **ಕರ್ತನ ವಾಕ್ಯವು ಎಲ್ಲೆಲ್ಲಿಯೂ ಬೇಗನೆ ಹಬ್ಬು** [ವಂತಾಗುವ ಹಾಗೆ], ಅಥವಾ ಸಾರಲ್ಪಟ್ಟು ಹೆಚ್ಚೆಚ್ಚಾದ ಜನರಿಂದ ಸದಾಕಾಲವೂ ವ್ಯಾಪಕವಾಗಿ ಅಂಗೀಕರಿಸಲ್ಪಡುವಂತಾಗಬೇಕೆಂಬದು ಆಗಿತ್ತು (ಕೀರ್ತನೆ 147:15 ರೊಂದಿಗೆ ಹೋಲಿಸಿರಿ). ಅದು "ಬೇಗನೆ ಹಬ್ಬ" ಬೇಕೆಂದು ಪ್ರಾರ್ಥಿಸಿದ್ದು ಮಾತ್ರವಲ್ಲ, ಆದತನು ಅದು ಥೆಸಲೋನಿಕದವರಲ್ಲಿ ಹಬ್ಬಿದ **ಪ್ರಕಾರ ಪ್ರಖ್ಯಾತಿ ಹೊಂದ**ಬೇಕು ಎಂದು ಸಹ ಪ್ರಾರ್ಥಿಸಿದನು. ಅವರು ಸುವಾರ್ತೆಯನ್ನು ಗಂಭೀರವಾಗಿ ತೆಗೆದುಕೊಂಡು ಅದನ್ನು ದೇವರ ವಾಕ್ಯವೆಂದು ಅಂಗೀಕರಿಸಿಕೊಳ್ಳುವ ಮೂಲಕ ಸುವಾರ್ತೆಯನ್ನು ಅವರು "ಮಹಿಮೆಗೊಳಿಸಿದ್ದರು" (1 ಥೆಸಲೋನಿಕ 1:6; 2:13). ಸುವಾರ್ತೆಯು ನಂಬಲ್ಪಟ್ಟು

"ಪ್ರಖ್ಯಾತಿ" (ಮಹಿಮೆ) ಗೊಳಿಸಲ್ಪಟ್ಟರೆ ಮಾತ್ರವೇ ಅದು "ದೇವರ ಬಲಸ್ವರೂಪವಾಗಿದ್ದು ರಕ್ಷಣೆ ಉಂಟು" ಮಾಡುವಂತದ್ದಾಗುತ್ತದೆ (ರೋಮಾ 1:16).

**ವಚನ 2.** ಪೌಲನು ತನ್ನ ಕುರಿತಾಗಿ ಪ್ರಾರ್ಥಿಸುವಂತೆ ಥೆಸಲೋನಿಕದವರಿಗೆ ಕೇಳಿಕೊಂಡ ಎರಡನೆಯ ಕಾರ್ಯವೆಂದರೆ ತಾನು ದೇವರ ಶಕ್ತಿಯ ಮೂಲಕವಾಗಿ **ಮೂರ್ಖರಾದ ದುಷ್ಟಜನರ ಕೈಯಿಂದ ತತ್ತಿಸಲ್ಪಡುವಂತೆ** ಆಗುವ ಹಾಗೆ ಪ್ರಾರ್ಥಿಸಬೇಕು ಎಂಬದೆ. ಗ್ರೀಕ್‌ನಲ್ಲಿ ಅಕ್ಷರಶಃ "ಕೆಟ್ಟವರಾದ ದುಷ್ಟ ಜನರಿಂದ" ಎಂದಿರುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ಪ್ರಯಾಣಗಳಲ್ಲಿ ಎದುರಿಸುತ್ತಿದ್ದ ಸಾಮಾನ್ಯವಾದ ಅಪಾಯಗಳನ್ನು ಸೂಚಿಸುತ್ತಿಲ್ಲ, ಆದರೆ ಸಂಭಾವ್ಯವಾಗಿ, ತಾನು ಯೆಹೂದ್ಯರಿಂದ ಎದುರಿಸಿದ ನಿರ್ದಿಷ್ಟವಾದ ಅಪಾಯವನ್ನು ಸೂಚಿಸಿ ಹೇಳುತ್ತಿರಬಹುದಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 18:12-21; 1 ಥೆಸಲೋನಿಕ 2:14-16). "ಮೂರ್ಖರಾದ" ಎಂಬುದು ಗ್ರೀಕ್‌ನ ἄτοπος (*atopos*) ಎಂಬ ಪದದಿಂದ ಬಂದದ್ದು. KJV ಯು ಅದನ್ನು "ವಿಚಾರಹೀನ" ಎಂದು ಅನುವಾದಿಸುತ್ತದೆ, ಆದರೆ ಅದು "ನ್ಯಾಯವಲ್ಲದ್ದು, ಮತ್ತು ಅನೀತಿಯುಳ್ಳದ್ದು" ಎಂಬುದನ್ನು ಸೂಚಿಸುತ್ತದೆ. ಅಲ್ಲದೆ ಅವರು "ದುಷ್ಟರು," ಅಥವಾ ಭ್ರಷ್ಟಗೊಂಡವರು ಎಂದು ಸಹ ಬಣ್ಣಿಸಲ್ಪಟ್ಟಿದ್ದಾರೆ, ಅದು ಗ್ರೀಕ್‌ನ πονηρός (*ponēros*) ಎಂಬ ಪದದಿಂದ ಬಂದಿರುತ್ತದೆ. C. F. Hogg ಅಭಿಪ್ರಾಯ ಪಟ್ಟದ್ದೇನೆಂದರೆ, ಇವರು "ದೌರ್ಜನ್ಯವನ್ನೆಸಗುವದಕ್ಕೆ ಸಮರ್ಥರಾದಂಥ ವಿಕೃತ, ಕ್ರೌರ್ಯದ . . . ಮನುಷ್ಯರಾಗಿದ್ದರು," ಮತ್ತು "ಗುಣವಾಚಿಯು ಇರುವದು ತೋರಿಸುವದೇನೆಂದರೆ ಅಪೊಸ್ತಲನು ನಿರ್ದಿಷ್ಟವಾದ ವರ್ಗವನ್ನು . . . ಬಹುಶಃ ಯೆಹೂದ್ಯರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನು ಎಂಬದೆ."[1]

ಬಳಿಕ ಪೌಲನು ಏಕೆ ಕೆಲವು ಜನರು ತನ್ನ ಸಾರುವಿಕೆಗೆ ಅಷ್ಟೊಂದು ದೃಢವಾಗಿ ವಿರೋಧ ಮಾಡುತ್ತಿದ್ದರೆಂಬುದನ್ನು ವಿವರಿಸುತ್ತಾನೆ, **ಎಲ್ಲರಲ್ಲಿ ಕ್ರಿಸ್ತನಂಬಿಕೆಯಿಲ್ಲವಲ್ಲಾ.** Henry Alford ಹೇಳದ ರೀತಿಯಲ್ಲಿ, ಈ ಪದಗುಚ್ಛವನ್ನು ಹೀಗೆ ಭಾವಾನುವಾದಗೊಳಿಸಬಹುದು, "(ಕ್ರೈಸ್ತ) ನಂಬಿಕೆಯು ಎಲ್ಲಾ ಮನುಷ್ಯರಿಗೂ ಸೇರಿದ್ದಲ್ಲವಲ್ಲಾ."[2] ಪೌಲನು ಬಹುಶಃ "ನಂಬಿಕೆ" ಎಂಬ ಪದವನ್ನು ಕ್ರೈಸ್ತೀಯ ಬೋಧನೆಗಳ ಮುಖ್ಯಭಾಗವನ್ನು ಸೂಚಿಸುವದಕ್ಕೆ ಬಳಸಿರಬಹುದಾಗಿದೆ (ರೋಮಾ 1:5 ರೊಂದಿಗೆ ಹೋಲಿಸಿರಿ). ಸಂದೇಶವು ಎಲ್ಲಾ ಮನುಷ್ಯರಿಗೂ ತಿಳಿಸಲ್ಪಡುತ್ತದೆ (ತೀತನಿಗೆ 2:11), ಆದರೆ ಎಲ್ಲಾ ಮನುಷ್ಯರೂ ಅದನ್ನು ಅಂಗೀಕರಿಸುವದಿಲ್ಲ (2 ತಿಮೊಥೆ 3:8, 9). ಮನುಷ್ಯನು ಸುವಾರ್ತೆಯ ಸಂದೇಶವನ್ನು ಅಂಗೀಕರಿಸುವ ಅಥವಾ ಅದನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹೊಂದಿದ್ದಾನೆ. ಹಾಗೆ ಮಾಡುವದಕ್ಕೆ "ಇಷ್ಟವುಳ್ಳವನು" ಮಾತ್ರವೇ (ಪ್ರಕಟನೆ 22:17) "ನಂಬಿಕೆ"ಯನ್ನು ಸ್ವೀಕರಿಸಿಕೊಳ್ಳುವನು. ಮಿಕ್ಕವರು ಅದನ್ನು ತಿರಸ್ಕರಿಸುವರು ಮತ್ತು ವಿರೋಧಿಸುವರು. ಪೌಲನು ಅದನ್ನು ವಿರೋಧಿಸುವವರ ಕುತಂತ್ರಗಳಿಂದ ತಪ್ಪಿಸಲ್ಪಡಬೇಕೆಂದು ಹಾರೈಸಿದನು.

# ಕರ್ತನಲ್ಲಿ ಮತ್ತು ಥೆಸಲೋನಿಕದವರಲ್ಲಿ ಭರವಸೆಯಿರುವದೆಂಬ ಒಂದು ಹೇಳಿಕೆ (3:3–5)

**[3]ಆದರೆ ಕರ್ತನು ನಂಬಿಗಸ್ತನು; ಆತನು ನಿಮ್ಮನ್ನು ದೃಢಪಡಿಸಿ ನೀವು ಕೆಡುಕನ ಕೈಗೆ ಸಿಕ್ಕದಂತೆ ಕಾಪಾಡುವನು. [4]ನಾವು ಆಜ್ಞಾಪಿಸುವ ಪ್ರಕಾರ ನೀವು ಮಾಡುತ್ತೀರೆಂತಲೂ ಮುಂದೆಯೂ ಮಾಡುವಿರೆಂತಲೂ ನಿಮ್ಮ ವಿಷಯದಲ್ಲಿ ಕರ್ತನ ಮೂಲಕವಾಗಿ ನಮಗೆ ಭರವಸವುಂಟು. [5]ದೇವರ ಪ್ರೀತಿಯಲ್ಲಿಯೂ ಕ್ರಿಸ್ತನ ತಾಳ್ಮೆಯಲ್ಲಿಯೂ ಸೇರುವಂತೆ ಕರ್ತನೇ ನಿಮ್ಮನ್ನು ನಡಿಸಲಿ.**

**ವಚನ 3.** ಪೌಲನು ಮೂರ್ಖರು ಮತ್ತು "ದುಷ್ಟಜನರ" (ವ. 2) ಮತ್ತು ದೇವರ ಸೇವಕರನ್ನು ವಿರೋಧಿಸುವ ಅವರ ಅಧಿಕಾರಗಳ ಬಗ್ಗೆ ಯೋಚನೆಯನ್ನು ಮಾಡುತ್ತಿರುವಾಗ, **ಕರ್ತನು** ಆ ದುಷ್ಟಜನರು ಮತ್ತು ಅವರ ಯಜಮಾನನಾದ ಸೈತಾನನಿಗಿಂತಲೂ ಹೆಚ್ಚು ಬಲಿಷ್ಠನಾಗಿದ್ದಾನೆಂದು ಜ್ಞಾಪಿಸಿಕೊಂಡನು. ಅಷ್ಟುಮಾತ್ರವಲ್ಲದೆ, ಕರ್ತನು ಬಲಿಷ್ಠನು ಆಗಿರುವದು ಮಾತ್ರವೇ ಅಲ್ಲ; ಆತನು **ನಂಬಿಗಸ್ತನು** ಸಹ ಆಗಿದ್ದಾನೆ. ಅಂದರೆ, ಆತನು ತನ್ನ ವಾಗ್ದಾನಗಳಿಗೆ ನಂಬಿಗಸ್ತನಾಗಿರುವಂತ ವ್ಯಕ್ತಿಯಾಗಿದ್ದಾನೆ. ಮನುಷ್ಯರು ತಮ್ಮ ವಾಗ್ದಾನಗಳನ್ನು ಕಾಪಾಡಿಕೊಳ್ಳದೆ ಇರಬಹುದು, ಆದರೆ ದೇವರು ಯಾವಾಗಲೂ ಕಾಪಾಡಿಕೊಳ್ಳುತ್ತಾನೆ (1 ಕೊರಿಂಥ 1:9; 2 ಕೊರಿಂಥ 1:18; 1 ಥೆಸಲೋನಿಕ 5:24).

I. Howard Marshall ಗಮನಕ್ಕೆ ತರುವದೇನೆಂದರೆ "ಇಲ್ಲಿ 'ನಂಬಿಕೆ' ಮತ್ತು 'ನಂಬಿಗಸ್ತನು' ಎಂಬ ಪದಗಳ ನಡುವೆ ಶಬ್ದಾಡಂಬರವಿರುತ್ತದೆ."[3] 2ನೇ ವಚನದ ಅಂತ್ಯದಲ್ಲಿ, ಪೌಲನು ಎಲ್ಲರಲ್ಲಿಯೂ ಕ್ರಿಸ್ತ "ನಂಬಿಕೆಯಿಲ್ಲವಲ್ಲಾ" πίστις (*pistis*) ಎಂಬ ವಾಸ್ತವಾಂಶದ ಬಗ್ಗೆ ಮಾತಾಡಿದನು ಮತ್ತು 3ನೇ ವಚನವನ್ನು "ನಂಬಿಗಸ್ತನು" πιστός (*pistos*) ಎಂಬ ಪದದಿಂದ ಆರಂಭಿಸುತ್ತಾನೆ, ಕರ್ತನು "ನಂಬಿಗಸ್ತನು" ಎಂಬುದನ್ನು ಸೂಚಿಸುತ್ತಾನೆ. ಎಲ್ಲರಲ್ಲಿಯೂ "ನಂಬಿಕೆ" ಇಲ್ಲ ಆದರೆ ದೇವರು ಯಾವಾಗಲೂ "ನಂಬಿಗಸ್ತನು." ಪೌಲನು ಇದಕ್ಕೆ ಹೋಲಿಕೆಯಾದ ಪದವನ್ನು ಆಗಾಗ್ಗೆ ಬಳಸಿದನು (1 ಥೆಸಲೋನಿಕ 5:24ರೊಂದಿಗೆ ಹೋಲಿಸಿರಿ).

ಆದುದರಿಂದ, ಆತನು "ನಂಬಿಗಸ್ತನು" ಆಗಿರುವದರಿಂದ ಥೆಸಲೋನಿಕದವರಿಗೆ ಸಹಾಯವನ್ನು ಮಾಡುವನು. 1 ಮತ್ತು 2 ವಚನಗಳಲ್ಲಿನ ಪ್ರಾರ್ಥನೆಯು ಪೌಲನಿಗೋಸ್ಕರವಾಗಿತ್ತಾದ್ದರಿಂದ, ಕರ್ತನು ತನ್ನನ್ನು ಕಾಪಾಡುವನೆಂಬದಾಗಿ ಆತನು ಹೇಳುವನೆಂದು ನಾವು ಎದುರು ನೋಡಬಹುದು, ಆದರೆ ಬದಲಾಗಿ, ಆತನು ಥೆಸಲೋನಿಕದವರ ಆತ್ಮೀಕ ಹಿತಾಸಕ್ತಿಯ ಬಗ್ಗೆ ಅತಿಯಾದ ಕಳಕಳಿಯನ್ನು ಹೊಂದಿದ್ದರಿಂದ ದೇವರು ಅವರಿಗೆ ಹೇಗೆ ಸಹಾಯ ಮಾಡುವನು ಎಂದು ಹೇಳುವದಕ್ಕೆ ಮಾತನ್ನು ಬದಲಾಯಿಸುವಂತೆ ಮಾಡಿತ್ತು. ನಿರ್ದಿಷ್ಟವಾಗಿ ಈ "ನಂಬಿಗಸ್ತ" ಕರ್ತನು ಅವರನ್ನು **ದೃಢಪಡಿಸುವನು.** ಇಲ್ಲಿ ಬಳಸಲಾಗಿರುವ ಗ್ರೀಕ್ ಪದವು στηρίζω (*stērizō*), ಇದರರ್ಥವು "ನೆಲೆಗೊಳಿಸುವದು, ಸ್ಥಿರಪಡಿಸುವದು, ಆಸರೆಯೊಂದನ್ನು, ಒಂದು ಆಧಾರವನ್ನು

ನೀಡುವದು" ಎಂಬದು. ಒಟ್ಟಾರೆಯಾದ ಯೋಚನೆಯು ಏನೆಂದರೆ ಯಾವದೋ ಒಂದನ್ನು ಪ್ರವಾಹದ ವೇಳೆ ಹಾಕುವ ಮರಳಿನ ಚೀಲಗಳಂತಹ ಭಾರವಾದ ಒತ್ತಡದಿಂದ ಕುಸಿದು ಬೀಳದಂತೆ ತಡೆಯುವದು ಎಂದಾಗಿರುತ್ತದೆ. ಯೇಸುವು "ಯುಗದ ಸಮಾಪ್ತಿಯ ವರೆಗೂ" ತನ್ನ ಶಿಷ್ಯರ ಸಂಗಡ ಇರುವದಾಗಿ ವಾಗ್ದಾನ ಮಾಡಿದ್ದನು (ಮತ್ತಾಯ 28:20), ಮತ್ತು ಆತನು, ಅಂದರೆ ಯೇಸುವು, ಜಯಶಾಲಿಗಳಾಗುವಂತೆ ಅವರಿಗೆ ಸಹಾಯ ಮಾಡುವದಕ್ಕಾಗಿ ಅವರನ್ನು ಬಲಗೊಳಿಸುವ ಮೂಲಕ ತನ್ನ ಆ ವಾಗ್ದಾನವನ್ನು ಕಾಪಾಡಿಕೊಳ್ಳಲು "ನಂಬಿಗಸ್ತ" ಆಗಿರುವನೆಂದು ಪೌಲನು ಹೇಳುತ್ತಾನೆ.

"ನಂಬಿಗಸ್ತ" ಕರ್ತನು ಮಾಡುವನೆಂದು ಪೌಲನು ಹೇಳಿದ ಇನ್ನೊಂದು ಕಾರ್ಯವೇನೆಂದರೆ ಅತನು ಥೆಸಲೋನಿಕದವರನ್ನು **ಕಾಪಾಡುವನು** ಅಥವಾ ಅವರಿಗೆ "ಕಾವಲಿರುವನು" (RSV). ಪೇತ್ರನು 1 ಪೇತ್ರ 1:5ರಲ್ಲಿ ಕ್ರೈಸ್ತರು "ನಂಬಿಕೆಯ ಮೂಲಕ ದೇವರ ಬಲದಿಂದ ಕಾಪಾಡಲ್ಪಡುತ್ತಾರೆ" (NIV), ಮತ್ತು ಪೌಲನು 1 ಕೊರಿಂಥ 10:13ರಲ್ಲಿ ಒತ್ತಿ ಹೇಳಿದ್ದೇನೆಂದರೆ ದೇವರು "[ನಮಗೆ] ಸಹಿಸಿಕೊಳ್ಳಬಹುದಾದದ್ದಕ್ಕಿಂತಲೂ ಅಧಿಕವಾಗಿ ಶೋಧನೆಗೊಳಗಾಗುವ ಹಾಗೆ [ನಮ್ಮನ್ನು] ಬಿಡುವದಿಲ್ಲ" (NIV). ಶೋಧನೆಯನ್ನು ಎದುರಿಸುವದಕ್ಕೆ ಪ್ರತಿಯೊಬ್ಬ ವ್ಯಕ್ತಿಗೆ ಎಷ್ಟು ಸಾಮರ್ಥ್ಯವಿದೆಯೆಂಬುದನ್ನು ದೇವರು ತಿಳಿದವನಾಗಿದ್ದಾನೆ ಮತ್ತು ನಮಗೆ ಅತ್ಯಂಥ ಬಲಿಷ್ಠವೆಂದೆಣಿಸುವ ಯಾವ ಶೋಧನೆಯೂ ನಮ್ಮನ್ನು ಬಾಧಿಸದಂತೆ ನೋಡಿಕೊಳ್ಳುವವನಾಗಿ ನಮ್ಮನ್ನು "ಕಾಪಾಡುವದಕ್ಕೆ" ನಮ್ಮೊಂದಿಗಿರುವನು ಎಂಬುದನ್ನು ಈ ಸತ್ಯವು ತೋರ್ಪಡಿಸುತ್ತದೆ. ದೇವರು ಅತ್ಯಂಥ ಬಲವಾಗಿರುವ ಶೋಧನೆಗಳಿಂದ ನಮ್ಮನ್ನು "ಕಾಪಾಡುವನು" ಮತ್ತು ಬಲಿಷ್ಠವಲ್ಲದ ಶೋಧನೆಗಳನ್ನು ನಿಭಾಯಿಸುವಂತೆ ನಮ್ಮನ್ನು "ದೃಢಪಡಿಸುವನು" ಎಂಬದು ಬಹುಶಃ ಪೌಲನ ತಾತ್ಪರ್ಯವಾಗಿತ್ತು.

ಈ ಶೋಧನೆಗಳ ಮೂಲ ಯಾವದು ಅಥವಾ ಯಾರು ಆಗಿದ್ದಾರೆ? ಅದು **ಕೆಡುಕನು** ಎಂದು ಪೌಲನು ಹೇಳುತ್ತಾನೆ. ಗ್ರೀಕ್‌ನ πονηρός (*ponēros*) ಎಂಬ ಪದವನ್ನು "ಕೇಡಿನಿಂದ" ಇಲ್ಲವೆ "ಕೆಡುಕನಿಂದ" ಎಂದಾಗಲಿ ಅನುವಾದಿಸಬಹುದಾಗಿದೆ. ಬೇರೆ ಕಡೆಗಳಲ್ಲಿ ಪೌಲನ ಬರಹಗಳಿಂದ ನೋಡುವದಾದರೆ ಎರಡನೆಯದ್ದು ಸಂಭಾವ್ಯವಾಗಿರುತ್ತದೆ (2 ಥೆಸಲೋನಿಕ 2; ಎಫೆಸ 6:16). ಖಂಡಿತವಾಗಿಯೂ, ಕೆಡುಕನು ಸೈತಾನನೇ.

**ವಚನ 4.** 3ನೇ ವಚನದಲ್ಲಿ, ಪೌಲನು ಕರ್ತನ ಸಹಾಯ ದೊರಕುವದೆಂದು **ಭರವಸ** ವ್ಯಕ್ತಪಡಿಸುತ್ತಾನೆ. ಅಲ್ಲದೆ ಇಲ್ಲಿ, ಥೆಸಲೋನಿಕದವರು ತಾವು ಮಾಡಬೇಕಾದದ್ದರಲ್ಲಿ ನಿಷ್ಠೆಯಿಂದಿರುತ್ತಾರೆಂಬುದರಲ್ಲಿ ಸಹ ಪೌಲನು "ಭರವಸ" ವ್ಯಕ್ತಪಡಿಸಿದನು. ಈ ಕಾರ್ಯದಲ್ಲಿ ಅವರ ಪಾತ್ರವು ದೇವರಿಗೆ ಮತ್ತು ಆತನ ವಾಕ್ಯಕ್ಕೆ ವಿಧೇಯರಾಗುವದು ಆಗಿತ್ತು (ಇಬ್ರಿಯ 5:9). ಈ ಸಂದರ್ಭದಲ್ಲಿ, ಮನುಷ್ಯರಿಗಾಗಿ ದೇವರ ವಾಕ್ಯವು ಪ್ರೇರಿತ ವ್ಯಕ್ತಿಯಾದ ಪೌಲನಿಂದ ಕೊಡಲ್ಪಡುತ್ತಿದೆ (1 ಕೊರಿಂಥ 14:37 ರೊಂದಿಗೆ ಹೋಲಿಸಿರಿ). ಹೀಗೆ ಅವರು ತಮಗೆ ಹೇಳಲ್ಪಟ್ಟದ್ದನ್ನು ಮಾಡುವ ಹಂಗಿನಲ್ಲಿದ್ದರು. ಪೌಲನು ಹೇಳಿದ ಹಾಗೆ, ಅವರು **ನಾವು ಆಜ್ಞಾಪಿಸಿರುವ ಪ್ರಕಾರ** ಮಾಡಬೇಕಾಗಿತ್ತು.

"ಭರವಸ" ಎಂಬುದು ಗ್ರೀಕ್ ನ πεποίθαμεν (*pepoithamen*) ಎಂಬ ಪದದಿಂದ ಬಂದಿರುತ್ತದೆ. ಅದು "*peithō,* ಮನವೊಲಿಸು ಎಂಬುದರ ದ್ವಿತಿಯ ಪೂರ್ಣವಾಚಕ ನಿಶ್ಚಯಾರ್ಥಕವಾಗಿದ್ದು, ಈ ಕಾಲರೂಪದಲ್ಲಿ ಅಕರ್ಮಕ, ನಾವು ಒಂದು ಭರವಸೆಯ ಸ್ಥಿತಿಯಿದ್ದೇವೆ."[4] ಅಂದರೆ, ಥೆಸಲೋನಿಕದವರು ಆತನ ಆಜ್ಞೆಗಳಿಗೆ ವಿಧೇಯರಾಗುವರು ಎಂಬ ಭರವಸೆ ಮತ್ತು ಮನವೊಲಿಕೆಯನ್ನು ಪೌಲನು ಹೊಂದಿದ್ದನು. ತಾನು ಆಜ್ಞಾಪಿಸಿದ್ದನ್ನು ಅವರು **ಮಾಡುತ್ತಾರೆಂತಲೂ ಮುಂದೆಯೂ ಮಾಡುವರೆಂತಲೂ** ಆತನಿಗಿದ್ದ ಭರವಸವು ಅವರ ಪರಿವರ್ತನೆಯು ನಿಜವಾಗಿಯೂ ಸತ್ಯವಾದದ್ದಾಗಿತ್ತೆಂದು ಆತನಿಗಿದ್ದ ನಂಬಿಕೆಯಲ್ಲಿ ಬೇರೂರಿದ್ದಾಗಿತ್ತು (1 ಥೆಸಲೋನಿಕ 1:1). ಪುನಃ, ಆತನು ಸಹೋದರರಿಗೆ ಆಜ್ಞಾಪಿಸುವದು ಕಂಡು ಬರುತ್ತದೆ.

ಅವರು ಸರಿಯಾದದ್ದನ್ನೇ ಮಾಡುವರೆಂಬ ಪೌಲನ ಭರವಸೆಯು **ಕರ್ತನ ಮೂಲಕವಾಗಿ** ಆಗಿತ್ತು ಯಾಕೆಂದರೆ ಆತನು ತನ್ನ ಸಹೋದರರನ್ನು ಕರ್ತನ ಭರವಸೆಯ ಮೂಲಕ ನೋಡಿದನು. ನಾವು ಕ್ರಿಸ್ತನ ನಿರ್ದೇಶನಗಳನ್ನು ಅಂಗೀಕರಿಸಿಕೊಳ್ಳುವಾಗ ಮತ್ತು ಆತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ, ನಾವು ಬೇರೆ ಜನರನ್ನು ವ್ಯತ್ಯಾಸವಾಗಿ ಕಾಣುವದಕ್ಕಾರಂಭಿಸುವೆವು, ಅವರ ಮೂಲಕ ದೇವರು ಏನು ಮಾಡಲಿರುವನೆಂಬುದರ ಕಾರಣದಿಂದ ಬೇರೆಯವರಲ್ಲಿ ಹೆಚ್ಚು ಭರವಸವನ್ನಿಡುವವರಾಗುತ್ತೇವೆ.

ಹೇಗೂ, ಥೆಸಲೋನಿಕದ ಸಹೋದರರು ಅವರಿಗೆ ಕೊಡಲ್ಪಟ್ಟಿರುವ ಆಜ್ಞೆಗೆ (ವ. 6) ಸಂಬಂಧಿಸಿದಂತೆ ತಮ್ಮ ಕ್ರೈಸ್ತೀಯ ಶ್ರದ್ಧಾಘೋಷಣೆಗೆ ತಕ್ಕಂತೆ ನಡೆದುಕೊಳ್ಳಬೇಕೆಂಬ ಒಂದು ಪರೋಕ್ಷ ಬುದ್ಧಿವಾದವಾಗಿ ಸಹ ಈ ವಚನವು ಇರುತ್ತದೆ. ವಾಸ್ತವಾಂಶದಲ್ಲಿ, "ಆಜ್ಞೆ" ಎಂಬುದಕ್ಕಿರುವ ಅದೇ ಗ್ರೀಕ್ ಕ್ರಿಯಾಪದವು, παραγγέλλω (*parangellō*), 6, 10, ಮತ್ತು 12 ವಚನಗಳಲ್ಲಿ ಬಳಸಲ್ಪಟ್ಟಿರುತ್ತದೆ.

**ವಚನ 5.** ಈ ವಚನದಲ್ಲಿ, ಥೆಸಲೋನಿಕದವರ **ಹೃದಯಗಳ** ಸ್ಥಿತ್ಯಂತರವನ್ನು ದೇವರ ಪ್ರೀತಿಯಲ್ಲಿ **ಕರ್ತನೇ ನಡಿಸಲಿ**, ಅಥವಾ "ಸರಾಗ ಮಾಡಲಿ" ಎಂಬ ಒಂದು ಕ್ಲುಪ್ತ ಪ್ರಾರ್ಥನೆಯನ್ನು ಉಚ್ಚರಿಸುತ್ತಾನೆ. "ಹೃದಯ" ಎಂಬುದಕ್ಕೆ ಗ್ರೀಕ್ ಪದವು καρδία (*kardia*) ಎಂದಾಗಿದ್ದು ಅದು ಸಾಮಾನ್ಯವಾಗಿ ಒಟ್ಟಾರೆ ಆಂತರ್ಯದ ಜೀವನದ ಆಲೋಚನೆಗಳನ್ನು, ಚಿತ್ತ, ಮತ್ತು ಭಾವಗಳನ್ನು ಸೂಚಿಸುತ್ತದೆ. ಈ ದಾರಿಯು **ದೇವರ ಪ್ರೀತಿಯಲ್ಲಿ** ನಡೆಸುತ್ತದೆ. "ಪ್ರೀತಿ" ಎಂಬುದು ಇಲ್ಲಿ ನಮ್ಮ ಮೇಲೆ ದೇವರು ಇಟ್ಟಿರುವ ಪ್ರೀತಿಯನ್ನಾಗಲಿ ಅಥವಾ ದೇವರ ಮೇಲೆ ನಾವು ಇಟ್ಟಿರುವ ಪ್ರೀತಿಯನ್ನಾಗಲಿ ಸೂಚಿಸುತ್ತದೆ. ನಾವು ದೇವರ ಪ್ರೀತಿಯಲ್ಲಿ ನೆಲೆಗೊಂಡಿದ್ದರೆ ನಮ್ಮಲ್ಲಿ ದೇವರ ಮೇಲೆ ಪ್ರೀತಿಯನ್ನು ಹುಟ್ಟಿಸುತ್ತದೆಂಬ ಅರ್ಥದಲ್ಲಿ ಅದು ಎರಡೂ ಆಗಿರಬಹುದಾಗಿದೆ. ದಾರಿಯು **ಕ್ರಿಸ್ತನ ತಾಳ್ಮೆಯಲ್ಲಿಯೂ** ನಡೆಸುತ್ತದೆ, ಅಂದರೆ ವಿರೋಧಗಳ ಮಧ್ಯದಲ್ಲಿ ಮತ್ತು ಮರಣವನ್ನು ಎದುರಿಸಬೇಕಾದಾಗ್ಯೂ ಕ್ರಿಸ್ತನು ತೋರಿದಂತಹ ಒಂದು ವಿಧವಾದ ತಾಳ್ಮೆಯಲ್ಲಿ ಸೇರಿಸುತ್ತದೆ.

ಈ ವಚನದಲ್ಲಿನ "ದೇವರ ಪ್ರೀತಿ" ಕುರಿತಾಗಿ ಮಾತಾಡುತ್ತಾ John Stottನು

ಅಭಿಪ್ರಾಯ ವ್ಯಕ್ತಪಡಿಸಿದ್ಧೇನೆಂದರೆ ಎರಡು ಷಷ್ಠೀ ವಿಭಕ್ತಿಯಗಳನ್ನು ವಿಶೇಷಣಗಳೆಂದು ಪರಿಗಣಿಸಿದರೆ ಉತ್ತಮವಾಗಿರುತ್ತದೆ ಎಂಬದೆ. ಆತನು ಹೇಳಿದ್ದೇನೆಂದರೆ, "ಕರ್ತನು ಥೆಸಲೋನಿಕದವರನ್ನು ದೇವರ ಪ್ರೀತಿಯಂತಹ ಪ್ರೀತಿಯಲ್ಲಿ ಮತ್ತು ಕ್ರಿಸ್ತನ ತಾಳ್ಮೆ ಅಥವಾ ಸ್ಥಿರತೆಯಲ್ಲಿ ನಡಿಸಲಿ ಎಂಬದು ಪೌಲನ ಪ್ರಾರ್ಥನೆ ಆಗಿತ್ತು. ಆಗ ಅವರು ತಮ್ಮ ವಿಧೇಯತೆಯಲ್ಲಿ ಆ ಪ್ರೀತಿಯನ್ನು ಮತ್ತು ತಾಳ್ಮೆಯನ್ನು ತೋರ್ಪಡಿಸುವರು ಎಂಬದಾಗಿ ಸನ್ನಿವೇಶವು ಸೂಚಿಸುತ್ತದೆ" ಎಂದು ಆತನು ಹೇಳುತ್ತಾನೆ.[5]

ಸಾರಭೂತವಾಗಿ, ಥೆಸಲೋನಿಕದವರು ಕಷ್ಟಗಳು ಮತ್ತು ಹಿಂಸೆಯ ಹೊರತಾಗಿಯೂ ಕ್ರೈಸ್ತರಾಗಿ ತಾಳ್ಮೆಯಿಂದ ಮುನ್ನಡೆಯುವದಕ್ಕೆ ಉತ್ತೇಜನವನ್ನು ಪಡೆದುಕೊಳ್ಳುವಷ್ಟರ ಮಟ್ಟಿಗೆ ದೇವರ ಪ್ರೀತಿಯ ಕುರಿತು ಧ್ಯಾನವನ್ನು ಮಾಡಬೇಕೆಂಬುದು ಪೌಲನ ಪ್ರಾರ್ಥನೆಯಾಗಿತ್ತು.

## ಅಕ್ರಮವಾಗಿ ನಡೆಯುವ ಸದಸ್ಯರ ವಿಷಯದಲ್ಲಿ ನಡೆದುಕೊಳ್ಳಬೇಕಾದ ಆಜ್ಞೆಗಳು (3:6–15)

**6ಸಹೋದರರೇ, ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ. 7ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ; ನಾವು ನಿಮ್ಮಲ್ಲಿ ಅಕ್ರಮವಾಗಿ ನಡೆಯಲಿಲ್ಲ; 8ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ಊಟ ಮಾಡಲಿಲ್ಲ; ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ದುಡಿದು ಜೀವನಮಾಡಿಕೊಂಡೆವು. 9ನಿಮ್ಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ, ನೀವು ನಮ್ಮನ್ನು ಅನುಸರಿಸುವದಕ್ಕಾಗಿ ನಿಮಗೆ ಮಾದರಿಯಾಗಿರೋಣವೆಂದೇ ಮಾಡಿದೆವು. 10ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ-ಕೆಲ ಮಾಡಲೊಲ್ಲದವನು ಊಟಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ. 11ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆ ಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ. 12ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ. 13ಸಹೋದರರೇ, ನೀವಾದರೋ ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳಬೇಡಿರಿ. 14ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತು ಇಟ್ಟುಕೊಂಡು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ. 15ಆದರೂ ಅವನನ್ನು ವೈರಿಯೆಂದು ಎಣಿಸದೆ ಸಹೋದರರೆಂದು ಎಣಿಸಿಕೊಂಡು ಬುದ್ಧಿಹೇಳಿರಿ.**

**ವಚನ 6. ನಿಮಗೆ ಆಜ್ಞಾಪಿಸುತ್ತೇವೆ**, ಎಂದು ಪೌಲನು ಹೇಳುತ್ತಾನೆ, ಯಾಕೆಂದರೆ ಆತನು ಹೇಳಿದಾಗ ಅವರು ಅದಕ್ಕೆ ವಿಧೇಯರಾಗುವರೆಂಬ ಭರವಸೆಯು ಆತನಿಗಿತ್ತು. ಹೀಗೆ

ಆತನು ಈ "ಆಜ್ಞಾಪಣೆ" ಅಥವಾ ಅಧಿಕಾರಯುತವಾದ ಅಪ್ಪಣೆಯನ್ನು ಕೊಡುತ್ತಾನೆ. ಆಜ್ಞೆಯನ್ನು ಕೊಡುವವನು ಪೌಲನೇ ಆಗಿದ್ದಾನೆ, ಆದರೆ ಆತನು ಅದನ್ನು ಕರ್ತನಿಂದ ಅಧಿಕಾರ ಪಡೆದವನಾಗಿ, **ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ** ಕೊಡುತ್ತಾನೆ. ಪೌಲನು ಆತನ ಸಂದೇಶಕನಾಗಿ ಮಾತಾಡಿದನು (1 ಥೆಸಲೋನಿಕ 2:4-6). ಈ ಆಜ್ಞೆಯನ್ನು ನಿರಾಕರಿಸುವದೆಂದರೆ ಕ್ರಿಸ್ತನನ್ನೇ ನಿರಾಕರಿಸುವಂತೆ ಆಗಿತ್ತು. ಈ ಆಜ್ಞೆಯು ವಾಚಕರಿಗೆ ಮಾತ್ರವೇ ಕೊಡಲ್ಪಟ್ಟಿರಲಿಲ್ಲ, ಆದರೆ ಸಭೆಯಲ್ಲಿದ್ದ **ಸಹೋದರರಿಗೆ** ಸಹ ಕೊಡಲ್ಪಟ್ಟಿತ್ತು. ಪ್ರತಿಯೊಬ್ಬರೂ ಪೌಲನು ಆಜ್ಞಾಪಿಸಿದ ಪ್ರಕಾರವೇ ಮಾಡಬೇಕಿತ್ತು. ಆತನ ಆಜ್ಞೆಯು ಕೆಲವು ಜನರಿಂದ **ದೂರವಾಗಿರಬೇಕೆಂದು** ಆಗಿತ್ತು. KJVಯಲ್ಲಿ "ಅವರಿಂದ ದೂರ ಮಾಡಿಕೊಳ್ಳಿರಿ" ಎಂದಿರುತ್ತದೆ. ಇಲ್ಲಿ ಮುಖ್ಯ ವಿಚಾರವೇನೆಂದರೆ ಅನ್ಯೋನ್ಯತೆ ಅಥವಾ ಸಾಮಾಜಿಕ ಸಂಪರ್ಕ ಇಟ್ಟುಕೊಳ್ಳುವದರಿಂದ ದೂರವಾಗಿರಿ ಎಂಬದೆ.

ದೂರವಾಗಿರಬೇಕಾಗಿದ್ದ ಆ ಜನರು ಯಾರಾಗಿದ್ದರು? ಪೌಲನು **ಅಶಿಸ್ತಿನಿಂದ (ಅಕ್ರಮವಾಗಿ) ನಡೆಯುವ ಪ್ರತಿ ಸಹೋದರನು** ಎಂಬದಾಗಿ ಎತ್ತಿ ತೋರಿಸುತ್ತಾನೆ. KJV ಯಲ್ಲಿ "ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ" ಎಂದಿರುತ್ತದೆ. ಗ್ರೀಕ್ ಪದವಾಗಿರುವ ἀτάκτως (*ataktōs*) ಎಂಬುದನ್ನು KJV "ಅಕ್ರಮವಾಗಿ" ಮತ್ತು NIVಯು "ಸೋಮಾರಿ" ಎಂದು ಅನುವಾದಿಸುತ್ತವೆ, ಆ ಪದಕ್ಕೆ "ಅಕ್ರಮವಾದ" ಎಂಬ ಸಾಮಾನ್ಯ ಅರ್ಥವಿದೆ, ಆದರೆ ಈ ವಚನದಲ್ಲಿ ಅದು "ಬಿಟ್ಟಿಯಾಗಿ ಜೀವಿಸುವವನು" ಅಥವಾ "ಪರೋಪಜೀವಿ" ಎಂಬ ಅರ್ಥವನ್ನು ಹೊಂದಿರುತ್ತದೆ.[6] ಇಲ್ಲಿ ಬಳಸಲಾಗಿರುವ ಪದದ ವಿಯದಲ್ಲಿ A. T. Robertsonನು ಅದೊಂದು "ಮಿಲಿಟರಿ ಪದ, ಪಂಕ್ತಿಯನ್ನು ಬಿಟ್ಟವನು" ಎಂದು ಹೇಳುತ್ತಾನೆ.[7]

ಥೆಸಲೋನಿಕದಲ್ಲಿದ್ದ ಸಮಸ್ಯೆಯ ವಿಷಯದಲ್ಲಿ ನೋಡುವದಾದರೆ, ಸನ್ನಿವೇಶವು ತಿಳಿಸುವ ಪ್ರಕಾರ ನಿರ್ದಿಷ್ಟವಾದ ಅಕ್ರಮವು ಸೋಮಾರಿತನವಾಗಿದೆ. ಸೋಮಾರಿತನದಲ್ಲಿ ಜೀವಿಸುವದೆಂದರೆ **ಹೊಂದಿರುವ ಸಂಪ್ರದಾಯನ್ನು** (ಬೋಧನೆಯನ್ನು) **ಅನುಸರಿರಿ** ಜೀವಿಸುದಕ್ಕೆ ನಿರಾಕರಿಸಿದಂತಾಗುತ್ತದೆ. "ಸಂಪ್ರದಾಯ" ಎಂಬುದರ ಬದಲಾಗಿ, David J. Williams ನು "ಬೋಧನೆಗಳು" ಎಂದು ಹೇಳುತ್ತಾನೆ.[8] ಪೌಲನು ಯಾವ "ಬೋಧನೆ" ಅಥವಾ "ಸಂಪ್ರದಾಯ"ದ ಕುರಿತು ಮಾತಾಡುತ್ತಿದ್ದಾನೆ? ಅದು ಥೆಸಲೋನಿಕದವರು ಪೌಲನಿಂದ **ಹೊಂದಿದ** ಬೋಧನೆಯಾಗಿತ್ತು, ಅಂದರೆ, ಆತನು ಅವರ ಸಂಗಡ ಇದ್ದಾಗ ಮೌಖಿಕವಾಗಿ ಹೇಳಿದ್ದ ಮತ್ತು ಅದನ್ನು ಅವರಿಗೆ ಬರೆದ ಮೊದಲನೆಯ ಪತ್ರಿಕೆಯಲ್ಲಿ ದೃಢಪಡಿಸಿದ್ದ ಸಂಗತಿಗಳಾಗಿದ್ದವು (2:10ರ ಮೇಲಿನ ಚರ್ಚೆಯನ್ನು ನೋಡಿರಿ; ಅಲ್ಲದೆ 1 ಥೆಸಲೋನಿಕ 4:11, 12; 5:12-14 ಸಹ ನೋಡಿರಿ).

ಈ ಸೋಮಾರಿತನವು, ಒಂದು ವಿಧದಲ್ಲಿ, ಕ್ರಿಸ್ತನು ಈಗಾಗಲೇ ಹಿಂದಿರುಗಿ ಬಂದಿದ್ದಾನೆಂಬ ಸುಳ್ಳು ಯೋಚನೆಯ ಕಾರಣದಿಂದ ಆಗಿರಬಹುದಾಗಿದೆ (2:2). ಹೇಗೂ, ನಂಬಿಗಸ್ತ ಸಹೋದರರು ಇದನ್ನು ಇನ್ನು ಸಹಿಸಿಕೊಳ್ಳಬಾರದಿತ್ತು. ಅವರು ಈ ಅಪಕೀರ್ತಿಯನ್ನು ತರುವಂತ ನಡವಳಿಕೆಯನ್ನು ತಿದ್ದುವದಕ್ಕೆ ಸಭೆಯಾಗಿ ಕಾರ್ಯವನ್ನು ಕೈಕೊಳ್ಳಬೇಕಿತ್ತು. ಮೇಲ್ಗಡೆಯಲ್ಲಿ ನೋಡಿದ ಪ್ರಕಾರ, ಅಂಥ ರೀತಿಯಲ್ಲಿ ನಡೆಯುವರಿಗೆ

“ದೂರವಾಗಿರುವ” ಅಥವಾ ಅವರಿಂದ “ಸಂಪರ್ಕ ಕಡಿದುಕೊಳ್ಳುವ” ಮೂಲಕ ಅದನ್ನು ತಿದ್ದಬೇಕಾಗಿತ್ತು. ಈ “ದೂರವಾಗಿರುವಿಕೆ” ಬಗ್ಗೆ 14 ಮತ್ತು 15 ವಚನಗಳಲ್ಲಿ ಇನ್ನಷ್ಟು ಹೆಚ್ಚು ಚರ್ಚೆಯನ್ನು ಮಾಡಲಾಗುವದು.

**ವಚನ 7.** ಪೌಲನಿಂದಾಗಲಿ ಅಥವಾ ಬೇರೆಯವರಿಂದಾಗಿ ನೆನಪಿಸಬೇಕಾದದ್ದಿಲ್ಲದೆ **ನಮ್ಮನ್ನು ಅನುಸರಿಸಿ ಹೇಗೆ ನಡೆಬೇಕೆಂದು ನೀವೇ ಬಲ್ಲಿರಿ** ಎಂಬದಾಗಿ ಪೌಲನು ಹೇಳುತ್ತಾನೆ. “ಬೇಕೆಂದು” ಎಂಬುದು ಒಂದು ಬಹಳ ಬಲವಾದ ಪದವಾಗಿದೆ ಮತ್ತು ಅದನ್ನು “ಮಾಡಲೇಬೇಕು” ಎಂಬದಾಗಿ ಸಹ ಅನುವಾದಿಸಬಹುದು. “ಮಾದರಿ”ಯು ಪೌಲನು ತೋರಿದ ಮಾದರಿಯಾಗಿತ್ತು, ಮತ್ತು ಅದನ್ನು ಅನುಸರಿಸುವದು ಅಗತ್ಯವಾಗಿತ್ತು ಯಾಕೆಂದರೆ ಆತನು ಕ್ರಿಸ್ತನನ್ನು ಅನುಸರಿಸುವವನಾಗಿದ್ದನು (1 ಕೊರಿಂಥ 11:1). ಆತನು ತನ್ನ ಮೂಲಕ ಪರಿವರ್ತನೆಗೊಂಡವರಿಗೆ ಪ್ರಜ್ಞಾಪೂರ್ವಕವಾಗಿಯೇ ತನ್ನ ಮಾದರಿಯನ್ನು ಅನುಸರಿಸಬೇಕೆಂದು ಹೇಳುತ್ತಿದ್ದನು (1 ಥೆಸಲೋನಿಕ 1:6; ಫಿಲಿಪ್ಪಿ 4:9). ನಾವು ಹೀಗೆ ಹೇಳಲು ಸಾಧ್ಯವಾಗುವ ಹಾಗೆ ನಾವು ಜೀವಿಸುತ್ತೇವೋ?

ಇಂದು ಅನೇಕ ಕ್ರೈಸ್ತರಿಗೆ ನೋಡಿ ಅನುಕರಣ ಮಾಡುವದಕ್ಕೆ ಒಳ್ಳೇ “ಮಾದರಿಗಳ” ಅಗತ್ಯವಿದೆ, ಒಂದು ಜೀವನೋಪಾಯಕ್ಕೆ ಸಂಪಾದಿಸಿಕೊಳ್ಳುವದು ಹೇಗೆಂಬ ವಿಷಯದಲ್ಲಿ ಮಾತ್ರವಲ್ಲ, ಆದರೆ ಆತ್ಮೀಕ ಚಟುವಟಿಕೆಗಳಿಗೆ ಸೂಕ್ತವಾದ ಆದ್ಯತೆಯನ್ನು ಕೊಡುವದರಲ್ಲಿ ವಿಶೇಷವಾಗಿ ಮಾದರಿಯ ಅಗತ್ಯವಿದೆ. ಪೌಲನ ಹಾಗೆ, ನಾವು ಗಂಭೀರವಾದ ವಿಷಯಗಳಲ್ಲಿ ಹೆಚ್ಚೆಚ್ಚು ಮಗ್ನರಾಗಿರುವಂತಹ ಜನರೋ? ಅಥವಾ ನಾವು ನಮ್ಮ ಬಹುಪಾಲು ಸಮಯವನ್ನು “ಆಟವಾಡುವದರಲ್ಲಿ” ಪ್ರಯತ್ನಿಸುತ್ತಾ ಕಳೆಯುತ್ತೇವೋ? ಪೌಲನ ಮನಸ್ಸಿನಲ್ಲಿದ್ದ ಮುಖ್ಯವಾದ ಸಂಗತಿಯೇನೆಂದರೆ, ಖಂಡಿತವಾಗಿಯೂ, ಅದು ಒಂದು ಜೀವನೋಪಾಯವನ್ನು ನೋಡಿಕೊಳ್ಳುವದಕ್ಕಾಗಿ ಕೆಲಸ ಮಾಡುವದೇ ಆಗಿತ್ತು. ಆತನು ತೋರಿದ ಮಾದರಿಯು ಸೋಮಾರಿತನಕ್ಕೆ ವಿರುದ್ಧವಾದದ್ದು ಎಂಬದಾಗಿ ಈ ವಚನದಲ್ಲಿ ಆತನು ಹೇಳುತ್ತಾನೆ, ಮತ್ತು 10ನೇ ವಚನದಲ್ಲಿ, ಆತನ ಬೋಧನೆಯು ಸಹ ಅದಕ್ಕೆ ವಿರುದ್ಧವಾದದ್ದೆಂಬದಾಗಿ ಆತನು ಜ್ಞಾಪಕಗೊಳಿಸುತ್ತಾನೆ.

ಥೆಸಲೋನಿಕದಲ್ಲಿ ಪೌಲನು ತೋರಿದ ಮಾದರಿಯ ವಿಷಯದಲ್ಲಿ ನೋಡುವದಾದರೆ, ಆತನು **ಅಶಿಸ್ತಿನಿಂದ ನಡೆಯಲಿಲ್ಲ** (“ಅಕ್ರಮವಾಗಿ”; KJV); ಬದಲಾಗಿ, ಆತನು ಬೇರೆ ಯಾರೇ ಆಗಲಿ ದುಡಿಯುವ ಅಷ್ಟೆ ಗಳಿಗೆಗಳ ವರೆಗೆ ಕೆಲಸ ಮಾಡಿದನು. “ಅಶಿಸ್ತಿನ ರೀತಿಯಲ್ಲಿ” ಎಂಬುದು ἠτακτήσαμεν (*ētaktēsamen*) ಎಂಬ ಗ್ರೀಕ್ ಪದದಿಂದ ಬಂದಿದ್ದು, “ಅದು *atakteō* ಎಂಬ [ಒಂದು] ಹಳೇ ಕ್ರಿಯಾಪದದ ಪ್ರಥಮ ಅನಿಶ್ಚಿತ ಭೂತಕಾಲ ಸಕ್ರಿಯ ನಿಶ್ಚಯಾರ್ಥಕವಾಗಿರುತ್ತದೆ, ಸೈನಿಕರ ಪಂಕ್ತಿಯನ್ನು ಬಿಟ್ಟು ತಪ್ಪುವದು”[9] ಎಂದಾಗಿದೆ (6ನೇ ವಚನದಲ್ಲಿ ಬಳಸಲಾಗಿರುವ ಪದದ ಒಂದು ರೂಪವಾಗಿದೆ). ಪೌಲನ ಜೀವನ ರೀತಿಯು ತಾನು ತಿದ್ದುತ್ತಿರುವ ಆ ಸಹೋದರರ ಹಾಗೆ “ಅಶಿಸ್ತಿನ” ಅಥವಾ “ಅಂಕೆಯನ್ನು ಮೀರಿದ” ಜೀವನವಾಗಿರಲಿಲ್ಲ.

**ವಚನ 8. ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ರೊಟ್ಟಿಯನ್ನು ತಿನ್ನಲಿಲ್ಲ** (ಊಟ ಮಾಡಲಿಲ್ಲ). ತಾನು ಹಾಗೂ ತನ್ನ ಜೊತೆಗೆಲಸದವರು ಸ್ವತಃ ದುಡಿದು ತಮ್ಮ

ಜೀವನೋಪಾಯವನ್ನು ನೋಡಿಕೊಂಡರೆಂಬುದಾಗಿ ಪೌಲನು ಹೇಳಿದನು. "ರೊಟ್ಟಿ" ಎಂಬುದು ಸಾಮಾನ್ಯವಾದ ಆಹಾರ ಆಥವಾ ಊಟವನ್ನು ಬಣ್ಣಿಸುವ ಪದವಾಗಿದೆ (ಮತ್ತಾಯ 6:11ಕ್ಕೆ ಹೋಲಿಸಿರಿ). ರೊಟ್ಟಿ ಎಂಬ ಪದದ ಬಳಕೆಯ ಕುರಿತು Leon Morris ಇನ್ನಷ್ಟು ವಿವರಣೆಯನ್ನು ನೀಡುತ್ತಾನೆ:

> "ರೊಟ್ಟಿಯನ್ನು ತಿನ್ನುವದು" ಎಂಬುದು ಯೆಹೂದ್ಯ ಸಂಬಂಧಿತ ಎಂಬುದು ಸ್ಪಷ್ಟವಾಗಿರುತ್ತದೆ. ಅದರರ್ಥವು ಕೇವಲ "ಒಂದು ಊಟವನ್ನು," ಅಥವಾ "ಊಟಗಳನ್ನು" ಸಹ ಪಡೆಯುವದು ಎಂದಲ್ಲ, ಆದರೆ ಬದಲಾಗಿ "ಒಂದು ಜೀವನೋಪಾಯವನ್ನು ಹೊಂದಿಕೋ" ಎಂದರ್ಥವಾಗಿದೆ (cf. ಆದಿಕಾಂಡ 8:19; ಆಮೋಸ 7:12, ಇತ್ಯಾದಿ). ತಾನು ಎಂದಿಗೂ ಅತಿಥಿ ಸತ್ಕಾರದ ಆಮಂತ್ರಣವನ್ನು ಎಂದಿಗೂ ಸ್ವೀಕರಿಸಿಕೊಳ್ಳಲೇ ಇಲ್ಲ ಎಂದು ಇದರರ್ಥವಲ್ಲ, ಆದರೆ ಆತನು ತನ್ನ ಜೀವನೋಪಾಯಕ್ಕಾಗಿ ಬೇರೆ ಜನರ ಮೇಲೆ ಅವಲಂಬಿತನಾಗಿರಲಿಲ್ಲ ಎಂದರ್ಥವಾಗಿದೆ.[10]

ಭೀಕ್ಷಾಟನೆ ಮಾಡುವ ಬದಲಾಗಿ, ತಾನು **ಹಗಲಿರುಳು . . . ದುಡಿದು** ಜೀವನ ಮಾಡಿದನು (1 ಥೆಸಲೋನಿಕ 2:9; ಅಪೊಸ್ತಲರ ಕೃತ್ಯಗಳು 20:34 ರೊಂದಿಗೆ ಹೋಲಿಸಿರಿ). ಬಹುಶಃ ಆತನು ಗುಡಾರ ತಯಾರಿಸುವ ಕೆಲಸವನ್ನು ಸೂಚಿಸುತ್ತಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 18:3). ಗುಡಾರಗಳನ್ನು ತಯಾರಿಸುವದರ ಜೊತೆಗೆ ಸುವಾರ್ತೆಯನ್ನು ಸಹ ಸಾರಬೇಕಾದರೆ ಆತನು ದೀರ್ಘವಾದ ಗಳಿಗೆಗಳ ಕಾಲ ಕೆಲಸ ಮಾಡಬೇಕಾಗಿತ್ತು. ಆತನ ಸ್ವಾವಲಂಬನೆಯಲ್ಲಿ **ಕಷ್ಟದಿಂದಲೂ ಪ್ರಯಾಸದಿಂದಲೂ** ದುಡಿಯುವದು ಸೇರಿತ್ತು, ಹೀಗೆ ಪೌಲನು ಮತ್ತು ಆತನ ಜೊತೆಗೆಲಸದವರು ಅವರಲ್ಲಿ **ಒಬ್ಬರಿಗೂ ಭಾರವಾಗದೆ** ಇದ್ದರು. "ಪ್ರಯಾಸ" ಎಂಬ ಪದವು κόπος (*kopos*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದು ಬಳಲಿಕೆಯನ್ನುಂಟು ಮಾಡುವಂತಹ ಕಠಿಣ ಪರಿಶ್ರಮವನ್ನು ಸೂಚಿಸುತ್ತದೆ. ಅವರು ತಮ್ಮ ಜೀವನೋಪಾಯವನ್ನು ನೋಡಿಕೊಳ್ಳುವದರ ಜೊತೆಗೆ ತನಗೆ ಸಹ ಸಹಾಯವನ್ನು ಒದಗಿಸುವಂತೆ ಪೌಲನು ಅವರಿಂದ ಎದುರುನೋಡಲಿಲ್ಲ.

**ವಚನ 9.** ಪೌಲನು ತಾನು ಪೂರ್ಣಾವಧಿ ಸುವಾರ್ತೆಯನ್ನು ಸಾರುವಂತಾಗುವ ಹಾಗೆ ಅವರಿಂದ ತನಗೆ ಆರ್ಥಿಕ ಸಹಾಯ ಪಡೆಯುವ **ಹಕ್ಕಿಲ್ಲ** ಎಂಬದಕ್ಕಾಗಿ ಹಾಗೆ ಮಾಡಲಿಲ್ಲ. Hogg ಹೇಳುವದೇನಂದರೆ, "'ಹಕ್ಕು' ಎಂಬುದರ ಅನುವಾದಿತ ಗ್ರೀಕ್ ಪದವಾದ ἐξουσία (*exousia*) ಎಂಬುದು, ಮೊದಲು, ಏನನ್ನಾದರೂ ಮಾಡುವದಕ್ಕಿರುವ ಸ್ವಾತಂತ್ರ್ಯ ಮತ್ತು ನಂತರ ಅದನ್ನು ಮಾಡುವದಕ್ಕೆ ಇರುವ ಅಧಿಕಾರ ಆಗಿರುತ್ತದೆ."[11] ಪೌಲನು ತನ್ನ ಪೂರ್ಣ ಸಮಯವನ್ನು ಆತ್ಮೀಕ ಚಟುವಟಿಕೆಗಳಿಗೆ ಮೀಸಲಿಡುವದಕ್ಕೆ ಮತ್ತು ತನಗೆ ಆರ್ಥಿಕವಾಗಿ ಸಹಾಯ ಮಾಡುವಂತೆ ಸಭೆಯನ್ನು ಕೇಳುವದಕ್ಕೆ "ಹಕ್ಕು" ಹೊಂದಿದ್ದನೆಂಬುದನ್ನು ಸ್ಪಷ್ಟಗೊಳಿಸುವದಕ್ಕೆ ಬಯಸುತ್ತಾನೆ. ಆತನು ಅದನ್ನು ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿ ತಿಳಿಸುತ್ತಾನೆ (2 ಕೊರಿಂಥ 11:8; ಫಿಲಿಪ್ಪಿ 4:16), ಮತ್ತು ಈ ಹಕ್ಕಿನ ಬಗ್ಗೆ ಬೇರೆ ಕಡೆಯಲ್ಲಿ ಬಲವಾಗಿ ಸಮರ್ಥಿಸಿಕೊಳ್ಳುತ್ತಾನೆ (1 ಕೊರಿಂಥ 9:1-14). ಹೇಗೂ, ಸುವಾರ್ತೆಗೆ

ಅಡಚಣೆಯನ್ನು ಉಂಟು ಮಾಡುವದಕ್ಕಿಂತಲೂ ಈ “ಹಕ್ಕ”ನ್ನು ತ್ಯಜಿಸಿ ಬಿಡುವದೇ ಮೇಲು ಎಂದು ಪೌಲನು ಭಾವಿಸಿಕೊಂಡನು (1 ಕೊರಿಂಥ 9:12-15 ರೊಂದಿಗೆ ಹೋಲಿಸಿರಿ). ಆತನು ಅದನ್ನು ಕೊರಿಂಥದಲ್ಲಿ ಮತ್ತು ಥೆಸಲೋನಿಕದಲ್ಲಿ ಪರಿತ್ಯಾಗ ಮಾಡಿದ್ದನು.

ಪೌಲನು ಅವರು **ಅನುಸರಿಸುವದಕ್ಕಾಗಿ ಮಾದರಿಯಾಗಿರೋಣವೆಂದು** ತನ್ನ ಈ “ಹಕ್ಕ”ನ್ನು ಚಲಾಯಿಸದಿರುವದಕ್ಕೆ ತೀರ್ಮಾನಿಸಿಕೊಂಡನು. ಒಂದು ಕಾರ್ಯರೂಪದ ದೃಷ್ಟಿಕೋನದಿಂದ ನೋಡುವದಾದರೆ, “ಮಾದರಿ” (“ಉದಾಹರಣೆ”; RSV) ಎಂಬ ಪದದ ಅರ್ಥವು ಬೇರೆಯವರು ನೋಡಬಹುದಾದ ಮತ್ತು ಅವನಲ್ಲಿ ಕ್ರಿಸ್ತನ ತತ್ವಗಳನ್ನು ಅನ್ವಯಿಸಿಕೊಳ್ಳಲ್ಪಟ್ಟಿರುವದನ್ನು ಕಾಣುವದು ಎಂದಾಗಿದೆ. ಖಂಡಿತವಾಗಿಯೂ, ತಾನೊಬ್ಬ ಪರಿಪೂರ್ಣನಾದ ಮಾದರಿ ಎಂಬದಾಗಿ ಆತನು ಹೇಳಲಿಲ್ಲ, ತಾನು ಹೇಗೆ “ಕ್ರಿಸ್ತನನ್ನು ಉದಾಹರಣೆಯನ್ನು” ಅನುಸರಿಸುತ್ತಾನೋ ಹಾಗೆ ಮಾತ್ರವೇ ಅವನನ್ನು ಅನುಸರಿಸಬೇಕೆಂಬುದೇ ಆತನ ಮನವಿಯಾಗಿತ್ತು (1 ಕೊರಿಂಥ 11:1; NIV). ಪೌಲನು “ಮಾದರಿ” ಆಗರಬೇಕೆಂದು ಪರಿಶ್ರಮ ಪಟ್ಟನು, ಮತ್ತು ಥೆಸಲೋನಿಕದವರು ಆತನನ್ನು “ಅನುಸರಿಸುವರು” ಅಥವಾ “ಅನುಕರಣ” (RSV) ಮಾಡುವರು ಎಂಬುದು ಆತನ ನಿರೀಕ್ಷೆಯಾಗಿತ್ತು. ಆತನು ಹೇಗೆ “ಹಗಲಿರುಳು” ದುಡಿದನು ಎಂಬುದನ್ನು ನೋಡುವರು ಮತ್ತು ತಾವು ಅ ಸಹ ಅದೇ ರೀತಿಯಲ್ಲಿ ನಡೆದುಕೊಳ್ಳುವರು. ಆತನು ಥೆಸಲೋನಿಕದಲ್ಲಿದ್ದ ವೇಳೆಯಲ್ಲಿ, ಬೇರೆಯವರು ಕೆಲಸದಲ್ಲಿ ತೊಡಗಿರುವ ವೇಳೆಯಲ್ಲಿ, ಆತನು ಆರಾಮವಾಗಿ ಕುಳಿತಿರುವದನ್ನು, ವಿಶ್ರಮಿಸಿಕೊಳ್ಳುತ್ತಿರುವದನ್ನು ಅವರು ಎಂದಿಗೂ ಕಂಡಿರಲಿಲ್ಲ. ಒಂದು ಉತ್ತಮ ಮಾದರಿ ಆಗಿರಬೇಕೆಂದು ಆತನು “ಸ್ವಲ್ಪ ಹೆಚ್ಚಾಗಿಯೇ” ಪ್ರಯಾಸ ಪಟ್ಟನು. ವಾಸ್ತವದಲ್ಲಿ, ಪರಿಪಕ್ವವುಳ್ಳ ಕ್ರೈಸ್ತನು, ಸುಮ್ಮನೆ ಕುಳಿತುಕೊಂಡು ತನ್ನ ಕೆಲಸವನ್ನು ಬೇರೆಯವರು ಮಾಡುವದನ್ನು ನೋಡುತ್ತಾ ಇರುವಂತಹ ಸೋಮಾರಿಯಾಗಿ ಎಂದಿಗೂ ಇರುವದಿಲ್ಲ. ಬದಲಾಗಿ, ತನ್ನ ಆರ್ಥಿಕ ಅಗತ್ಯತೆಗಳಿಗಾಗಿ ಅವಶ್ಯವಿದ್ದಲ್ಲಿ ರಾತ್ರಿಗಳೆಲ್ಲಾ ಕೆಲಸ ಮಾಡುವನು, ಮತ್ತು ಆತನು ಬೇರೆಯವರಿಗೆ ಸಹ ಭೌತಿಕವಾಗಿ (ಎಫೆಸ 4:28) ಮಾತ್ರವಲ್ಲದೆ ಆತ್ಮೀಕವಾಗಿ ಸಹ ಸಹಾಯವನ್ನು ಮಾಡುವನು (ಗಲಾತ್ಯ 6:1).

**ವಚನ 10.** ಪೌಲನು ಸಹೋದರರಿಗೆ ಹೀಗೆ ಜ್ಞಾಪಿಸುತ್ತಾನೆ, **ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ . . . ಆಜ್ಞಾಪಿಸಿದೆವಷ್ಟೆ.** ಹಲವಾರು ತಿಂಗಳುಗಳು ಹಿಂದೆ ಥೇಸಲೋನಿಕದಲ್ಲಿ ಪೌಲನು ಸಭೆಯನ್ನು ಸ್ಥಾಪನೆ ಮಾಡುತ್ತಿರುವ ಸಂದರ್ಭದಲ್ಲಿ ಕೆಲಸವಿಲ್ಲದೆ ಪೋಲಿಗಳಾಗಿ ತಿರುಗಾಡುತ್ತಿರುವದರ ಕುರಿತಾಗಿ ಬುದ್ಧಿವಾದ ಹೇಳಿದ್ದನು. “ಆಜ್ಞಾಪಿಸಿದೆವು” ಎಂಬದರ ಕ್ರಿಯಾಪದ ರೂಪವು ಅಪೂರ್ಣವಾದದ್ದು (παρηγγέλλομεν, *parēngellomen*, παραγγέλλω, *parangellō* ಎಂಬದರಿಂದ ಬಂದದ್ದು, “ಆಜ್ಞೆ ಮಾಡುವದು”), ಅದು ಮತ್ತೇ ಮತ್ತೇ ಒಂದು ಆಜ್ಞೆಯನ್ನು ಕೊಡುವದನ್ನು, ಮತ್ತು ಪೌಲನು ಅಲ್ಲಿದ್ದ ವೇಳೆಯಲ್ಲಿ ತಕ್ಕಮಟ್ಟಿಗೆ ಗಂಭೀರವಾದ ಸಮಸ್ಯೆಯೇ ಇತ್ತೆಂಬುದನ್ನು ಸೂಚಿಸುತ್ತದೆ. ಈ ಹೇಳಿಕೆಯು ಕರ್ತನ ಬರೋಣವನ್ನೆ ತಮ್ಮ ಸೋಮಾರಿತನಕ್ಕೆ ಬಹಳ ಇತ್ತೀಚಿನ ನೆಪವನ್ನಾಗಿ ಮಾಡಿಕೊಂಡಿದ್ದ ಕೆಲವು ಸೋಮಾರಿ ಜನರನ್ನು ಸೂಚ್ಯಾರ್ಥವಾಗಿ ಸಹ ತಿಳಿಸಿರುವ ಸಾಧ್ಯತೆಯಿರುತ್ತದೆ. (ಈ ಬೋಧನೆಯ ಬಗ್ಗೆ 1 ಥೆಸಲೋನಿಕ 4:11ರಲ್ಲಿ ನೋಡಿರಿ.)

ಪೌಲನು ತಿಳಿಸುವಂತಹ "ಅಪ್ಪಣೆ" ("ಆಜ್ಞೆ"; RSV) ಯು ಸೋಮಾರಿಯಾಗಿ **ಕೆಲಸ ಮಾಡಲೊಲ್ಲದವನು ಊಟಮಾಡಬಾರದು** ಎಂಬದಾಗಿ ಆಗಿತ್ತು. ಆ ವ್ಯಕ್ತಿಗೆ ಬೇರೆಯವರು ಊಟವನ್ನು ಕೊಡತಕ್ಕದ್ದಲ್ಲ, ಆದರೆ ಆತನನ್ನು ಹಸಿವೆಯಿಂದಿರುವದಕ್ಕೆ ಬಿಡಬೇಕು. ಆ ಸಮಾಜದಲ್ಲಿ ಬಹುಶಃ ಇದು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿದ್ದ ನಿಯಮವಾಗಿತ್ತು, ಆದರೆ ಇದು ಶಾಸ್ತ್ರಗಳಾಧಾರಿತವಾಗಿತ್ತು (ಆದಿಕಾಂಡ 3:19 ರೊಂದಿಗೆ ಹೋಲಿಸಿರಿ). Hogg ಹೀಗೆ ಹೇಳುತ್ತಾನೆ, "ರಬ್ಬಿಗಳು ಅದೇ ರೀತಿಯ ಹೇಳಿಕೆಯೊಂದನ್ನು ಪ್ರಚಲಿತಲ್ಲಿ ಬಳಸುತ್ತಿದ್ದರು, ಅವುಗಳ ನಡುವೆ ಒಂದೇ ಹೋಲಿಕೆಯಿಲ್ಲದಿರಬಹುದೇನೋ; ಅವರಿಗಾದರೋ ಅದು ಆದಿಕಾಂಡ 3:19 ರಿಂದ ಮುರಿದುಕೊಳ್ಳುವಿಕೆಯಾಗಿತ್ತು. ಪೌಲನು ಮೈಗಳ್ಳತನಕ್ಕೆ ಪ್ರೋತ್ಸಾಹ ನೀಡುವ ಮತ್ತು ಪಡೆದುಕೊಳ್ಳುವ ವ್ಯಕ್ತಿಯನ್ನು ಕೀಳುತನಕ್ಕೆ ಇಳಿಸುವಂತಹ ಅಪಾರ್ಥದಿಂದ ಕೂಡಿದ ಧಾನಧರ್ಮದ ಕಾರ್ಯಗಳನ್ನು ನಿಷಿದ್ಧಗೊಳಿಸಿದನು."[12]

ಖಂಡಿತವಾಗಿಯೂ, ಈ ನಿಯಮವು ರೋಗದಲ್ಲಿರುವ ಕಾರಣದಿಂದಾಗಿ ಅಥವಾ ಕೆಲಸವು ಸಿಕ್ಕದ ಕಾರಣದಿಂದಾಗಿ, ಕೆಲಸ ಮಾಡುವದಕ್ಕೆ ಮನಸ್ಸಿದ್ದರೂ ಮಾಡುವದಕ್ಕೆ ಸಾಧ್ಯವಾಗದಂಥವರಿಗಾಗಿ ಅನ್ವಯವಾಗುವದಿಲ್ಲ (ಎಫೆಸ 4:28; ಗಲಾತ್ಯ 6:10 ರೊಂದಿಗೆ ಹೋಲಿಸಿರಿ). ಹೇಗೂ, ಸೋಮಾರಿತನದ ವಿಷಯವಾಗಿದ್ದಲ್ಲಿ, ಅದೊಂದು ಗಂಭೀರವಾದ ಕಾರ್ಯವಾಗಿದ್ದು ಅದರ ವಿರುದ್ಧ ಕ್ರಮವನ್ನು ಕೈಗೊಳ್ಳಲೇಬೇಕು ಎಂಬುದನ್ನು ಪೌಲನು ಸೂಚಿಸುತ್ತಾನೆ.

ಪೌಲ ಮತ್ತು ಆತನ ಜೊತೆಗೆಲಸದವರು ಥೇಸಲೋನಿಕದಲ್ಲಿದ್ದ ವೇಳೆಯಲ್ಲಿ ಅಂತಹ ಸದಸ್ಯರಿಗೆ ಕೆಲಸವನ್ನು ಮಾಡುವಂತೆ ಸತತವಾಗಿ ಆಜ್ಞಾಪಿಸಿದ್ದರು. ಅನಂತರದಲ್ಲಿ, ಪೌಲನು ಅದರ ಕುರಿತಾಗಿಯೇ ಬರೆದಿದ್ದನು (1 ಥೆಸಲೋನಿಕ 4:11). ಈಗ, ಪೌಲನು ಆ ಸಮಸ್ಯೆಯ ಕುರಿತು ಕ್ರಮವನ್ನು ಕೈಕೊಳ್ಳಬೇಕು, ಮತ್ತು ಈ ಆಜ್ಞೆಗೆ ಅವಿಧೇಯರಾಗುವದನ್ನು ಮುಂದುವರೆಸುವವರನ್ನು ಅನ್ಯೋನ್ಯತೆಯಿಂಧ ಹೊರಗಿಡತಕ್ಕದ್ದು ಎಂದು ಬೇಡಿಕೊಳ್ಳುತ್ತಾನೆ (ವ. 14). ಹೇಗೂ, ಅಂಥವರಿಂದ ದೂರವಾಗಬೇಕೆಂದು ಅವರಿಗೆ ಹೇಳುವ ಮುನ್ನ, ಮುಂದಿನ ವಚನದಲ್ಲಿ ಆತನು ಸೋಮಾರಿತನದಿಂದಾಗುವ ಕೆಲವು ದುಷ್ಪರಿಣಾಮಗಳ ಕುರಿತಾಗಿ ಚರ್ಚಿಸುತ್ತಾನೆ.

**ವಚನ 11.** ಅವರು ತಮ್ಮ ಜೀವನೋಪಾಯಕ್ಕೆ ಸಹಾಯ ಮಾಡಿಕೊಳ್ಳಲು ಕೆಲಸ ಮಾಡಬೇಕೆಂದು ತಾನು ಏಕೆ ಒತ್ತಾಯಿಸುತ್ತಿದ್ದೇನೆಂಬುದನ್ನು ಪೌಲನು ಸ್ಪಷ್ಟವಾಗಿ ಹೇಳುತ್ತಾನೆ: [ಥೆಸಲೋನಿಕದವರಲ್ಲಿ] **ಕೆಲವರು . . . ಅಶಿಸ್ತಿನಿಂದ** (ಅಕ್ರಮವಾಗಿ) **ನಡೆಯುತ್ತಾರೆ** ಎಂಬ ಸುದ್ದಿಯನ್ನು ಆತನು ಕೇಳಿದ್ದನು. ಈ ಮಾಹಿತಿಯನ್ನು ತನಗೆ ಕೊಟ್ಟವರು ಯಾರೆಂದು ಆತನು ಹೇಳುವದಿಲ್ಲ, ಆದರೆ ಬಹುಶಃ ಆ ಸುದ್ದಿಯು ಆತನಿಗೆ ಥೆಸಲೋನಿಕದವರಿಗೆ ಮೊದಲನೆಯ ಪತ್ರಿಕೆಯನ್ನು ತಲುಪಿಸಿ ಹಿಂದಿರುಗಿದ ತಿಮೊಥೆಯನು ಕೊಟ್ಟಿರಬೇಕು, ಅಥವಾ ಕೊರಿಂಥಕ್ಕೆ ಪ್ರಯಾಣಿಸಿ ಬಂದಿದ್ದ ಒಬ್ಬ ಥೆಸಲೋನಿಕದವನು ಕೊಟ್ಟಿರಬಹುದು. ಯಾವ ರೀತಿಯಲ್ಲಿಯೇ ಇದ್ದರೂ ಸರಿಯೇ, ಆತನಂತೂ ಅಲ್ಲಿ ಸಮಸ್ಯೆಯು ಮುಂದುವರೆದಿದೆ ಎಂಬುದನ್ನು ಕುರಿತ ವರ್ತಮಾನವನ್ನು ಕೇಳಿದ್ದನು.

ಅವರಲ್ಲಿ ಕೆಲವರು ಈಗಲೂ-ಈ ಎಲ್ಲಾ ಬುದ್ಧಿವಾದಗಳನ್ನು ನೀಡಿದ ಬಳಿಕವೂ- "ಅಶಿಸ್ತಿನಿಂದ," ಅಥವಾ "ಸೋಮಾರಿಗಳು" (NIV) ಆಗಿದ್ದರು. ನಂತರ, ತೀಕ್ಷ್ಣವಾದ ಶಬ್ದಾಡಂಬರದೊಂದಿಗೆ (ಗ್ರೀಕ್ ಭಾಷೆಯಲ್ಲಿ), ಆತನು "ಅವರು ಕೆಲಸದಲ್ಲಿ ತೊಡಗಿದವರಾಗಿರಲಿಲ್ಲ; ಬೇರೆಯವರ ಕೆಲಸಗಳಲ್ಲಿ ತಲೆ ಹಾಕುವವರಾಗಿದ್ದರು" ಎಂದು ಹೇಳುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅವರು ತಮ್ಮ ಸ್ವಂತ ಕೆಲಸಗಳಲ್ಲಿ ನಿರತರಾಗಿರಲಿಲ್ಲ, ಆದರೆ ಅವರು ಯಾವಾಗಲೂ **ಇತರರ ಕೆಲಸಗಳಲ್ಲಿ ತಲೆಹಾಕುವವರು** ಮಾಡುವಂತ ಕಾರ್ಯದಲ್ಲಿ, ಮತ್ತೊಬ್ಬರ ವ್ಯವಹಾರಗಳಲ್ಲಿ "ಮೂಗು ತೂರಿಸುವ" ಕೆಲಸವನ್ನೇ ಮಾಡುತ್ತಿದ್ದರು. ಮೂಲ ಗ್ರೀಕ್ ನಲ್ಲಿರುವ ಶಬ್ದಾಡಂಬರವು "ಅವರು ಕೆಲಸ ಮಾಡುವದಿಲ್ಲ," μηδὲν ἐργαζομένους (*mēden ergazomenous*), ಆದರೆ ಅವರು "ಬೇರೆಯವರ ಕೆಲಸದಲ್ಲಿ ತಲೆ ಹಾಕುವವರು", περιεργαζομένους (*periergazomenous*). ಆ ರೀತಿಯಾದ ವರ್ತನೆಯು ಸಭೆಯಲ್ಲಿ ಸಮಸ್ಯೆಯನ್ನು ಸೃಷ್ಟಿಸುವದು ಯಾಕೆಂದರೆ ಸೋಮಾರಿತನವು ಅನೇಕ ದುಷ್ಪರಿಣಾಮಗಳನ್ನು ಹೊಂದಿದೆ. ಸೋಮಾರಿಗಳು ಸೋಮಾರಿಯಾಗಿರುವದನ್ನು ನಿಲ್ಲಿಸಬೇಕು ಎಂದು ಆಜ್ಞಾಪಿಸುತ್ತಾನೆ, ಮತ್ತು ಅವರು ಈಗಲೂ ಕೆಲಸ ಮಾಡುವದಕ್ಕೆ ನಿರಾಕರಿಸುವದಾದರೆ ಅವರನ್ನು ಶಿಕ್ಷಿಸಬೇಕೆಂದು ಸಭೆಗೆ ಆಜ್ಞೆಯನ್ನು ಕೊಡುತ್ತಾನೆ.

**ವಚನ 12.** ಪೌಲನು ಅಕ್ರಮವಾದ ಜೀವನವನ್ನು ನಡಿಸಿದ ಅಪರಾಧಕ್ಕೊಳಗಾಗಿದ್ದ **ಇಂಥವರ** ಕಡೆಗೆ ತನ್ನ ಗಮನವನ್ನು ತಿರುಗಿಸುತ್ತಾನೆ. ಆತನು ಸಮಸ್ಯೆಯ ಕುರಿತು ಮಾತಾಡುತ್ತಾ, "ವಿನಂತಿಸಿಕೊಳ್ಳುವದರ ಜೊತೆಗೆ ಅಧಿಕಾರಯುತವಾಗಿ" ಸಹ ಹೇಳುತ್ತಾನೆ: **ನಾವು ಆಜ್ಞಾಪಿಸಿ** [ವಚನಗಳು 6, 10ರ ಮೇಲಿನ ಚರ್ಚೆಯನ್ನು ನೋಡಿರಿ] **ಪ್ರಬೋಧಿಸುತ್ತೇವೆ.**[13] ಆತನ ಸಹಚರರು ಅದರಲ್ಲಿ ಸೇರಿದ್ದರು, ಆದರೆ ಒಬ್ಬ ಅಪೊಸ್ತಲನಾಗಿ, ಆಜ್ಞೆಯು ಆತನದ್ದೇ ಆಗಿತ್ತು (2 ಕೊರಿಂಥ 10:8). Marshall ಹೇಳಿದ್ದೇನೆಂದರೆ, "'ಆಜ್ಞಾಪಿಸುತ್ತೇವೆ' (ವಚನಗಳು 4, 6) ಎಂಬುದು ಒಂದು ಕ್ರಿಯಾಪದವಾಗಿದ್ದು ಅದು ಸ್ವತಃ ಒಂದು ಕಡ್ಡಾಯಕ್ಕಿಂತಲೂ ಹುರಿದುಂಬಿಸುವಿಕೆ ಯಾಗಿರುತ್ತದೆ, ಇಲ್ಲಿ ಅದು 'ಪ್ರಬೋಧಿಸುತ್ತೇವೆ' ಎಂಬದರೊಂದಿಗೆ ಜೋಡನೆಯಾಗಿದ್ದು . . . ಒಂದು ಮನವೋಲಿಕೆಯ ಟಿಪ್ಪಣಿ ಪರಿಚಯಿಸುತ್ತದೆ."[14]

ಪೌಲನು ಅವಶ್ಯಕವಾದಲ್ಲಿ ಈ ಜನರನ್ನು ಹೊರಕ್ಕೆ ಹಾಕುವದಕ್ಕೆ ಸಿದ್ಧನಿದ್ದನು ಎಂದು ತೋರುತ್ತಾದಾದರೂ, ಆತನ ನಿಜವಾದ ಬಯಕೆಯು ಅವರನ್ನು ಪುನಃಸ್ಥಾಪಿಸಬೇಕೆಂಬುದೇ ಆಗಿತ್ತು. ಆತನು ಆಜ್ಞಾಪಿಸುವಿಕೆ ಮತ್ತು ಪ್ರಬೋಧಿಸುವವಿಕೆಯನ್ನು **ಕರ್ತನಾದ ಯೇಸು ಕ್ರಿಸ್ತನಲ್ಲಿ** ಅಥವಾ ಕ್ರಿಸ್ತನ ಬೋಧನೆಗಳ (ವ. 4ರ ಮೇಲಿನ ಚರ್ಚೆಯನ್ನು ನೋಡಿರಿ) ಮತ್ತು ಆತನ ಅಧಿಕಾರದಿಂದ ಸನ್ನಿವೇಶದಲ್ಲಿ ಮಾಡಿದನು. ಪೌಲನು ಮಾಡುವಂತೆ ಅವರಿಗೆ ಕೇಳಿಕೊಳ್ಳುತ್ತಿದ್ದ ನಿರ್ದಿಷ್ಟವಾದ ಕಾರ್ಯವೆಂದರೆ **ಮೌನವಾದ ರೀತಿಯಲ್ಲಿ ತಮ್ಮ ಕೆಲಸವನ್ನು** ಮಾಡುವದು, ಅಥವಾ "ತಮ್ಮ ಕೆಲಸವನ್ನು ಶಾಂತವಾಗಿ ಮಾಡುವವರಾಗಿರಬೇಕು" (RSV) ಎಂಬದೆ. ಅವರು "ಬೇಗನೆ ಚಂಚಲರಾಗಬಾರದಿತ್ತು" (2:2), ಆದರೆ ಹೃದಯದಲ್ಲಿ ಶಾಂತತೆ ಮತ್ತು ಪ್ರಶಾಂತಿಯಿಂದ ಇರಬೇಕಿತ್ತು

(1 ಥೆಸಲೋನಿಕ 4:11 ರೊಂದಿಗೆ ಹೋಲಿಸಿರಿ) ಮತ್ತು ಅವರ ರೊಟ್ಟಿಯನ್ನು ಒದಗಿಸುವಂತೆ ಬೇರೆಯವರಿಂದ ಎದುರು ನೋಡುವ ಬದಲಾಗಿ **ತಾವೇ ಸಂಪಾದಿಸಿಕೊಂಡು ಊಟಮಾಡಬೇಕಿತ್ತು.**

**ವಚನ 13.** ಮುಂಚಿನ ವಚನವು ಅಲ್ಪ ಸಂಖ್ಯೆಯಲ್ಲಿದ್ದ ಸೋಮಾರಿಗಳ ಕಡೆಗೆ ಗಮನವನ್ನು ಹರಿಸಿದ್ದರೆ, ಈ ವಚನವು ವಿಧೇಯರಾದ ಬಹು ಸಂಖ್ಯಾತರನ್ನುದ್ದೇಶಿಸಿ ಮಾತಾಡುವದಕ್ಕೆ ಹಿಂದಿರುಗುತ್ತದೆ. ಮತ್ತೊಂದು ಸಾರಿ, ಪೌಲನು ಅವರನ್ನು **ಸಹೋದರರೇ** ಎಂದು ಕರೆಯುತ್ತಾನೆ. ಅವಿಧೇಯರಾದ ಅಲ್ಪಸಂಖ್ಯಾತರು ಏನೇ ಮಾಡಿದರೂ ಸರಿಯೇ, ವಿಧೇಯರಾದ ಸಹೋದರರು ನಿರಾಶೆಗೊಳ್ಳಬಾರದು ಮತ್ತು ಸೋತು ಹೋಗಬಾರದು. ಅವರ ಕರ್ತವ್ಯವು ಸ್ಪಷ್ಟವಾಗಿತ್ತು: **ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳಬೇಡಿರಿ** (ಗಲಾತ್ಯ 6:9 ರೊಂದಿಗೆ ಹೋಲಿಸಿರಿ). “ಬೇಸರಗೊಳ್ಳಬೇಡಿರಿ” ಎಂಬುದು ἐγκακέω (*egkakeō*) ಎಂಬ ಪದದಿಂದ ಬಂದದ್ದು. ಪೌಲನು ಅವರನ್ನು “ತಾಳ್ಮೆಯಲ್ಲಿ ವಿಫಲರಾಗುವ ಅಪಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು” ಪ್ರಬೋಧಿಸುತ್ತಾನೆ.[15]

ಪರಿಪಕ್ವವುಳ್ಳ ಕ್ರೈಸ್ತರು ಸಭೆಯಲ್ಲಾಗುವ ತೊಂದರೆಗಳಿಂದ, ಕುಟುಂಬದ ಕಷ್ಟಗಳಿಂದ, ಅಥವಾ ಬೇರೆ ಯಾವದೇ ವಿರೋಧದಿಂದ ನಿರಾಶಗೊಳ್ಳುವದಿಲ್ಲ ಯಾಕೆಂದರೆ ನಮಗೋಸ್ಕರ ಮರಣಿಸಿದವನಿಗೆ ನಂಬಿಗಸ್ತರಾಗಿರುವದನ್ನು ಮುಂದುವರೆಸುವದು “ಸರಿಯಾದದ್ದು” ಆಗಿದೆ. ಹೆಚ್ಚು ನಿರ್ದಿಷ್ಟವಾಗಿ, ಕೆಲವರು ನಮ್ಮ ದಾನ ಧರ್ಮದ ಕಾರ್ಯದ ದುರ್ಲಾಭ ಪಡೆದುಕೊಳ್ಳುತ್ತಾರೆಂಬ ಒಂದೇ ಕಾರಣಕ್ಕಾಗಿ, ನಾವು ನಮ್ಮ ದಾನಧರ್ಮ ಕಾರ್ಯಗಳಲ್ಲಿ, ಅಥವಾ ಯಾವದು ಸರಿಯೋ ಅದನ್ನು ಮಾಡುವದರಲ್ಲಿ ಬೇಸರಗೊಳ್ಳಬಾರದು, ಥೆಸಲೋನಿಕದಲ್ಲಿ ಕೆಲವರು ಹಾಗೆಯೇ ಬೇಸರಗೊಂಡಿದ್ದರು. ಬಳಸಲ್ಪಟ್ಟಿರುವ ಭಾಷೆಯು ತೋರಿಸುವದೇನೆಂದರೆ ಅವರು ಇನ್ನೂ ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಂಡಿರಲಿಲ್ಲ, ಆದರೆ ಭವಿಷ್ಯದಲ್ಲಿ ಬೇಸರಗೊಳ್ಳುವರೇನೋ ಎಂದು ಪೌಲನು ಹೆದರಿದ್ದನು. ಆದದರಿಂದ, ಆತನ ಪ್ರಬೋಧನೆಯು ಪ್ರತಿಕ್ರಿಯೆ ರೂಪದಲ್ಲಿ ಎಂಬುದಕ್ಕಿಂತಲೂ ಅಂಥ ಪರಿಸ್ಥಿತಿಯನ್ನು ಬರದಂತೆ ತಡೆಯುವದಕ್ಕಾಗಿ ಆಗಿತ್ತು.

**ವಚನ 14.** ಇನ್ನೂ ವಿಧೇಯರಾದ ಬಹುಸಂಖ್ಯಾತರೊಂದಿಗೆ ಮಾತಾಡುವವನಾಗಿ, ಅವರು ಅವಿಧೇಯರ ವಿಷಯದಲ್ಲಿ, ನಿರ್ದಿಷ್ಟವಾಗಿ **ಈ ಪತ್ರಿಕೆಯ ಮೂಲಕವಾಗಿ ಹೇಳಿದ** [ಆತನ] **ಮಾತಿಗೆ ಯಾವನಾದರೂ ಒಳಗಾಗದಿದ್ದರೆ** ಅವರ ಕುರಿತು ಕ್ರಮವನ್ನು ತೆಗೆದುಕೊಳ್ಳುವಂತೆ ಆಜ್ಞಾಪಿಸುತ್ತಾನೆ. ಆತನು ಕೆಲಸಕ್ಕೆ ಹಿಂದಿರುಗುವಂತೆ ಮೇಲಿರುವ ಸ್ಪಷ್ಟವಾದ ಅಪೊಸ್ತಲಿಕ ಆಜ್ಞೆಯನ್ನು ಹೊಂದಿದ್ದಾಗ್ಯೂ ಹಾಗೆ ಮಾಡುವದಕ್ಕೆ ನಿರಾಕರಿಸಿದ ಸೋಮಾರಿಗಳ ಬಗ್ಗೆ ಆತನು ಮಾತಾಡುತ್ತಾನೆ. ಈ ಕ್ರಮೇಣವಾದ ನಿರಾಕರಣೆಯು ಬಹುಶಃ ಪತ್ರಿಕೆಯು ಸಭೆಗೆ ತಲುಪಿದ ತಕ್ಷಣದಲ್ಲಿ ಅದನ್ನು ಸಭೆಯವರಿಗೆ ಓದಿ ಹೇಳಿದ ಬಳಿಕ ಸಂಭವಿಸಿರಬಹುದಾಗಿದೆ. ಈ ಮುಂಚೆ ಗಮನಿಸಿದ ಹಾಗೆ, ಇದರ ವಿಷಯವಾಗಿ ಪೌಲನು ಅವರ ಮಧ್ಯದಲ್ಲಿ ಇದ್ದ ಸಮಯದಲ್ಲಿ ಕಲಿಸಿದ್ದನು (ವ. 10). ಆತನು ಇದರ ಬಗ್ಗೆ ತನ್ನ ಮೊದಲನೆಯ ಪತ್ರಿಕೆಯಲ್ಲಿ ಬರೆದಿದ್ದನು (1 ಥೆಸಲೋನಿಕ 4:11, 12; 5:14), ಮತ್ತು ಈಗ ಬಹಳ ಸ್ಪಷ್ಟವಾಗಿ ಅದರ ಕುರಿತು ಮತ್ತೊಮ್ಮೆ ಬರೆಯುತ್ತಾನೆ (ವಚನಗಳು 6-12).

ಆದುದರಿಂದ, ಈ ಸಾರಿ ಅಲ್ಪ ಸಂಖ್ಯಾತರು ವಿಧೇಯರಾಗದಿದ್ದರೆ, ಸಭೆಯು ಆ ವಿಷಯದಲ್ಲಿ ಕ್ರಮವನ್ನು ಕೈಕೊಳ್ಳಬೇಕಿತ್ತು ಮತ್ತು ಅಂತಹ ಯಾವದೇ ವ್ಯಕ್ತಿಯನ್ನು **ವಿಶೇಷವಾಗಿ ಗುರುತು ಇಟ್ಟುಕೊಳ್ಳಬೇಕಿತ್ತು.** "ವಿಶೇಷವಾಗಿ ಗುರುತು ಇಟ್ಟು" ಎಂಬ ಮಾತು σημειόω (*sēmeioō*) ಎಂಬ ಕ್ರಿಯಾ ಪದದಿಂದ ಬಂದದ್ದು, ಅದರರ್ಥವು "ಗುರುತಿಸಿರಿ" ಅಥವಾ "ಆ ಮನುಷ್ಯನ ಮೇಲೆ ಒಂದು ಹೆಸರುಪಟ್ಟಿ ಲಗತ್ತಿಸಿರಿ."[16] ಒಬ್ಬನನ್ನು "ಗುರುತಿಟ್ಟುಕೊಳ್ಳಬೇಕು" ಎಂದರೆ ಸುಮ್ಮನೇ "ಆತನನ್ನು ನೋಡುತ್ತಲಿರಿ" ಎಂದರ್ಥವಷ್ಟೇ ಆಗಿರಲಿಲ್ಲ, ಬದಲಾಗಿ "ಆರೋಪಕ್ಕಾಗಿ ಗುರುತಿಸಿ ಇಡಿರಿ" ಎಂದಾಗಿತ್ತು.[17] ಸ್ತವದಲ್ಲಿ, ಪೌಲನು ಅವರಿಗೆ **ಅವನ ಸಂಗಡ ಸಹವಾಸದಿ ಸೇರಬೇಡಿರಿ**, ಅಥವಾ "ಅವನೊಂದಿಗೆ ಒಟನಾಟವನ್ನು ಇಟ್ಟುಕೊಳ್ಳಬೇಡಿರಿ" (KJV) ಎಂದು ಆಜ್ಞಾಪಿಸುತ್ತಾನೆ.

1 ಕೊರಿಂಥ 5ರಲ್ಲಿ ಚರ್ಚಿಸಿದ ಒಂದು ಸ್ಥಿತಿಯಲ್ಲಿ, ಪೌಲನು "ಸಹವಾಸವನ್ನು ಮಾಡಬಾರದು" ಎಂಬುದರಲ್ಲಿ ಅಂತಹ ಜನರೊಂದಿಗೆ ಊಟವನ್ನು ಮಾಡಬಾರದಿರುವದು ಸೇರಿರುತ್ತದೆಂದು ಹೇಳಿದನು (1 ಕೊರಿಂಥ 5:11). ಅವರು ಅಂಥವರಿಂದ "ದೂರ ಸರಿಯಬೇಕಿತ್ತು" (2 ಥೆಸಲೋನಿಕ 3:6; KJV). ಆ ವ್ಯಕ್ತಿಯು ತನ್ನ ನಡವಳಿಕೆಗೆ ಅನುಮೋದನೆಯಿರುವದಿಲ್ಲ ಎಂಬುದನ್ನು ತಿಳುಕೊಳ್ಳುವಂತೆ ಮತ್ತು ಈ ರೀತಿಯಲ್ಲಿ ನಡೆದುಕೊಳ್ಳುವವರನ್ನು ಸಭೆಯು "ಒಳ್ಳೇ ಸಾಕ್ಷಿಯಿರುವ" ಸದಸ್ಯರೆಂದು ಪರಿಗಣಿಸುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವ ಹಾಗೆ ಆತನೊಂದಿಗೆ ಯಾವದೇ ಸಾಮಾಜಿಕ ಸಂಪರ್ಕವನ್ನು ಇಟ್ಟುಕೊಳ್ಳಬಾರದಿತ್ತು. ಈ ರೀತಿಯಾಗಿ ಸಾಮಾಜಿಕ ಸಂಪರ್ಕವನ್ನು ಕಡಿದುಕೊಳ್ಳುವದರ ಉದ್ದೇಶವು **ಅವನಿಗೆ ನಾಚಿಕೆಯಾಗುವಂತೆ** ಮಾಡುವದಕ್ಕಾಗಿಯೇ ಆಗಿತ್ತು. ಕೆಲವು ಸಾರಿ ನಮಗೆ ಬಹಳಷ್ಟು ಒತ್ತಡವನ್ನುಂಟು ಮಾಡಬಹುದು, ಆದರೆ "ಸಮಾನಸ್ಕಂದರಿಂದಾಗುವ ಸಮಗ್ರ ಒತ್ತಡ" ಎಂಬುದಿದೆ. ಪೌಲನು ಇಲ್ಲಿ ನಿಖರವಾಗಿ ಅದನ್ನೇ ಶಿಫಾರಸ್ಸು ಮಾಡುತ್ತಾನೆ. ಆ ವ್ಯಕ್ತಿಗೆ ಕ್ರೈಸ್ತರೊಂದಿಗಿದ್ದ ಅನ್ಯೋನ್ಯತೆಯ ನೆನಪು ಬಹಳವಾಗಿ ಬಾಧಿಸಿ ಕೊನೆಗೆ ಆತನು ತನ್ನ ಕೃತ್ಯಗಳನ್ನು ಮರು ಅವಲೋಕನ ಮಾಡಿಕೊಂಡು ಪುನಃ ಕರ್ತನ ಬಳಿಗೆ ಬರುವಂತಾಗುವದು ಎಂಬದು ಪೌಲನ ನಿರೀಕ್ಷೆಯಾಗಿತ್ತು (ನೋಡಿರಿ 1 ಕೊರಿಂಥ 5:5). ಹೇಗೂ, ಆ ವ್ಯಕ್ತಿಯು ಪಶ್ಚಾತ್ತಾಪ ಪಟ್ಟು ಹಿಂದಿರುಗದಿದ್ದಾಗ್ಯೂ, ಅಲ್ಲಿ ಇನ್ನೊಂದು ಅತಿ ಪ್ರಾಮುಖ್ಯವಾದ ಗುರಿಯು ಇತ್ತು: ಸಭೆಯಲ್ಲಿ ಪಾವಿತ್ರ್ಯತೆಯನ್ನು ಕಾಪಾಡುವದು (1 ಕೊರಿಂಥ 5:6 ರೊಂದಿಗೆ ಹೋಲಿಸಿರಿ).

**ವಚನ 15.** ಶಿಕ್ಷಿಸಲ್ಪಟ್ಟವರ ವಿಷಯದಲ್ಲಿ, ಅವರನ್ನು **ವೈರಿಯೆಂದು ಎಣಿಸದೆ** ಇರಬೇಕು; "ಒಬ್ಬ ವೈರಿ"ಯ ವಿಷಯದಲ್ಲಿ ಲೋಕವು ನಡೆದುಕೊಳ್ಳುವ ಪ್ರಕಾರ ಅವನಿಗೆ ಹಾನಿಯನ್ನು ಮಾಡುವದಕ್ಕೆ ಸಾಧ್ಯವಾದದ್ದೆಲ್ಲವನ್ನೂ ಮಾಡಬಾರದಿತ್ತು. ಬದಲಾಗಿ, ಅವರನ್ನು **ಸಹೋದರರೆಂದು ಎಣಿಸಿ ಬುದ್ಧಿ** ಹೇಳಬೇಕಿತ್ತು. Marshall ಗಮನಕ್ಕೆ ತರುವದೇನೆಂದರೆ, ಗ್ರೀಕ್ ನ ἐχθρός (*echthros*) ಎಂಬ ಪದದಿಂದ ಬರುವ "ವೈರಿ" ಎಂಬುದು, "ದ್ವಂದ್ವಾರ್ಥವುಳ್ಳದ್ದು, ಏಕೆಂದರೆ ಅದರರ್ಥವು ನನ್ನನ್ನು ದ್ವೇಷದಿಂದ ಕಾಣುವ ಒಬ್ಬ ವ್ಯಕ್ತಿಯೆಂದು ಮತ್ತು/ಅಥವಾ ನಾನು ದ್ವೇಷದಿಂದ ಕಾಣುವಂತಹ ಒಬ್ಬ ವ್ಯಕ್ತಿಯೆಂದು ಎಂದಾಗಿರಬಲ್ಲದು. ಇಲ್ಲಿ ಎರಡನೆಯ ಅರ್ಥವನ್ನು ಸೂಚಿಸಿ ಹೇಳಿರಬಹುದಾದ ಹೆಚ್ಚು

ಸಾಧ್ಯತೆಯಿರುತ್ತದೆ."[18]

ಆತನು ಈಗಲೂ ಒಬ್ಬ "ಸಹೋದರ" ಆಗಿದ್ದನು ಯಾಕೆಂದರೆ ಆತನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದನು (ರೋಮಾ 6:1-4), ಆದರೆ ಆತನು ಅಪೊಸ್ತಲರ ಮೂಲಕ ಕೊಡಲ್ಪಟ್ಟಿರುವ, ತನ್ನ ರಕ್ಷಕನ ಆಜ್ಞೆಗಳಿಗೆ ವಿಧೇಯನಾಗುವದನ್ನು ಬಿಟ್ಟು ಬಿಟ್ಟಿದ್ದ ತಪ್ಪಿತಸ್ಥ ಸಹೋದರನಾಗಿದ್ದನು (ವಚನಗಳು 6, 14; 1 ಕೊರಿಂಥ 14:37). ಆತನಿಗೆ ಇನ್ನು ಮೇಲೆ ಅಂತಿಮ ರಕ್ಷಣೆಯ ನಿಶ್ಚಿತತೆಯು ಇರಲಿಲ್ಲ (ಇಬ್ರಿಯ 5:8, 9). ಈ ಕಾರಣಕ್ಕಾಗಿಯೇ ವಿಧೇಯತೆಯಲ್ಲಿ ಜೀವಿಸುವದಕ್ಕೆ ಪ್ರಯತ್ನಿಸುವವರು "ಅವನನ್ನು ಸಹೋದರನೆಂದು ಎಣಿಸಿ ಬುದ್ಧಿಹೇಳಬೇಕಿತ್ತು." ದೇವರು "ತಿರಸ್ಕಾರ ಸಹಿಸುವವನಲ್ಲ"; ಆತನು ಅವಿಧೇಯರನ್ನು ರಕ್ಷಿಸುವದಿಲ್ಲ (ಗಲಾತ್ಯ 6:7, 8).

ಈ ವಿಷಯವನ್ನು ಒಂದು ಕಾರ್ಯರೂಪದ ದೃಷ್ಟಿಯ ನೆಲೆಯಿಂದ ನೋಡುವದಾದರೆ, ಏಕೆ ಮೈಗಳ್ಳರಾದ ಅಲ್ಪಸಂಖ್ಯಾತ ಜನರ ಕಡೆಗೆ ಬಹು ಸಂಖ್ಯಾತರು ಹಗೆತನದ ಭಾವಗಳನ್ನು ಹೊಂದಿದ್ದರೆಂಬುದನ್ನು ಕಾಣುವದು ಸುಲಭವಾಗಿರುತ್ತದೆ. ಅಂಥ ವರ್ತನೆಯಿಂದಾಗಿ ಸಭೆಯು ಹೊರಗಿನವರ ಮುಂದೆ ಮರ್ಯಾದೆಯನ್ನು ಕಳೆದುಕೊಳ್ಳುವಂತಾಗಿರಬೇಕು (1 ಥೆಸಲೋನಿಕ 4:11, 12). ಲೋಕವು "ವೈರಿ"ಯನ್ನು ಟೀಕೆ ಮತ್ತು ದ್ವೇಷದಿಂದ ಕಾಣುವ ರೀತಿಯಲ್ಲಿಯೇ, ಅವರು ಅಂಥವರ ಜೊತೆಯಲ್ಲಿ ಆ ರೀತಿ ನಡೆದುಕೊಳ್ಳಬಾರದೆಂದು ಪೌಲನು ಬಹುಸಂಖ್ಯಾತರಿಗೆ ಎಚ್ಚರಿಸುತ್ತಾನೆ. ಅವರು ಸಮಸ್ಯೆಯನ್ನು ಎದುರಿಸಬೇಕಿತ್ತು ಮತ್ತು, ಬೇರೊಂದು ಕಡೆಯಲ್ಲಿ ಪೌಲನು ಹೇಳಿದ ಪ್ರಕಾರ (ಗಲಾತ್ಯ 6:1), ಅವರನ್ನು "ಶಾಂತಭಾವದಿಂದ ತಿದ್ದಿ ಸರಿಮಾಡಬೇಕಿತ್ತು."

ಹೇಗೂ, ಸಹೋದರನು ಪಶ್ಚಾತ್ತಾಪ ಪಡದಿದ್ದಲ್ಲಿ, ಆಗ "ಅಕ್ರಮವಾಗಿರುವವರ ನಡವಳಿಕೆಯನ್ನು ಕ್ರೈಸ್ತರು ಸ್ಪಷ್ಟವಾದ ಮಾತುಗಳಲ್ಲಿ ಖಂಡನೆ ಮಾಡಬೇಕು" ಎಂಬುದು ಪೌಲನ ಬಯಕೆಯಾಗಿತ್ತು.[19] ಅಂತ ನಡವಳಿಕೆಯು ಕ್ರೈಸ್ತರಿಗೆ ಅಂಗೀಕಾರವಾದದ್ದೆಂಬದಾಗಿ ಜನರು ನಂಬುವಂತಾಗಬೇಕೆಂದು ಪೌಲನ ಬಯಕೆಯಾಗಿರಲಿಲ್ಲ. ಈ ಕ್ರಮವು ಬೇರೊಂದು ಕಡೆಯಲ್ಲಿ ತಿಳಿಸಲಾಗಿರುವ ಅದೇ ವಿಧವಾದ ಶಿಸ್ತಿನ ಕ್ರಮವಾಗಿರುತ್ತದೆ. ಇಲ್ಲಿ ಉದ್ದೇಶಗಳು ತಪ್ಪು ಮಾಡಿದವನನ್ನು ರಕ್ಷಣೆಯಲ್ಲಿ ಉಳಿಯುವಂತೆ ಮಾಡುವದು ಮತ್ತು ಸಭೆಯನ್ನು ಪವಿತ್ರವಾಗಿ ಕಾಪಾಡುವದು ಆಗಿವೆ (1 ಕೊರಿಂಥ 5:5, 6). ಅಂಥ ನಡವಳಿಕೆಯನ್ನು ಅಂಗೀಕರಿಸುವದಕ್ಕಾಗುವದಿಲ್ಲ ಎಂಬುದನ್ನು ಗೊತ್ತು ಪಡಿಸುವದಕ್ಕೆ ಸಾರ್ವಜನಿಕವಾಗಿ ಪ್ರಕಟನೆಯನ್ನು ಮಾಡುವದು ಸೇರಿರುತ್ತದೆ (1 ಕೊರಿಂಥ 5:4). ಕ್ರೈಸ್ತರು ದೂರವಾಗಿರಬೇಕಾದ ಒಂದು ಪ್ರೀತಿರಹಿತವಾದ ತೀರ್ಪುಮಾಡುವಿಕೆ ಇರುತ್ತದೆ (ಮತ್ತಾಯ 7:1), ಆದರೆ ಇದೊಂದು ಪ್ರೀತಿಯೊಂದಿಗೆ ಸಾಮಂಜಸ್ಯ ಹೊಂದಿರುವ ತೀರ್ಪು ಮಾಡುವಿಕೆಯಾಗಿದ್ದು ಕ್ರೈಸ್ತರಿಗೆ ಜಾರಿಗೆ ತರುವದಕ್ಕೆ ಸೂಕ್ತವಾದದ್ದು ಆಗಿದೆ (ಯೋಹಾನ 7:24; 1 ಕೊರಿಂಥ 5:12).

ಈ ಕ್ರೈಸ್ತೀಯ ಶಿಸ್ತುಕ್ರಮವು ದೃಢ ಹಾಗೂ ಮುಚ್ಚುಮರೆಯಿಲ್ಲದ್ದು ಆಗಿದೆಯಾದರೂ, ರೋಮನ್ ಕ್ಯಾಥೋಲಿಕರು ಅನುರಿಸುವ "ಬಹಿಷ್ಕಾರ"ದೊಂದಿಗೆ ಸಮಾನಾರ್ಥಕವಲ್ಲ, ಅದು ಕಟುವಾಗಿ ಖಂಡಿಸುವದು ಮಾತ್ರವಲ್ಲದೆ, ದಾರಿತಪ್ಪಿದ ವ್ಯಕ್ತಿಯನ್ನು ಒಬ್ಬ

ವೈರಿಯೆಂದು ಪರಿಗಣಿಸುತ್ತದೆ. ಇದು ಖಂಡಿತವಾಗಿಯೂ ಕ್ರೈಸ್ತೀಯ ತತ್ವವಲ್ಲ, ಏಕೆಂದರೆ ಕ್ರೈಸ್ತನು ತನ್ನ ವೈರಿಗೆ ಸಹ ಊಟವನ್ನು ಮಾಡಿಸುವವನಾಗಿದ್ದಾನೆ (ರೋಮಾ 12:20). ಶಿಸ್ತುಕ್ರಮವನ್ನು ಈ ರೀತಿಯಾಗಿ ದುರುಪಯೋಗಪಡಿಸಿಕೊಳ್ಳುವದು ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವದರಿಂದ ದೂರವಾಗಿರುವವನನ್ನು ನ್ಯಾಯವೆಂದು ಹೇಳುವದಿಲ್ಲ. ಒಂದು ಸಮರ್ಪಕವಾದ ಬಳಕೆಯಲ್ಲಿ ಕಾಠಿಣ್ಯತೆ ಇರುತ್ತದೆ, ಅದನ್ನು "ಪ್ರಬೋಧನೆ," ಅಥವಾ "ಎಚ್ಚರಿಸು" (NIV) ಎಂಬುದರಲ್ಲಿ ಕಾಣುತ್ತೇವೆ, ಆದರೆ ಅದರಲ್ಲಿ ವೈಯಕ್ತಿಕವಾದ ಭಾವಗಳುಳ್ಳ ಕಾಳಜಿ ಸಹ ಸೇರಿರುತ್ತದೆ, ಅದು "ಸಹೋದರ" ಎಂಬ ಪದದಲ್ಲಿ ಸೂಚ್ಯಾರ್ಥವಾಗಿರುತ್ತದೆ.

ಆ ತಪ್ಪಿತಸ್ಥನೊಂದಿಗೆ ಸಾಮಾಜಿಕ ಸಂಪರ್ಕವನ್ನು ಇಟ್ಟುಕೊಳ್ಳದೆ ಇರುವದರಲ್ಲಿ ಒಂದು ವಿಷಯವು ಹೊರತಾಗಿತ್ತು ಎಂಬುದನ್ನು ಸಹ ಈ ವಾಕ್ಯಭಾಗವು ತೋರಿಸುತ್ತದೆ. ಎಲ್ಲಿಯ ವರೆಗೆ ಉದ್ದೇಶವು "ಅವನನ್ನು ಸಹೋದರನೆಂದು ಎಣಿಸಿ ಬುದ್ಧಿಹೇಳುವದು" ಆಗಿರುತ್ತದೋ ಅಲ್ಲಿಯ ವರೆಗೆ ವಿಶ್ವಾಸಿಗಳು ಆತನೊಂದಿಗೆ ಸಂಪರ್ಕವನ್ನು ಇಟ್ಟುಕೊಳ್ಳಬಹುದಿತ್ತು.

## ಮುಕ್ತಾಯ (3:16-18)

**16ಶಾಂತಿದಾಯಕನಾದ ಕರ್ತನು ತಾನೇ ಸದಾಕಾಲದಲ್ಲಿಯೂ ಸಕಲವಿಧದಲ್ಲಿಯೂ ನಿಮಗೆ ಶಾಂತಿಯನ್ನು ದಯಪಾಲಿಸಲಿ. ಕರ್ತನು ನಿಮ್ಮೆಲ್ಲರೊಂದಿಗೆ ಇರಲಿ.**

**17ಪೌಲನೆಂಬ ನಾನು ಸ್ವಂತ ಕೈಯಿಂದ ವಂದನೆಯನ್ನು ಬರೆದಿದ್ದೇನೆ; ಎಲ್ಲಾ ಪತ್ರಿಕೆಗಳಲ್ಲಿಯೂ ಇದೇ ಗುರುತು; ಹೀಗೆಯೇ ನನ್ನ ಕೈಬರಹ.**

**18ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡವಿರಲಿ.**

**ವಚನ 16.** ಮೂಲಭೂತವಾಗಿ ಇದು ಮೊದಲನೆಯ ಪತ್ರಿಕೆಯಲ್ಲಿ ಕಂಡು ಬರುವ ಅದೇ ಪೌಲನ ಪ್ರಾರ್ಥನೆಯೇ ಆಗಿದೆ (1 ಥೆಸಲೋನಿಕ 5:23, 28). ಇಲ್ಲಿ ಬಹಳ ಸಂಭಾವ್ಯವಾಗಿ **ಶಾಂತಿದಾಯಕನಾದ ಕರ್ತನು** ಎಂದು ಕರೆಯಲ್ಪಟ್ಟಿರಬಹುದಾದ, ಕ್ರಿಸ್ತನು ಅವರನ್ನು ಹೇರಳವಾಗಿ ಶಾಂತಿಯನ್ನು ನೀಡಿ ಅವರನ್ನು ಆಶೀರ್ವದಿಸಲಿ ಎಂಬ ಪ್ರಾರ್ಥನೆಯಾಗಿದೆ. ರೋಮಾ 15:33ರಲ್ಲಿ, ಪೌಲನು ತಂದೆಯನ್ನು "ಶಾಂತಿದಾಯಕನಾದ ದೇವರು" ಎಂದು ಕರೆದನು. ಆತನು ಈಗ ಪಂಗಡಗಳು ಮತ್ತು ಶಿಸ್ತುಕ್ರಮದ ಅಗತ್ಯತೆಗಳ ಕುರಿತು ಮಾತಾಡಿರುವದರಿಂದ, "ಶಾಂತಿದಾಯಕನಾದ ಕರ್ತನು" ವಿಶೇಷವಾದ ರೀತಿಯಲ್ಲಿ ಸಮರ್ಪಕವಾಗಿರುತ್ತದೆ (ವಚನಗಳು 6-15). ಆದುದರಿಂದ ಒಬ್ಬನು "ಶಾಂತಿದಾಯಕನಾದ ಕರ್ತನ" ಬಯಕೆಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದಲೇ, ಈ ವಿಧವಾದ ಶಿಸ್ತುಕ್ರಮ ಅಗತ್ಯವಾಗುತ್ತದೆಂಬುದನ್ನು ಅವರಿಗೆ ಅತನು ಸ್ಪಷ್ಟವಾದ ರೀತಿಯಲ್ಲಿ ಜ್ಞಾಪಕ ಪಡಿಸುತ್ತಾನೆ. ಇನ್ನೊಂದೆಡೆಯಲ್ಲಿ, ಕ್ರಿಸ್ತನ ಶಾಂತಿಯಿದೆಯೆಂದ ತಕ್ಷಣ ಕ್ರೈಸ್ತೇತರರ ಸಂಗಡದ ನಮ್ಮ ಸಂಬಂಧಗಳೊಳಗೆ ಯಾವಾಗಲೂ ಜಗಳಗಳು ಇರುವದೇ ಇಲ್ಲ ಎಂದಾಗುವದಿಲ್ಲ (ಮತ್ತಾಯ 10:34-36). ಹೇಗೂ, ಕ್ರೈಸ್ತರು ದೇವರ ಸಂಗಡ

ಸಮಾಧಾನದಿಂದಿರುವಾಗ (ಫಿಲಿಪ್ಪಿ 4:7), ಅವರು ಒಬ್ಬರೊಂದಿಗೊಬ್ಬರು ಸಹ ಸಮಾಧಾನದಲ್ಲಿರುವರು.

ದೇವರ ಮತ್ತು ಮನುಷ್ಯನ ನಡುವೆ ಸಂಧಾನವಾಗುವ ಹಾಗೆ ಮರಣಿಸಿರುವಂಥವನೇ (ರೋಮಾ 5:10) ಈ ಶಾಂತಿ ಮೂಲನಾಗಿದ್ದಾನೆ (ಎಫೆಸ 2:14-16). ಪೌಲನು ಶಾಂತಿಯನ್ನು ಅನುಗ್ರಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಭರವಸೆಯನ್ನು ಸ್ವತಃ **ಕರ್ತ**ನಲ್ಲಿಯೇ-ವೈಯಕ್ತಿಕವಾಗಿ, ಹೊರತು ಪ್ರತಿನಿಧಿಯ ಮೂಲಕವಲ್ಲ-ಇಟ್ಟಿದ್ದನು. ಅವರಿಗೆ ಯಾವದೋ ಒಂದು ಉಚ್ಛಸ್ಥಿತಿಯಲ್ಲಿರುವಾಗ ಮಾತ್ರವೇ ಅಲ್ಲದೆ, **ಸದಾಕಾಲದಲ್ಲಿಯೂ ಸಕಲವಿಧದಲ್ಲಿಯೂ** (ಪರಿಸ್ಥಿತಿಗಳಲ್ಲಿಯೂ) ಈ ಶಾಂತಿಯು ಇರುವಂತಾಗಲೆಂದು ಆತನು ಪ್ರಾರ್ಥಿಸಿದನು. ಅತ್ಯಂಥ ದೊಡ್ಡ ಕಠಿಣ ಪರಿಸ್ಥಿತಿಯ ವೇಳೆಯಲ್ಲಿ ಆ ಶಾಂತಿಯಿರಬೇಕು ಎಂಬುದು ಆತನ ಬಯಕೆಯಾಗಿತ್ತು ಯಾಕೆಂದರೆ ದೇವರ ಶಾಂತಿಯು ಘೋರವಾದ ಬಿರುಗಾಳಿಯನ್ನು ತಣ್ಣಗಾಗಿಸಬಲ್ಲದು. ಕರ್ತನಿಂದ ಶಾಂತಿಯು ದೊರಕಲಿ ಎಂದು ಪ್ರಾರ್ಥಿಸುವದರೊಂದಿಗೆ ಪೌಲನು ನಿಲ್ಲಿಸಲಿಲ್ಲ. ಸ್ವತಃ ಕರ್ತನೇ **ಅವರ ಸಂಗಡವಿರಲಿ** ಎಂದು ಆತನು ಪ್ರಾರ್ಥಿಸುತ್ತಾನೆ (ಮತ್ತಾಯ 18:20; 2 ಕೊರಿಂಥ 13:11). ಅಷ್ಟುಮಾತ್ರವಲ್ಲದೆ, ಆತನು ಆ ಪ್ರಾರ್ಥನೆಯನ್ನು **ನಿಮ್ಮೆಲ್ಲರೊಂದಿಗೆ**, ಅಡಚಣೆಯನ್ನುಂಟು ಮಾಡುತ್ತಿದ್ದ ಅಲ್ಪಸಂಖ್ಯಾತರಿಗಾಗಿ ಸಹ ಎಂದು ಮಾಡುತ್ತಾನೆ. ಖಂಡಿತವಾಗಿಯೂ, ಅದರಲ್ಲಿ ಆ ಜನರು ಪಶ್ಚಾತ್ತಾಪ ಪಡುವರು ಎಂಬ ಆಶಾಭಾವನೆಯೂ ಸೇರಿತ್ತು.

**ವಚನ 17.** ಪೌಲನು ಈ ಅಂಶದೊಂದಿಗೆ ಪತ್ರಿಕೆಯ ಮುಖ್ಯಭಾಗವನ್ನು ಮುಕ್ತಾಯಗೊಳಿಸಿದನು, ಮತ್ತು ನಾವು ಹಸ್ತಾಕ್ಷರ ಎಂದು ಕರೆಯುವ ಭಾಗಕ್ಕೆ ಬಂದಿರುತ್ತಾನೆ. ಪೌಲನ ಅನೇಕ ಪತ್ರಿಕೆಗಳು ಲೇಖಕನಿಂದ ಅಥವಾ ಕಾರ್ಯದರ್ಶಿಯಿಂದ ಬರೆಲ್ಪಡುತ್ತಿದ್ದವು, ಅಪೊಸ್ತಲನು ಹೇಳುತ್ತಿದ್ದರೆ ಅವರು ಬರೆಯುವವರಾಗಿದ್ದರು (ರೋಮಾ 16:22). ಹೇಗೂ, ಆತನು ಬರೆಯದೆ ಇದ್ದ ಕೆಲವು ಪತ್ರಿಕೆಗಳನ್ನು "ಆತನಿಂದ" ಬಂದವುಗಳೆಂದು ಜನರ ಮುಂದಿಡಲ್ಪಡುತ್ತಿದ್ದವೆಂದು ತೋರುತ್ತದೆ (2 ಥೆಸಲೋನಿಕ 2:2). ಆದದರಿಂದ, ಆಯಾ ಪತ್ರಿಕೆಗಳು ನಿಜವಾಗಿಯೂ ತನ್ನಿಂದಲೇ ಬಂದವುಗಳೆಂದು ಒಂದು ಭೇದವನ್ನು ಗುರುತಿಸುವ **ಗುರುತು** ಆಗಿರುವದಕ್ಕಾಗಿ ಪತ್ರಿಕೆಯ ಅಂತ್ಯದಲ್ಲಿ **ಸ್ವಂತ ಕೈಯಿಂದ** ಕೆಲವು ಮಾತುಗಳನ್ನು ಬರೆಯುವದು ಅವಶ್ಯಕವಾಗಿತ್ತು. "ನನ್ನ ಸ್ವಂತ ಕೈಯಿಂದ" ಎಂಬುದರ ಅನುವಾದಿತ ಗ್ರೀಕ್ ಪದವು τῇ ἐμῇ χειρὶ Παύλου (*tēi emēi cheiri Paulou*).

ಅವರು ಈಗಿನಿಂದ ಪ್ರತಿಯೊಂದು ಪತ್ರಿಕೆಗಳಲ್ಲಿ ಈ ಗುರುತಿಗಾಗಿ ಹುಡುಕಬೇಕಾಗಿತ್ತು (ಗಲಾತ್ಯ 6:11; 1 ಕೊರಿಂಥ 16:21; ಕೊಲೊಸ್ಸೆ 4:18 ರೊಂದಿಗೆ ಹೋಲಿಸಿರಿ). ಅವರು ಆತನ ಕೈಬರಹದ ಶೈಲಿಯನ್ನು ಚೆನ್ನಾಗಿ ನೋಡುವಂತಾಗಬೇಕೆಂದು ಆತನು 17 ಮತ್ತು 18 ವಚನಗಳನ್ನು ಸ್ವತಃ ಬರೆಯುತ್ತಾನೆ. ಈ ಹಂತದಿಂದ, ಇನ್ನು ಮುಂದೆ ಅವರು ಈ ಕೈಬರಹದಂತೆಯೇ ಕಾಣಿಸುವಂತಹ ಪತ್ರಿಕೆಗಳನ್ನು ಮಾತ್ರವೇ ಅಂಗೀಕರಿಸಿಕೊಳ್ಳಬೇಕಿತ್ತು.

**ವಚನ 18.** ಇಲ್ಲಿ ಬಳಸಲಾಗಿರುವ ಪದಗಳು 1 ಥೆಸಲೋನಿಕ 5:28ರಲ್ಲಿರುವಂತೆಯೇ

ಇರುತ್ತವೆ. ಇದು ಸಾಮಾನ್ಯವಾಗಿ ಪೌಲನು ತನ್ನ ಪತ್ರಿಕೆಗಳನ್ನು ಮುಗಿಸುತ್ತಿದ್ದ ಪ್ರಾರ್ಥನೆಯ ವಿಧವಾಗಿದೆ. ವಾಸ್ತವದಲ್ಲಿ, 2 ಕೊರಿಂಥ 13:14ನೇ ವಚನವು ಈ ರೀತಿಯಲ್ಲಿ ಹೇಳುತ್ತದೆ, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ." ಥೆಸಲೋನಿಕದವರು ಕ್ರಿಸ್ತನು ತನ್ನ **ಕೃಪೆ,** ಅಥವಾ ಅನರ್ಹವಾದ ಕೃಪಾಕಟಾಕ್ಷವು ಅನುಗ್ರಹಿಸಬಹುದಾದ ಸಕಲ ಆಶೀರ್ವಾದಗಳನ್ನು ಹೊಂದಿಕೊಳ್ಳಬೇಕೆಂಬ ಈ ಪ್ರಾರ್ಥನೆಯೇ ಆಗಿತ್ತು.

## ಅನ್ವಯಿಸುವಿಕೆ

ಮುಕ್ತಾಯದ ಪ್ರಾರ್ಥನೆಯು "ಒಂದು ಜ್ಞಾಪಿಸುವಿಕೆ" ಆಗಿರುತ್ತದೆ. ಅದರಲ್ಲಿ ಹೊಸದೇನೂ ಇರುವದಿಲ್ಲ. ಪೌಲನು ಈ ಪತ್ರಿಕೆಯ ಮುಂಚಿನ ಭಾಗದಲ್ಲಿ ಮತ್ತು ಮೊದಲನೆಯ ಪತ್ರಿಕೆಯಲ್ಲಿ ಪ್ರಸ್ತಾಪಿಸಲಾದ ಕೆಲವು ಸತ್ಯಗಳನ್ನು ಪುನಃ ಹೇಳುತ್ತಿದ್ದಾನೆ.

ಪೌಲನ ಪತ್ರಿಕೆಗಳ ವೈಶಿಷ್ಟ್ಯತೆಯಾಗಿರುವ ಪ್ರಕಾರವೇ, ಪತ್ರಿಕೆಯ ಈ ಕಡೆಯ ಭಾಗವು ಕಾರ್ಯರೂಪದ ವಿಷಯಗಳಿಗೆ ಸಂಬಂಧಿಸಿದ ವಿಭಾಗವಾಗಿರುತ್ತದೆ. ಈ ಭಾಗದ ಆರಂಭವನ್ನು ಮಾಡುವ "ಕಡೇ ಮಾತೇನೆಂದರೆ" ಎಂಬುದು ಸೂಚಿಸುವದೇನೆಂದರೆ ಈ ಪತ್ರಿಕೆಯನ್ನು ಬರೆಯುವದಕ್ಕಿದ್ದ ಮುಖ್ಯ ಕಾರಣವನ್ನು ತಿಳಿಸಲಾಗಿದೆ ಮತ್ತು ಪತ್ರಿಕೆಯ ಉಳಿದ ಭಾಗವು ಈಗ ಮಾಡಲಾಗಿರುವ ವಾದದಿಂದ ಹೊರಹೊಮ್ಮಿರುವ ಕಾರ್ಯರೂಪದ ಸಂಗತಿಗಳಿಗೆ ಸಮರ್ಪಿತವಾಗಿರುತ್ತದೆ ಎಂಬದೆ. "ಕಡೇ ಮಾತೇನೆಂದರೆ" ಎಂಬುದು "ಉಳಿದಿರುವಂಥದ್ದು" ಎಂಬ ಯೋಚನೆಯನ್ನೊಳಗೊಂಡಿರುತ್ತದೆ.

### "ನೀವು ಪ್ರಾರ್ಥನೆ ಮಾಡುವಾಗ" (3:1, 2)

1ನೇ ವಚನದಲ್ಲಿ ಪ್ರಾರ್ಥನೆ ಮಾಡಬೇಕೆಂದು ಪೌಲನು ಮಾಡಿಕೊಳ್ಳುವ ಮನವಿಯು ವರ್ತಮಾನಕಾಲ ರೂಪದಲ್ಲಿರುತ್ತದೆ. ಅದರರ್ಥವು ಥೆಸಲೋನಿಕದವರು ಆತನಿಗೋಸ್ಕರ ಪ್ರಾರ್ಥನೆ ಮಾಡುತ್ತಿದ್ದಾರೆಂಬುದನ್ನು ಆತನು ಕೇಳಿದ್ದನು ಮತ್ತು ಹಾಗೆಯೇ ಮುಂದುವರೆಸುವಂತೆ ಆತನು ಕೇಳಿಕೊಳ್ಳುತ್ತಿದ್ದಾನೆ ಎಂಬದೆ.

ತನಗೋಸ್ಕರ ವಿಶೇಷವಾಗಿ ಪ್ರಾರ್ಥನೆ ಮಾಡಬೇಕೆಂಬುದು ಪೌಲನ ಬಯಕೆಯಾಗಿತ್ತು. ನಮ್ಮಲ್ಲಿ ಯಾರೂ ಆ ರೀತಿಯಾದ ಪ್ರಾರ್ಥನೆಗಳನ್ನು ಮಾಡಬೇಕೆಂದು ಕೇಳಿಕೊಳ್ಳದೆ ಇರುತ್ತೇವೆ?

*"ವಾಕ್ಯವು ಯಥಾರ್ಥವಾದ ಹೃದಯಗಳಿಗೆ ಓಡುವಂತೆ ಪ್ರಾರ್ಥಿಸಿರಿ."* ಸುವಾರ್ತೆಯು "ಬೇಗನೆಹಬ್ಬ" ಬೇಕು ಎಂಬುದು ಆತನ ಬಯಕೆಯಾಗಿತ್ತು. ಗ್ರೀಕ್ ಪದ τρέχω (*trechō*) ಎಂಬುದರ ಅರ್ಥವು "ಓಡು" ಎಂದಾಗಿದೆ. "ಬೇಗನೆ ಹಬ್ಬಿ" ಮತ್ತು "ಪ್ರಖ್ಯಾತಿ ಹೊಂದುವ" ಎಂಬ ಎರಡೂ ಮಾತುಗಳು ವರ್ತಮಾನಕಾಲ ರೂಪದಲ್ಲಿದ್ದು, ನಿರಂತರವಾದ ಕ್ಷಿಪ್ರ ಮತ್ತು ಸಂಪೂರ್ಣ ಯಶಸ್ವಿಯಾಗಿ ಕರ್ತನ ವಾಕ್ಯವು ಹರಡುವಂತಾಗಲೆಂಬುದೇ ಮನವಿಯಾಗಿತ್ತು ಎಂಬುದನ್ನು ತೋರಿಸುತ್ತದೆ.

*"ನಾವು ಸೇವೆ ಮಾಡುವದಕ್ಕಾಗಿ ಸುರಕ್ಷತೆಯಿಂದ ಉಳಿಯುವಂತಾಗಲು*

*ಪ್ರಾರ್ಥಿಸಿರಿ.”* ಆ ಸಮಯದಲ್ಲಿ ತನಗೆ ತೊಂದರೆಯನ್ನು ನೀಡುತ್ತಿದ್ದ ಕೆಲವೊಂದು ವೈರಿಗಳಿಂದ ಬಿಡುಗಡೆಯಾಗುವ ಹಾಗೆ ಪ್ರಾರ್ಥಿಸಬೇಕೆಂದು ಪೌಲನು ಕೇಳಿಕೊಳ್ಳುತ್ತಿರಬಹುದಾಗಿದೆ. ಇಲ್ಲಿ ಆತನು ಕೊರಿಂಥದೊಳಗೆ ತನ್ನನ್ನು ಕಷ್ಟಕ್ಕೆ ಗುರಿ ಪಡಿಸುತ್ತಿದ್ದ ಯೆಹೂದ್ಯರನ್ನು-ಅಪೊಸ್ತಲನ ಸೇವೆಗೆ ವಿರೋಧ ಮಾಡುತ್ತಿದ್ದ ಯೆಹೂದ್ಯರು-ಸೂಚಿಸಿ ಹೇಳುತ್ತಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 18:1-18). ಅವರು ಬಹುಶಃ ಥೆಸಲೋನಿಕ ಮತ್ತು ಬೆರೋಯದಲ್ಲಿ ಆತನನ್ನು ವಿರೋಧಿಸಿದ ಯೆಹೂದ್ಯರು ಆಗಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 17:5, 13).

ಎಲ್ಲರಲ್ಲಿಯೂ ನಂಬಿಕೆಯಿಲ್ಲದ ಕಾರಣದಿಂದ ತನಗೆ ವಿರೋಧವು ಎದುರಾಗುವದು ಎಂಬುದು ಪೌಲನಿಗೆ ಗೊತ್ತಿತ್ತು. ನಮ್ಮ ಪರಿಸ್ಥಿತಿಯು ಅದಕ್ಕಿಂತ ಉತ್ತಮವಾದದ್ದೇನೂ ಆಗಿರಲಾರದು.

ನಮ್ಮಲ್ಲಿ ಕೆಲವರ ಪ್ರಾರ್ಥನಾ ಮನವಿಗಳು ಏನಾಗಿರಬಹುದಾಗಿದೆ? ನಮಗೋಸ್ಕರ ಪ್ರಾರ್ಥನೆಯಲ್ಲಿ ಬೇಡಿಕೊಳ್ಳಬೇಕೆಂದು ನಾವು ಬೇರೆಯವರಿಗೆ ವಿನಂತಿಸಿಕೊಳ್ಳಬಹುದಾದ ಪ್ರಾಮುಖ್ಯವಾದ ಸಂಗತಿಗಳಾವವು? ನಿಶ್ಚಯವಾಗಿಯೂ, ಇವರೆಡು ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವವು. EC

**“ನಮಗೋಸ್ಕರ ಪ್ರಾರ್ಥಿಸಿರಿ” (3:1, 2)**

ದೇವರು ಪ್ರಾರ್ಥನೆಗೆ ಉತ್ತರವನ್ನು ಕೊಡುತ್ತಾನೆ ಎಂಬ ಅತ್ಯಾಸಕ್ತಿಯುಳ್ಳ ನಂಬಿಕೆಯನ್ನು ಹೊಂದಿದ್ದನು. ಆತನು ಸತತವಾಗಿ ಸಭೆಗೋಸ್ಕರ ಪ್ರಾರ್ಥಿಸುತ್ತಿದ್ದನು ಮತ್ತು ತನಗೋಸ್ಕರ ಪ್ರಾರ್ಥಿಸುವಂತೆ ಸಭೆಯನ್ನು ಕೇಳಿಕೊಳ್ಳುತ್ತಿದ್ದನು. ಪ್ರಾರ್ಥನೆಯು ದೇವರೊಂದಿಗೆ ಆರಾಧನೆಯಲ್ಲಿ ನಾವು ಮಾತಾಡುವ ಕ್ರಿಯೆಯಾಗಿರುತ್ತದೆ. ನಾವು ಪ್ರಾರ್ಥಿಸುವಾಗ, ಸ್ತೋತ್ರಗಳನ್ನು ಸಲ್ಲಿಸುತ್ತೇವೆ, ಮನವಿಗಳನ್ನು ಮಾಡುತ್ತೇವೆ, ಅಥವಾ ನಮ್ಮ ಭಾವಗಳನ್ನು ದೇವರ ಮುಂದೆ ಬಿಚ್ಚಿಡುತ್ತೇವಷ್ಟೆ. “ನೀತಿವಂತನ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬಹು ಬಲವಾಗಿದೆ” (ಯಾಕೋಬ 5:16b). ಪೌಲನು ಈ ಕೆಳಗಿನವುಗಳಿಗೋಸ್ಕರ ಪ್ರಾರ್ಥಿಸುವಂತೆ ಥೆಸಲೋನಿಕದವರನ್ನು ಕೇಳಿಕೊಳ್ಳುತ್ತಾನೆ:

*“ಕರ್ತನ ವಾಕ್ಯವು ಬೇಗನೆ ಹಬ್ಬುವಂತೆ”* (ವ. 1). ಕರ್ತನ ವಾಕ್ಯವು ಸುವಾರ್ತೆಯಾಗಿದೆ (ನೋಡಿರಿ 1 ಥೆಸಲೋನಿಕ 2:8). ಯೇಸುವಿನ ಶುಭವಾರ್ತೆಯು ಆಗ ಹಬ್ಬುತ್ತಿರುವ ಪ್ರಕಾರವೇ ಒಬ್ಬನಿಂದ ಮತ್ತೊಬ್ಬನಿಗೆ “ಬೇಗನೆ ಹಬ್ಬುವದು” ಎಂದು ಪೌಲನು ನಿರೀಕ್ಷಿಸಿದನು. ಮಜಲು ಓಟದಲ್ಲಿ (ರೀಲೆ ಓಟ) ಒಂದು ಕೋಳವೆಯು ಒಬ್ಬ ಓಟಗಾರನಿಂದ ಮತ್ತೊಬ್ಬನ ಕೈಗೆ ವರ್ಗಾಯಿಸಲ್ಪಡುವದನ್ನು ಊಹಿಸಿಕೊಳ್ಳಿರಿ; ಸುವಾರ್ತೆಯ ಹಾಗೆಯೇ ಹಬ್ಬುವಂತಾಗಲೆಂದು ಪೌಲನು ಹಾರೈಸಿದನು. ಕೀರ್ತನೆ 147:15 ಹೀಗೆ ಹೇಳುತ್ತದೆ, “ತನ್ನ ನುಡಿಯನ್ನು ಭೂಲೋಕಕ್ಕೆ ಕಳುಹಿಸುತ್ತಾನೆ; ಆತನ ವಾಕ್ಯವು ಬಹುವೇಗಶಾಲಿಯಾಗಿದೆ.”

*“ಕರ್ತನ ವಾಕ್ಯವು ಪ್ರಖ್ಯಾತಿ ಹೊಂದುವ ಹಾಗೆ”* (ವ. 1). “ಪ್ರಖ್ಯಾತಿ” ಎಂದು ಹೇಳುವ ಮೂಲಕ ಪೌಲನ ತಾತ್ಪರ್ಯವು ಏನಾಗಿತ್ತೆಂದರೆ ಸುವಾರ್ತೆಯನ್ನು ಆಳಿಸುವವರು ವಾಕ್ಯದ ಮೌಲ್ಯವನ್ನು ಗಂಭೀರವಾಗಿ ಪರಗಣಿಸಿ, ಅದನ್ನು ಕೆಲವು ಮನುಷ್ಯರ ತತ್ವಜ್ಞಾನವೆಂಬಂತೆ

ಅಲ್ಲ, ಆದರೆ ದೇವರ ವಾಕ್ಯವೆಂದು ಅಂಗೀಕರಿಸುವಂತಾಗಲಿ ಎಂಬದೆ.

ಥೆಸಲೋನಿಕದವರು ಸಂದೇಶವನ್ನು ಉತ್ತಮವಾಗಿ ಸ್ವೀಕರಿಸಿಕೊಂಡರು ಮತ್ತು ಅದಕ್ಕಾಗಿ ಪೌಲನು ಅವರನ್ನು ಶ್ಲಾಘಿಸುತ್ತಾನೆ (ವ. 1). ಅವರು ಕರ್ತನ ವಾಕ್ಯವನ್ನ ಮೇಲಕ್ಕೆತ್ತಿ ಅದನ್ನು ಮಹಿಮೆಗೊಳಿಸಿದರು. ಪೌಲನು 1 ಥೆಸಲೋನಿಕ 2:13ರಲ್ಲಿ ಅದೇ ರೀತಿಯಾದಂಥ ಮಾತುಗಳನ್ನು ಬರೆದನು, "ಹೀಗಿರಲಾಗಿ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡುತ್ತೇವೆ." ಸುವಾರ್ತೆಯನ್ನು ದೇವರ ಸಂದೇಶವೆಂದು ಅಂಗೀಕರಿಸಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಸುವಾರ್ತೆಯು "ದೇವರ ಬಲಸ್ವರೂಪವಾಗಿದ್ದು ನಂಬುವವರೆಲ್ಲರಿಗೆ ರಕ್ಷಣೆ ಉಂಟು ಮಾಡುವಂಥದಾಗಿದೆ" (ರೋಮಾ 1:16).

*"ನಾವು ಮೂರ್ಖರಾದ ದುಷ್ಟಜನರ ಕೈಯಿಂದ ತಪ್ಪಿಸಲ್ಪಡುವಂತೆ ಪ್ರಾರ್ಥಿಸಿರಿ; ಎಲ್ಲರಲ್ಲಿ ಕ್ರಿಸ್ತನಂಬಿಕೆಯಿಲ್ಲವಲ್ಲಾ"* (ವ. 2). ಪ್ರತಿಯೊಬ್ಬರೂ ಸತ್ಯವನ್ನು ಅಂಗೀಕರಿಸಿಕೊಳ್ಳುವದಿಲ್ಲ. ನಂಬಿಕೆಯಿಡುವಂತೆ ಎಲ್ಲರಿಗೂ ಆಮಂತ್ರಣವು ಇರುತ್ತದೆ, ಆದರೆ ಎಲ್ಲರೂ ಈ ಸದವಕಾಶದ ಪ್ರಯೋಜನವನ್ನು ಪಡೆದುಕೊಳ್ಳುವದಿಲ್ಲ. ಪೌಲನು ಇಲ್ಲಿ ತಾನು ಮತ್ತು ತನ್ನ ಜೊತೆಗೆಲಸದವರು ಸಾರಿದ ಸಿದ್ಧಾಂತಗಳನ್ನು ತಿರಸ್ಕರಿಸಿದವರನ್ನು ಪರೋಕ್ಷವಾಗಿ ಸೂಚಿಸುತ್ತಿದ್ದಾನೆ. ಈ "ಮೂರ್ಖರಾದ ದುಷ್ಟಜನರು" ಬಹುಶಃ ಯೇಸು ಕ್ರಿಸ್ತನ ಸಂದೇಶವನ್ನು ಅಂಗೀಕರಿಸಿಕೊಳ್ಳದ ಯೆಹೂದ್ಯರು ಆಗಿರಬಹುದಾಗಿದೆ. ಅವರು ಸತತವಾಗಿ ಪೌಲನನ್ನು ಮತ್ತು ಆತನ ಗುಂಪನ್ನು ವಿರೋಧಿಸಿದರು.

ಅಪೊಸ್ತಲರ ಕೃತ್ಯಗಳು 17ರಲ್ಲಿ, ಪೌಲನ ಸಂದೇಶಕ್ಕೆ ಗ್ರೀಕ್ ರಿಂದ ಯಶಸ್ವಿಯಾದ ಪ್ರತ್ಯುತ್ತರವನ್ನು ಕಂಡನು, ಆದರೆ ಯೆಹೂದ್ಯರು ಹೊಟ್ಟೇಕಿಚ್ಚುಗೊಂಡವರಾಗಿ "ಪೇಟೆಯಲ್ಲಿ ತಿರುಗಾಡುವ ಕೆಲವು ಪೋಕರನ್ನು ಕರೆದುಕೊಂಡು ಬಂದು" ಗುಂಪು ಕೂಡಿಸಿ ಗದ್ದಲ ಎಬ್ಬಿಸಿದರು (ಅಪೊಸ್ತಲರ ಕೃತ್ಯಗಳು 17:5). ಬಹುಶಃ ಪೌಲನು ಈ ಘಟನೆಯನ್ನು ಅಥವಾ ಅದರಂತಹ ಬೇರೆ ಘಟನೆಯೊಂದನ್ನು ಮನಸ್ಸಿನಲ್ಲಿಟ್ಟುಕೊಂಡು 2ನೇ ವಚನವನ್ನು ಬರೆದನೆಂದು ತೋರುತ್ತದೆ. ಈ ಗದ್ದಲದ ಕಾರಣದಿಂದಲೇ ಆತನು ಆ ಸ್ಥಳವನ್ನು ತೊರೆದು ಬೆರೋಯಕ್ಕೆ ಹೋಗಬೇಕಾಗಿತ್ತು.

ಕೊರಿಂಥದಲ್ಲಿ, ಪೌಲನನ್ನು ಯೆಹೂದ್ಯರ ದೋಷಾರೋಪಣೆಗಳ ಕಾರಣದಿಂದಲೇ ಗಲ್ಲಿಯೋನನ ಮುಂದೆ ನ್ಯಾಯ ವಿಚಾರಣೆಗೆ ಗುರಿಪಡಿಸಲಾಯಿತು. ಲೂಕನು ಹೀಗೆ ಬರೆಯುತ್ತಾನೆ, "ಗಲ್ಲಿಯೋನನು ಆಖಾಯದ ಅಧಿಪತಿಯಾಗಿರಲು ಯೆಹೂದ್ಯರು ಒಗ್ಗಟ್ಟಾಗಿ ಪೌಲನ ಮೇಲೆ ಬಿದ್ದು ಅವನನ್ನು ನ್ಯಾಯಸ್ಥಾನದ [βῆμα, *bēma*] ಮುಂದೆ ಹಿಡಿತಂದು- ಇವನು ದೇವರನ್ನು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಪೂಜಿಸುವದಕ್ಕೆ ಜನರನ್ನು ಒಡಂಬಡಿಸುತ್ತಾನೆಂದು ದೂರುಹೇಳಿದರು" (ಅಪೊಸ್ತಲರ ಕೃತ್ಯಗಳು 18:12). ಅಂಥ ಜನರಿಂದ "ತಪ್ಪಿಸಲ್ಪಡುವ" ಹಾಗೆ ಪ್ರಾರ್ಥಿಸಬೇಕೆಂದು ಆತನು ಕೇಳಿಕೊಂಡದ್ದರಲ್ಲಿ ಆಶ್ಚರ್ಯವೇನಿಲ್ಲ.

ಥೆಸಲೋನಿಕದವರು ತಾವು ಎದುರಿಸುವ ನಿರ್ದಿಷ್ಟವಾದ ಸಂಗತಿಗಳಿಗಾಗಿ

ಪ್ರಾರ್ಥಿಸಬೇಕಾಗಿದ್ದ ರೀತಿಯಲ್ಲಿಯೇ, ನಾವು ವಾಕ್ಯವನ್ನು ಹರಡಿಸುವ ಮತ್ತು "ದುಷ್ಟಜನರ" ಕೈಯಿಂದ ತಪ್ಪಿಸಲ್ಪಡುವಂತಹ ನಿರ್ದಿಷ್ಟವಾದ ನಮ್ಮ ಪರಿಸ್ಥಿತಿಗಳಿಗೋಸ್ಕರ ಪ್ರಾರ್ಥನೆಯನ್ನು ಮಾಡಬೇಕು. ಸುವಾರ್ತೆಯು ಲೋಕದಲ್ಲೆಲ್ಲಾ ಹರಡುವಂತೆ ನಾವು ಪ್ರಾರ್ಥಿಸಬೇಕು, ನಿರ್ದಿಷ್ಟವಾದ ದೇಶಗಳಿಗೋಸ್ಕರ ಮತ್ತು ಸಮುದಾಯಗಳಿಗೋಸ್ಕರ ಪ್ರಾರ್ಥಿಸಬೇಕು, ಮತ್ತು ಕ್ರಿಸ್ತನ ಮೂಲಕ ದೇವರು ಕೊಟ್ಟಿರುವ ರಕ್ಷಣೆಯ ವರವನ್ನು ಹೆಚ್ಚೆಚ್ಚು ಜನರು ಅಂಗೀಕರಿಸಿಕೊಳ್ಳುವ ಹಾಗೆ ನಾವು ಪ್ರಾರ್ಥನೆ ಮಾಡಬೇಕು. ಅಲ್ಲದೆ, ನಾವು ಬಿಡುಗಡೆಗಾಗಿ ಪ್ರಾರ್ಥನೆ ಮಾಡಬೇಕು. ವಿವಿಧ ದೇಶಗಳಲ್ಲಿ ವಿವಿಧ ಪ್ರಮಾಣದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಹೊಂದಿವೆ, ಆದರೆ ಕ್ರೈಸ್ತರು ಎಲ್ಲೆಡೆಯೂ ದೇವರ ವಾಕ್ಯವು ಹಬ್ಬುವದನ್ನು ವಿರೋಧಿಸುವವರನ್ನು ಎದುರುಗೊಳ್ಳುತ್ತಾರೆ. ಸುವಾರ್ತೆಯು ಭೂಲೋಕದ ಕಟ್ಟಕಡೆಯ ತನಕವೂ ಹರಡುವದನ್ನು ಯಾವದೂ ತಡೆಯದಂತೆ ನಾವು ಸಾರ್ವಜನಿಕವಾಗಿ, ವೈಯಕ್ತಿಕವಾಗಿ, ಮತ್ತು ಅತ್ಯಾಸಕ್ತಿಯಿಂದ ಪ್ರಾರ್ಥನೆ ಮಾಡೋಣ. EE

**"ಕರ್ತನು ನಂಬಿಗಸ್ತನು" (3:3)**

2ನೇ ವಚನದ ಅಂತ್ಯದಲ್ಲಿ, ಪೌಲನು ಹೀಗೆ ಬರೆಯುತ್ತಾನೆ, "ಎಲ್ಲರಲ್ಲಿ ಕ್ರಿಸ್ತನಂಬಿಕೆಯಿಲ್ಲವಲ್ಲಾ." ಶಬ್ದಾಡಂಬರವನ್ನು ಬಳಸುತ್ತಾ, ಆತನು ಹೇಳಿಕೆಯನ್ನು ನೀಡಿದ ಬಳಿಕ, "ಆದರೆ ಕರ್ತನು ನಂಬಿಗಸ್ತನು" ಎಂದು ಹೇಳುತ್ತಾನೆ. ನಿಷ್ಠೆಯಿಂದಿರುವದಕ್ಕೆ ದುಷ್ಟಜನರಿಗಿರುವ ಅಸಮರ್ಥತೆಗೆ ವಿರುದ್ಧವಾಗಿ ದೇವರ ನಂಬಿಗಸ್ತಿಕೆಯು ನೆಲೆಯಾಗಿ ನಿಲ್ಲುತ್ತದೆ. "ಕರ್ತನು ನಂಬಿಗಸ್ತನು" ಎಂಬ ಆತನ ಮಾತಿನ ತಾತ್ಪರ್ಯವೇನು?

*ನಾವು ಆತನ ಮೇಲೆ ಭರವಸವನ್ನಿಡಬಹುದು*. ಜನರು ಅನೇಕ ವೇಳೆ ತಮ್ಮ ವಾಗ್ದಾನಗಳನ್ನು ಮೀರುತ್ತಾರೆ, ಆದರೆ ದೇವರ ಎಂದಿಗೂ ಹಾಗೆ ಮಾಡುವವನಲ್ಲ (ರೋಮಾ 3:4; 1 ಕೊರಿಂಥ 1:9; 2 ಕೊರಿಂಥ 1:18; 1 ಥೆಸಲೋನಿಕ 5:24; ಇಬ್ರಿಯ 6:18). ಎಲ್ಲಾ ಕ್ರೈಸ್ತರು ಆತನಿಗೆ ಪ್ರಾರ್ಥನೆಯನ್ನು ಮಾಡಬೇಕು ಮತ್ತು ಅವರ ಅಗತ್ಯತೆಗಳಿಗೆ ಪ್ರತ್ಯುತ್ತರವನ್ನು ನೀಡುವನೆಂಬುದನ್ನು ತಿಳಿದುಕೊಳ್ಳತಕ್ಕದ್ದು.

*ಆತನು ನಮ್ಮನ್ನು "ದೃಢಪಡಿಸುವನು."* ದೇವರು ಸರ್ವಶಕ್ತನು. ಯೇಸು "ದೇವರಿಗೆ ಎಲ್ಲವು ಸಾಧ್ಯವೇ" ಎಂದು ಹೇಳಿದನು (ಮತ್ತಾಯ 19:26b). "ದೃಢಪಡಿಸು" ಎಂಬುದಕ್ಕಿರುವ ಗ್ರೀಕ್ ಪದವು στηρίζω (*stērizō*), ಅದರರ್ಥವು ನೆಲೆಗೊಳಿಸು ಅಥವಾ ಸ್ಥಿರಗೊಳಿಸು ಅಥವಾ ಆಧಾರವಾಗು ಎಂದಾಗಿದೆ. ಪ್ರವಾಹದ ವೇಳೆಯಲ್ಲಿ ಒಂದು ಆಣೆಕಟ್ಟಿಗೆ ಸಾವಿರಾರು ಮರಳಿನ ಚೀಲಗಳು ಹೇಗೆ ಆಧಾರವಾಗಿ ನಿಲ್ಲುವವೋ ಅದೇ ರೀತಿಯಲ್ಲಿ ದೇವರು ನಮಗೆ ಆಧಾರವಾಗಿರುವನು. ಕ್ರಿಸ್ತನು ನಮ್ಮ ಸಂಗಡ ಯುಗದ ಸಮಾಪ್ತಿಯ ವರೆಗೂ ಇರುವೆನೆಂದು ವಾಗ್ದಾನ ಮಾಡಿರುವನು (ಮತ್ತಾಯ 28:20). ಪೌಲನು ತನಗಿರುವ ದೈವಿಕ ಬೆಂಬಲವನ್ನು ಗ್ರಹಿಸಿಕೊಂಡವನಾಗಿ ಹೀಗೆ ಬರೆಯುತ್ತಾನೆ, "ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13).

*ಆತನು ನಮ್ಮನ್ನು "ಕಾಪಾಡುವನು."* ದೇವರು ಥೆಸಲೋನಿಕದವರನ್ನು "ಕೆಡುಕನ ಕೈಗೆ

ಸಿಕ್ಕದಂತೆ" ಕಾಪಾಡುವನೆಂದು ಪೌಲನು ಹೇಳುತ್ತಾನೆ. ಗ್ರೀಕ್ ಪದ πονηρός (*ponēros*) ಎಂಬುದರ ಅರ್ಥವು ಸಾಮಾನ್ಯ ಅರ್ಥದಲ್ಲಿ ಕೆಡುಕು ಅಥವಾ NASBಯು ಹೇಳುವ ಪ್ರಕಾರ "ಕೆಡುಕನು" ಎಂದರ್ಥವಾಗಿರಬಲ್ಲದು. "ಕೆಡುಕನು" ಎಂಬುದು ಸೈತಾನನನ್ನು ಸೂಚಿಸುತ್ತದೆ (ನೋಡಿರಿ ಎಫೆಸ 6:16). "ಕೆಡುಕು" ಎಂಬುದು ಸೈತಾನನಿಂದ ನಡಿಸಿಕೊಂಡು ಹೋಗಲ್ಪಡುವ ಕೃತ್ಯಗಳನ್ನು ಸೂಚಿಸುತ್ತದೆ. ದೇವರು ಕಾಪಾಡುವಿಕೆಯ ಚಿತ್ರಣವವು ಏನಂದರೆ ದೇವಜನರು ಕೇಡಿಗೊಳಗಾಗದಂತೆ ಕಾಯುವನು, ಕಾಪಾಡುವನು, ಮತ್ತು ಭದ್ರಪಡಿಸಿದ ಗೋಡೆಗಳಿಂದ ಆವರಿಸಲ್ಪಟ್ಟಿರುವದು ಎಂದಾಗಿರುತ್ತದೆ.

ಶೋಧನೆಗಳನ್ನು ಜಯಿಸುವಂತೆ ದೇವರು ನಮ್ಮನ್ನು ಬಲಪಡಿಸುವನು. ಆತನು ನಮ್ಮ ಶಕ್ತಿಗೆ ಮೀರುವಷ್ಟು ಅತಿ ಬಲಿಷ್ಠ ಶೋಧನೆಗಳಿಂದ ನಮ್ಮನ್ನು ಕಾಪಾಡುವದು. ಪೌಲನು ಕೊರಿಂಥದ ಸಹೋದರರನ್ನು ಇದೇ ರೀತಿಯ ಮಾತುಗಳಿಂದ ಪ್ರೋತ್ಸಾಹಿಸಿದನು, "ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ತನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು" (1 ಕೊರಿಂಥ 10:13). ಶೋಧನೆಗೊಳಗಾದಾಗ, ನಾವು ಹೊರ ಹೋಗುವ ದಾರಿಯನ್ನು ತೆಗೆದುಕೊಳ್ಳುವದಕ್ಕೆ ಸಿದ್ಧರಾಗಿರಬೇಕು; ಆದರೆ ದೇವರು ನಮಗೆ ನಂಬಿಗಸ್ತನಾಗಿದ್ದು ಬಲಗೊಂಡವರಾಗಿ ಉಳಿಯುವದಕ್ಕೆ ನಮಗೆ ಅಗತ್ಯವಾದ ಶಕ್ತಿಯನ್ನು ಮತ್ತು ಭದ್ರತೆಯನ್ನು ಕೊಡುವವನಾಗಿದ್ದಾನೆ. EE

### "ಕರ್ತನ ಮೂಲಕವಾಗಿ ನಮಗೆ ಭರವಸವುಂಟು" (3:4)

ತಾನು ಥೆಸಲೋನಿಕದವರಿಗೆ ಕೊಡುತ್ತಿರುವ ಆಜ್ಞೆಗಳಿಗೆ ಅವರು ವಿಧೇಯರಾಗುವರೆಂಬ ಭರವಸವು ಪೌಲನಿಗಿತ್ತು. ಆತನಿಗೆ ಅಂಥ ಭರವಸವು ಇರುವದಕ್ಕೆ ಕಾರಣವೇನು? ಸಭೆಯು ಆತನ ಬೋಧನೆಗಳನ್ನು ಎತ್ತಿ ಹಿಡಿಯುವದು ಎಂದು ಆತನಿಗೆ ಭರವಸೆಯನ್ನು ನೀಡುವಂತಹ ಯಾವ ಕಾರ್ಯವನ್ನು ಸಭೆಯು ಮಾಡುತ್ತಿತ್ತು?

*ಪೌಲನ ಭರವಸವು "ಕರ್ತನ ಮೂಲಕ" ಆಗಿತ್ತು.* ಆತನು ಅವರನ್ನು ಕ್ಷಮಿಸಲ್ಪಟ್ಟವರು, "ಕರ್ತನಲ್ಲಿ" ವಿಧೇಯತೆಯುಳ್ಳ ವಿಶ್ವಾಸಿಗಳೆಂದು ಕಂಡದ್ದರಿಂದ ಆತನಿಗೆ ಅವರಲ್ಲಿ ನಂಬಿಕೆ ಹೊಂದಿದ್ದನು. ನಾವು ಸಹ "ಕರ್ತನಲ್ಲಿ" ಇರುವಂತಹ ಜನರಲ್ಲಿ, ಅವರು ಕ್ರೈಸ್ತೀಯ ತತ್ವಗಳಿಗೆ ನಂಬಿಗಸ್ತರಾಗಿರುವರೆಂದು ನಿರೀಕ್ಷಿಸುತ್ತಾ ಅದೇ ಹೆಚ್ಚು ಭರವಸೆಯನ್ನು ಇಡುವಂತಹ ಅದೇ ಒಲವು ಹೊಂದಿರಬಹುದಾಗಿದೆ. ನಮ್ಮ ಭರವಸವು ಜನರಲ್ಲಿ ಅಲ್ಲ, ಆದರೆ ಅವರನ್ನು ಅಂಧಕಾರದಿಂದ ಬೆಳಕಿನಲ್ಲಿ ಕರೆ ತಂದಿರುವ ದೇವರಲ್ಲಿಯೇ ಆಗಿದೆ (ಕೊಲೊಸ್ಸೆ 1:13; 1 ಯೋಹಾನ 1:7).

*ತಾನು ಆಜ್ಞಾಪಿಸಿದ್ದನ್ನು ಅವರು ಮಾಡುವರೆಂದು ಪೌಲನ ನಂಬಿಕೆಯಾಗಿತ್ತು.* ಆತನ ಆಜ್ಞೆಗಳು ಆತನ ಸ್ವಂತದವುಗಳಾಗಿರಲಿಲ್ಲ (1 ಕೊರಿಂಥ 14:37). ಅವುಗಳು ದೇವರಿಂದ ಹಸ್ತಾಂತರಿಸಲ್ಪಟ್ಟಿದ್ದ "ಸಂಪ್ರದಾಯಗಳು" ಅಥವಾ ಬೋಧನೆಗಳಾಗಿದ್ದವು (2 ಥೆಸಲೋನಿಕ

2:15). ಅವರು ಈ ಬೋಧನೆಗಳನ್ನು ಎತ್ತಿ ಹಿಡಿದಿದ್ದರು ಮತ್ತು ಸಂಕಷ್ಟಗಳಲ್ಲಿ ತಾಳ್ಮೆಯಿಂದಿರುವ ಮೂಲಕ ತಮ್ಮ ನಂಬಿಗಸ್ತಿಕೆಯನ್ನು ಪ್ರದರ್ಶಿಸಿದ್ದರು (1:4).

*ತಾನು ಆಜ್ಞಾಪಿಸಿದ್ದನ್ನು ಅವರು ನಿರಂತರವಾಗಿ ಮಾಡುವರು ಎಂಬ ನಂಬಿಕೆ ಪೌಲನಿಗಿತ್ತು.* ಅವರು ನಿಜವಾಗಿಯೂ ಪರಿವರ್ತನೆಗೊಂಡಿದ್ದರು ಮತ್ತು ಅವರು ಕಠಿಣ ಪರಿಸ್ಥಿತಿಗಳಲ್ಲಿ ಸ್ಥೈರಣೆಯಿಂದಿರುವದನ್ನು ಮುಂದುವರೆಸಲಿದ್ದರು. ಪೌಲನು ಇಲ್ಲಿ ಮನಸ್ಸಿನಲ್ಲಿ ಹೊಂದಿದ್ದರ ಒಂದು ಭಾಗವೆಂದರೆ ಆತನು ಈಗ 6ನೇ ವಚನದಲ್ಲಿ ಹೇಳಲು ಹೊರಟಿರುವ ಸಂಗತಿಯೇ ಆಗಿದೆ, "ಅಕ್ರಮವಾಗಿ ನಡೆಯುವವರಿಗೆ ದೂರವಾಗಿರಬೇಕು" ಎಂಬದೆ. ಅವರು ಒಂದಿಷ್ಟು ನಿಯಮಗಳನ್ನು ಕೈಕೊಂಡು ನಡೆಯುವರು ಎಂಬದಾಗಿ ಭಾವಿಸಿದನೆಂಬುದನ್ನಷ್ಟೆ ಹೇಳುತ್ತಿಲ್ಲ. ಬದಲಾಗಿ, ತಾವು ಒಬ್ಬ ಅಕ್ರಮವಾಗಿ ನಡೆಯುವ ಸಹೋದರ ಅಥವಾ ಸಹೋದರಿಗೆ ದೂರವಾಗಿರಬೇಕಾದಂತಹ ಕಠಿಣ ನಿರ್ಣಯಗಳನ್ನು ಮಾಡಬೇಕಾಗಿ ಬಂದಾಗ್ಯೂ, ಯಾವದು ಸರಿಯೋ ಅದನ್ನು ಮಾಡುವದಕ್ಕೆ ಅವರಿಗಿರುವ ಸಾಮರ್ಥ್ಯದಲ್ಲಿ ಆತನು ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತಾನೆ.

ನಮ್ಮ ವಿಷಯವೇನು? ನಾವು ಕಠಿಣ ಆಜ್ಞೆಗಳಿಗೆ ವಿಧೇಯರಾಗುತ್ತೇವೋ? ನಾವು ವೈಶಿಷ್ಟ್ಯವಾಗಿ ಮೂಲಭೂತವಾದವುಗಳನ್ನು ಪಾಲಿಸುತ್ತೇವೆ: ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ, "ಮೊದಲ ದಿನದಂದು" ಸಭೆಯಾಗಿ ಕೂಡಿ ಬರುವದು, ಮತ್ತು ಸಭೆಯಲ್ಲಿ ಹಿರಿಯರನ್ನು ಮತ್ತು ಸಭಾಸೇವಕರನ್ನು ನೇಮಿಸುವದು. ಕಠಿಣವಾದ ಆಜ್ಞೆಗಳ ವಿಷಯವೇನು? ನಾವು ಅಕ್ರಮವಾಗಿ ನಡೆಯುವವರಿಗೆ ದೂರವಾಗಿರಬೇಕೆಂದು ಅಷ್ಟೊಂದು ಮನವರಿಕೆ ಹೊಂದಿದ್ದೇವೋ? ನಾವು ಅವಿಧೇಯತೆಯನ್ನು ವಿರೋಧಿಸುತ್ತೇವೋ? ನಾವು ಒಬ್ಬ ಸಹೋದರ ಅಥವಾ ಸಹೋದರಿಗೆ ನಮ್ಮ ಕಳಕಳಿಯ ಅಗತ್ಯತೆಯು ಅತ್ಯಧಿಕವಾಗಿರುವ ವೇಳೆ ನಾವು ಅವರನ್ನು ಪ್ರೀತಿಯಲ್ಲಿ ಖಂಡಿಸುತ್ತೇವೋ? "ಆಕೆಯು ಅತ್ಯಂಥ ಇಷ್ಟವಿಲ್ಲದ ಆಜ್ಞೆಗೆ ನನ್ನನ್ನು ಅನುಸರಿಸುವಳು ಎಂದು ನಾನು ಬಲ್ಲೆನು" ಎಂದು ದೇವರು ಭರವಸೆಯಿಂದ ಹೇಳುವಂತಹ ಸಭೆಯಾಗಿ ನಾವು ಇರುವಂತೆ ಆತನು ನಮಗೆ ಸಹಾಯ ಮಾಡಲಿ! EE

## ನಮ್ಮ ಹೃದಯಗಳನ್ನು ಕ್ರಿಸ್ತನ ಕಡೆಗೆ ತಿರುಗಿಸಿಕೊಳ್ಳುವದು (3:5)

ಪೌಲನು ಥೆಸಲೋನಿಕದ ಕ್ರೈಸ್ತರ ಸಮರ್ಪಣೆಯನ್ನು ಪ್ರೋತ್ಸಾಹಿಸುವದನ್ನು ಮತ್ತು ಅದರಲ್ಲಿ ತನ್ನ ನಂಬಿಕೆ ವ್ಯಕ್ತಪಡಿಸುವದನ್ನು ಮುಂದುವರೆಸುತ್ತಾ, ಅವರು ತಮ್ಮ ಯೋಚನೆಗಳನ್ನು, ಚಿತ್ತಗಳನ್ನು, ಮತ್ತು ಭಾವಗಳನ್ನು ಆತನ ಕಡೆಗೆ ತಿರುಗಿಸಿಕೊಳ್ಳುವದನ್ನು ಮುಂದುವರೆಸುವಂತೆ ಕ್ರಿಸ್ತನು ಅವರಿಗೆ ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ನಾವು ನಮ್ಮ ಹೃದಯಗಳನ್ನು . . . ತಿರುಗಿಸಬೇಕು.

*"ದೇವರ ಪ್ರೀತಿಯಲ್ಲಿಯೂ."* ದೇವರು ನಮ್ಮ ಮೇಲಿಟ್ಟಿರುವ ಪ್ರೀತಿಯನ್ನು ಸೂಚಿಸಿ ಹೇಳುತ್ತಾನೆ (ರೋಮಾ 5:5, 6). ಆತನ ಪ್ರೀತಿಯು ಪ್ರತಿಯಾಗಿ ನಾವು ಆತನನ್ನು ಪ್ರೀತಿಸುವಂತೆ ನಮಗೆ ಸ್ಫೂರ್ತಿ ನೀಡುತ್ತದೆ (2 ಕೊರಿಂಥ 5:14, 15). ನಾವು ದೇವರನ್ನು ಪ್ರೀತಿಸುವಾಗ, ನಾವು ಆತನ ವಾಕ್ಯವನ್ನು ಕೈಕೊಂಡು ನಡೆಯುವೆವು ಮತ್ತು ಆತನಿಗೆ

ವಿಧೇಯರಾಗುವೆವು (ಯೋಹಾನ 14:23).

*“ಕ್ರಿಸ್ತನ ತಾಳ್ಮೆಯಲ್ಲಿಯೂ.”* ಕ್ರಿಸ್ತನಿಂದ ತೋರ್ಪಡಿಸಲ್ಪಟ್ಟ ಅದೇ ತಾಳ್ಮೆಯನ್ನು ಸಭೆಯು ಸಹ ಹೊಂದಿರುವಂತಾಗಲೆಂದು ಪೌಲನು ಪ್ರಾರ್ಥನೆ ಮಾಡುತ್ತಾನೆ. ಯೇಸುವಿನ ಕುಟುಂಬದವರು ಆತನನ್ನು ಅಪಹಾಸ್ಯ ಮಾಡಿದರು, ಮತ್ತು ಅಧಿಕಾರಿಗಳು ಆತನನ್ನು ದೂಷಿಸಿದರು. ಒಬ್ಬ ಶಿಷ್ಯನು ಆತನಿಗೆ ದ್ರೋಹವನ್ನು ಸಹ ಮಾಡಿದನು. ಆತನ ಜನರು ಆತನನ್ನು ಶಿಲುಬೆಗೆ ಜಡಿದರು. ಇದೆಲ್ಲದರ ಹೊರತಾಗಿಯೂ, ಆತನು ನಮ್ಮ ರಕ್ಷಣಾರ್ಥವಾಗಿ ಮರಣಿಸಬೇಕೆಂಬ ತನ್ನ ಗುರಿಯ ಕಡೆಗೆ ಛಲ ಬಿಡದೆ ಓಡಿದನು.

ನಾವು ನಮ್ಮ “ದೃಷ್ಟಿಯನ್ನು ಯೇಸುವಿನ ಮೇಲೆ ಇಡಬೇಕು,” ಜೀವನವು ನಮಗೆ ತಂದೊಡ್ಡುವ ಅಡಚಣೆಗಳಿಂದ ವಿಚಲಿತರಾಗಬಾರದು (ಇಬ್ರಿಯ 12:2). ನಾವು ಯಾವ ಸಮಸ್ಯೆಗಳನ್ನು ಎದುರಿಸುತ್ತೇವೆ? ಸಮಸ್ಯೆಗಳು ಮನೆಯಲ್ಲಿಯೋ, ಸಭೆಯಲ್ಲಿಯೋ, ಉದ್ಯೋಗ ಸ್ಥಳದಲ್ಲಿಯೋ, ಅಥವಾ ಶಾಲೆಯಲ್ಲಿಯೋ ಎಲ್ಲಿ ಇದ್ದರೂ ಸರಿಯೇ, ನಾವು ಕ್ರಿಸ್ತನ ಮೇಲೆ ನಮ್ಮ ದೃಷ್ಟಿಯನ್ನಿಡುವ ಮೂಲಕ, ನಮಗೆ ಅಗತ್ಯವಾದ ಬಲವನ್ನು ಆತನು ನಮಗೆ ಒದಗಿಸುವನು. EE

## ದೇವರು ನಮಗೋಸ್ಕರ ಏನು ಮಾಡಬಲ್ಲನು (3:3-5)

ನಮ್ಮ ಸಹೋದರರನ್ನು ಪ್ರೋತ್ಸಾಹಿಸಬಹುದಾದ ಒಂದು ದಾರಿಯೆಂದರೆ ಅವರ ಮುಂದೆ ದೇವರ ನಂಬಿಗಸ್ತಿಕೆಯನ್ನು ಎತ್ತಿ ಹಿಡಿಯುವದೇ. ಪೌಲನು ತನ್ನ ಪತ್ರಿಕೆಯನ್ನು ಇದನ್ನು ಜ್ಞಾಪಕ ಪಡಿಸುವದರೊಂದಿಗೆ ಆರಂಭಿಸುತ್ತಾನೆ. ದೇವರು ಅವರ ಸಂಗಡ ಇರುವನು ಮತ್ತು ಅವರ ಪರಿಸ್ಥಿತಿಗಳಲ್ಲಿ ಅಗತ್ಯವಾಗುವದನ್ನು ಒದಗಿಸುವನು ಎಂಬುದನ್ನು ಸಹೋದರರು ತಿಳಿದುಕೊಳ್ಳಬೇಕೆಂಬುದು ಆತನ ಬಯಕೆಯಾಗಿತ್ತು.

*“ಆತನು ತನ್ನ ಬಲವನ್ನು ಕೊಡುವನು.”* ಅವರು ಸತ್ಯದಲ್ಲಿ ಮತ್ತು ನಂಬಿಕೆಯಲ್ಲಿ ನಿಂತಿರುವಾಗ ದೇವರು ಅವರಿಗೆ ಪ್ರೋತ್ಸಾಹವನ್ನು ಕೊಡುವನು. ಆತನು ತನ್ನ ಮಕ್ಕಳನ್ನು ಸ್ಥಿರಗೊಳಿಸುವನು.

*“ಆತನು ನಿಮ್ಮನ್ನು ಕೆಡುಕನಿಂದ ತಪ್ಪಿಸಿ ಕಾಪಾಡುವನು.”* ಆತನ ನಂಬಿಗಸ್ತಿಕೆಯು ಅವರನ್ನು ಕೆಡುಕನಿಂದ ಕಾಪಾಡುವದು. ಸೈತಾನನು ತನಗೆ ಸಾಧ್ಯವಾದಷ್ಟು ಜನರನ್ನು ನುಂಗಬೇಕೆಂದು ಪ್ರಯತ್ನಿಸುತ್ತಾ ತಿರುಗಾಡುವ ಸಿಂಹದಂತಿದ್ದಾನೆ (1 ಪೇತ್ರ 5:8). ನಾವು ಯೇಸುವಿನ ಮೂಲಕ ನಿರಂತರವಾಗಿ ದೇವರಲ್ಲಿ ಮರೆಯಾಗಿರಬೇಕಾದ ಅಗತ್ಯವಿರುತ್ತದೆ.

*“ಆತನು ನಿಮ್ಮ ಹೃದಯಗಳನ್ನು ದೇವರ ಪ್ರೀತಿಯೊಳಗೆ ನಡೆಸುತ್ತಾನೆ.”* ಅವರು ತಮ್ಮ ಮೇಲೆ ದೇವರು ಇಟ್ಟಿರುವ ಪ್ರೀತಿಯ ಕುರಿತ ಒಂದು ಆಳವಾದ ಅರ್ಥಮಾಡಿಕೊಳ್ಳುವಿಕೆಗೆ ಮತ್ತು ದೇವರ ಮೇಲೆ ದೊಡ್ಡದಾದ ಪ್ರೀತಿಯನ್ನಿಡುವಂತೆ ನಡೆಸಲ್ಪಡುತ್ತಾರೆ. ದೇವರು ನಮ್ಮನ್ನು ತನ್ನ ಪ್ರೀತಿಯೊಳಗೆ ಕರೆ ತರುವದಕ್ಕಾಗಿ ಯಾವಾಗಲೂ ನಿರತನಾಗಿರುತ್ತಾನೆ.

*“ಆತನು ನಿಮ್ಮನ್ನು ಕ್ರಿಸ್ತನ ಸ್ಥಿರತೆಯೊಳಗೆ ನಡೆಸುತ್ತಾನೆ.”* ಇಲ್ಲಿ “ಸ್ಥಿರತೆ” ಎಂಬುದು ಉತ್ತಮ ಅನುವಾದವಾಗಿರುವದು. ಅದು ತಾಳ್ಮೆಯಿಂದ ಕಾಯುವದು ಎಂದಲ್ಲ, ಆದರೆ

ಸ್ಥೈರಣೆಯಿಂದಿರುವದು ಎಂಬ ಅರ್ಥವಿರುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕ್ರಿಸ್ತನು ಭೂಮಿಯ ಮೇಲಿರುವಾಗ ತಾನು ಅನುಭವಿಸಿದ ಸಂಕಷ್ಟಗಳ ವೇಳೆ ತೋರ್ಪಡಿಸಿದ ಸ್ಥೈರಣೆಯನ್ನು ತಮ್ಮ ಹೃದಯಗಳಲ್ಲಿ ಪುನರುತ್ಪಾದಿಸಬೇಕೆಂದು ಅವರನ್ನು ಕೇಳಿಕೊಳ್ಳುತ್ತಿದ್ದಾನೆ.

ದೇವರು ತನ್ನ ಮಕ್ಕಳಿಗಾಗಿ ಏನು ಮಾಡುವನು? ಆತನು ನಮ್ಮನ್ನು ದೃಢಪಡಿಸುವನು, ನಮ್ಮನ್ನು ಕೆಡುಕನ ಕೈಯಿಂದ ತಪ್ಪಿಸಿ ಕಾಯುವನು, ನಮ್ಮನ್ನು ತನ್ನ ಪ್ರೀತಿಯಲ್ಲಿ ದಾರಿ ನಡಿಸುವನು, ಮತ್ತು ನಮ್ಮನ್ನು ಕ್ರಿಸ್ತನ ತಾಳ್ಮೆಯೊಳಗೆ ನಡಿಸುವನು. ನಾವು ಸಂತೋಷವಾಗಲಿಲ್ಲವೋ? ಎಂಥ ಅದ್ಭುತವಾದ ಪರಲೋಕದ ತಂದೆಯು ನಮಗಿದ್ದಾನೆ! EC

## ಅಕ್ರಮವಾಗಿ ನಡೆಯುವವರ ವಿಷಯದಲ್ಲಿ ಕ್ರಮ ಕೈಗೊಳ್ಳುವದು (3:6-12)

ಕ್ರೈಸ್ತರು ಒಂದು ಸಮುದಾಯದಲ್ಲಿ ಹೇಗೆ ಒಟ್ಟಾಗಿ ಜೀವಿಸಬೇಕೆಂಬುದರ ಕುರಿತು ಈ ಸ್ಪಷ್ಟವಾದ ಅಪ್ಪಣೆಗಳನ್ನು ಕೊಟ್ಟನು. ಆತನು ಅವರಿಗೆ ಏನು ಹೇಳಿದನು? ಸಹೋದರರು ಹೇಗೆ ಒಟ್ಟಾಗಿ ಜೀವಿಸಬೇಕು?

*"ಅಶಿಸ್ತಿನಿಂದ ನಡೆಯುವವರಿಗೆ ದೂರವಾಗಿರಿ."* ಅವರು ಅಶಿಸ್ತಿನಿಂದ ಜೀವಿಸುತ್ತಿರುವ ಸಹೋದರನಿಗೆ ಅಥವಾ ಸೋಮಾರಿತನದಲ್ಲಿ ಜೀವಿಸುತ್ತಿರುವ ಸಹೋದರನಿಗೆ ತಮ್ಮೊಂದಿಗೆ ಅನ್ಯೋನ್ಯತೆಯನ್ನಿಟ್ಟುಕೊಳ್ಳಲು ಬಿಡಬಾರದಿತ್ತು. "ಅಕ್ರಮವಾಗಿ" (KJV) ಎಂಬ ಪದವು ಒಂದು ಮಿಲಿಟರಿ ಪದವಾಗಿದ್ದು, "ಪಂಕ್ತಿಯನ್ನು ಬಿಟ್ಟು ಹೊರಗಿರುವವರು" ಎಂದರ್ಥವಾಗಿದೆ.

ಆತನು ಈ ಆಜ್ಞೆಯನ್ನು "ಕರ್ತನಾದ ಯೇಸು ಕ್ರಿಸ್ತನಲ್ಲಿ" ಕೊಡುತ್ತಾನೆ. ಈ ಮಾತು ಪೌಲನಿಗೆ ಹೇಳಿರುವದಕ್ಕೆ ಸಾಧ್ಯವಾಗಬಹುದಾದಷ್ಟು ಅಧಿಕಾರಯುತವಾಗಿತ್ತು. ಆದಾಗ್ಯೂ, ಪೌಲನು ಅಕ್ರಮವಾಗಿರುವ ವ್ಯಕ್ತಿಯು "ಒಬ್ಬ ಸಹೋದರನು" ಎಂಬುದನ್ನು ಗುರುತಿಸಿದನು. ಆತನನ್ನು ಒಬ್ಬ ಅನ್ಯಧರ್ಮಿಯನನ್ನಾಗಿ ಅಲ್ಲ, ಆದರೆ ಒಂದೇ ಕುಟುಂಬದವನನ್ನಾಗಿ ಕಾಣಬೇಕಾಗಿತ್ತು.

"ದೂರ ಸರಿಯಿರಿ" (KJV) ಎಂಬ ಪದವು ಒಂದು ಜಿಗುಪ್ಸೆಯ ಸಂಕೇತವಾಗಿ ನೌಕಾಪಟವನ್ನು ಒಳಕ್ಕೆ ಎಳೆದುಕೊಳ್ಳುವದು ಅಥವಾ ಅಂಗಿಯನ್ನು ಮಡಚಿಟ್ಟುಕೊಳ್ಳುವ ಚಿತ್ರಣವನ್ನು ತೋರಿಸುತ್ತದೆ. ಇದರರ್ಥವು ನಾವು ಶ್ರೇಷ್ಠರು ಎಂಬ ಭಾವನೆಯಿಂದ ದೂರವಾಗುವದು ಎಂದಲ್ಲ, ಆದರೆ ನಾವು ಅಕ್ರಮವಾದ ಕೃತ್ಯಗಳನ್ನು ಅನುಮೋದಿಸುವದಿಲ್ಲ ಎಂಬುದನ್ನು ಸೂಚಿಸುವದಕ್ಕೆ ಬೇರ್ಪಡುವಿಕೆಯಾಗಿದೆ.

ಇಲ್ಲಿ ಚರ್ಚಿಸಲಾಗುತ್ತಿರುವ ಮನುಷ್ಯನ ಸೋಮಾರಿತನವು ತೋರ್ಪಡಿಸುವದೇನೆಂದರೆ ಆತನು ಪ್ರೇರಿತ ಸಂದೇಶವನ್ನು ತಿರಸ್ಕರಿಸಿದ್ದನು ಎಂಬದೆ. ಕೆಲಸ ಮಾಡುವದಕ್ಕೆ ನಿರಾಕರಿಸುವ ಸಹೋದರನಿಗೆ ಅನ್ಯೋನ್ಯತೆ ಅಥವಾ ಸಾಮಾಜಿಕ ಸಹವಾಸವನ್ನು ಒದಗಿಸಲ್ಪಡಬಾರದಾಗಿತ್ತು.

*"ನಮ್ಮನ್ನು ಅನುಸರಿಸಿರಿ."* ಪೌಲನು ಅವರ ಮಧ್ಯದಲ್ಲಿದ್ದ ವೇಳೆಯಲ್ಲಿ ಒಂದು

ಸಮರ್ಪಕವಾದ ರೀತಿಯಲ್ಲಿ ನಡೆದುಕೊಂಡಿದ್ದನು. ಆದ್ದರಿಂದ ಕೆಲಸ ಮಾಡುವದಕ್ಕೆ ಮನಸ್ಸಿಲ್ಲದ ವ್ಯಕ್ತಿಗೆ ಊಟವನ್ನು ಹಾಕಬೇಡಿರೆಂದು ಆತನು ಅವರನ್ನು ಬೇಡಿಕೊಳ್ಳುತ್ತಾನೆ. ಆತನು ಚರ್ಚೆ ಮಾಡುತ್ತಿದ್ದಂಥ ಮೈಗಳ್ಳನಾದ ಮತ್ತು ಕೆಲಸ ಮಾಡದಿರುವದನ್ನು ರೂಢಿಯಾಗಿಸಿಕೊಂಡಿದ್ದ ವ್ಯಕ್ತಿಯಾಗಿದ್ದನು. ಈ ಮನುಷ್ಯನು ಬೇರೊಬ್ಬರ ದುಡಿಮೆಯಲ್ಲಿ ಊಟವನ್ನು ಮಾಡಬಾರದಿತ್ತು. ವಾಸ್ತವದಲ್ಲಿ, ಅವರು ಆತನನ್ನು ಖಂಡಿಸಬೇಕಿತ್ತು.

ನಮ್ಮೆಲ್ಲರಿಗೂ ಇರುವಂತಹ ಜವಾಬ್ದಾರಿಯು ಇಲ್ಲಿದೆ; ಯಾರೊಬ್ಬರೂ ಅದರಿಂದ ದೂರವಿರಬಾರದು. ತನ್ನ ಕರ್ತವ್ಯವನ್ನು ಮಾಡುವದಕ್ಕೆ ವಿಫಲನಾಗುವ ಕ್ರೈಸ್ತನನ್ನು ನಾವು ಖಂಡಿಸಬೇಕು. ಈ ವಿಧವಾಗಿ ಖಂಡನೆಯು ಮಾಡಲ್ಪಡುವಾಗ, ಆ ಖಂಡನೆಯನ್ನು ಸ್ವೀಕರಿಸಿಕೊಳ್ಳುವವನಿಗೆ ನಾವು ಗಾಯವನ್ನುಂಟು ಮಾಡುವದಿಲ್ಲ, ವಾಸ್ತವದಲ್ಲಿ ನಾವು ಮುರಿದ ಜೀವಿತಗಳನ್ನು ಸರಿಪಡಿಸಿ ಸೌಖ್ಯಗೊಳ್ಳುವಂತೆ ಸಹಾಯ ಮಾಡುವಂತಹ ಕಠಿಣವಾದ ಪ್ರೀತಿಯನ್ನು ಜಾರಿಗೆ ತರುವವರಾಗಿರುತ್ತೇವೆ. EC

### ಅಶಿಸ್ತಿನಲ್ಲಿ ನಡೆಯುವವರಿಂದ ದೂರ ಸರಿದು ಇರಿ (3:6-18)

ದೇವರು ತನ್ನ ಜನರನ್ನು ಐಗುಪ್ತ್ಯದಿಂದ ಹೊರಗೆ ನಡೆಸುವಂತೆ ಮೋಶೆಗೆ ಆದೇಶಿಸಿದನು (ವಿಮೊಚನಕಾಂಡ 3:10). ತಾನು ದೇವರ ವಕ್ತಾರನು ಎಂಬದನ್ನು ಇಸ್ರಾಯೇಲ್ಯರು ತಿಳಿದುಕೊಳ್ಳುವ ಹಾಗೆ ಮೋಶೆಯು ದೇವರ ಶಕ್ತಿಯ ಮೂಲಕ ಅನೇಕ ಅದ್ಭುತಗಳನ್ನು ನಡಿಸಿದನು. ಹಾಗಿದ್ದಾಗ್ಯೂ ಅರಣ್ಯದಲ್ಲಿ ಅಲೆದಾಡುವ ವೇಳೆ, ಕೋರಹ, ದಾತಾನ್, ಮತ್ತು ಅಬೀರಾಮ ಇವರು ಮೋಶೆ ಹಾಗೂ ಆರೋನರ ವಿರುದ್ಧವಾಗಿ ಬಂಡಾಯವೆದ್ದರು (ಅರಣ್ಯಕಾಂಡ 16:3). ಈ ಮನುಷ್ಯರು ಅಶಿಸ್ತುಗೊಂಡರು ಮತ್ತು ದೇವರ ನಾಯಕರ ವಿರುದ್ಧ ಬಂಡಾಯವೆದ್ದರು. ಅವರ ಬಂಡಾಯದ ಕಾರಣದಿಂದಾಗಿ, ದೇವರು ಕೂಡಿ ಬಂದಿದ್ದ ಸಭೆಗೆ ಹೀಗೆ ಹೇಳಿದನು, “ಈ ದುಷ್ಟರ ಡೇರೆಗಳ ಬಳಿಯಲ್ಲಿ ಇರದೆ ದೂರ ಹೋಗಬೇಕು” (ಅರಣ್ಯಕಾಂಡ 16:26). ಅಂದರೆ, “ಅವರಿಂದ ನಿಮ್ಮನ್ನು ಬೇರ್ಪಡಿಸಿಕೊಳ್ಳಿರಿ!” ಆಗ ದೇವರು ಅವರ ಕೆಳಗಿನ ಭೂಮಿಯು ಬಾಯ್ದೆರೆದು ಅವರನ್ನು ನುಂಗುವಂತೆ ಮಾಡಿದನು (ಅರಣ್ಯಕಾಂಡ 16:31–33).

ದೇವರ ಬೇಡಿಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು ಮತ್ತು ವಿಧೇಯವಾಗತಕ್ಕದ್ದು ಎಂಬುದು ಸ್ಪಷ್ಟವಾಗಿರುತ್ತದೆ. ಕೆಲವು ಸಾರಿ ಆತನು ಅವಿಧೇಯರನ್ನು ನೇರವಾಗಿ ದಂಡಿಸುತ್ತಾನೆ (ಅರಣ್ಯಕಾಂಡ 16). ಇನ್ನು ಕೆಲವು ಸಾರಿ ಆತನ ಜನರು ಶಿಸ್ತುಗೊಳಿಸುವಿಕೆಯ ಕೆಲಸವನ್ನು ಮಾಡಬೇಕೆಂದು ಬೇಡಿಕೆ ಇಡುತ್ತಾನೆ (2 ಥೆಸಲೋನಿಕ 3). ಎರಡೂ ಸಂದರ್ಭಗಳಲ್ಲಿ, ವಿಧೇಯರು ಮತ್ತು ಬಂಡಾಯಗಾರರ ನಡುವೆ ಒಂದು ಸ್ಪಷ್ಟವಾದ ಗೆರೆ ಇರುತ್ತದೆ.

*“ಅಶಿಸ್ತಿನ ಜೀವನ”ದ ಅರ್ಥ.* ಗ್ರೀಕ್ ಪದವು ἀτάκτως (*ataktōs*) ಎಂಬದು, ಮತ್ತು ಸಾಮಾನ್ಯ ಅರ್ಥವು “ಉತ್ತಮ ವ್ಯವಸ್ಥೆಯನ್ನು ಪ್ರತಿಭಟಿಸುವದು, *ಅಕ್ರಮವಾಗಿರುವದು.*”[20] Robertsonನು ಅದೊಂದು “ಮಿಲಿಟರಿ ಪದವಾಗಿದ್ದು,” ಅದರರ್ಥವು “ಪಂಕ್ತಿಯಿಂದ ಹೊರಗೆ ಇರುವದು” ಎಂದಾಗಿದೆ ಎಂಬದನ್ನು ಗಮನಕ್ಕೆ ತರುತ್ತಾನೆ.[21] ಇಲ್ಲಿ ಸೇನಾನಾಯಕನ

ಸ್ವರಕ್ಕೆ ವಿಧೇಯನಾಗಲು ನಿರಾಕರಿಸುವಂತಹ ದೇವರ ಸೈನ್ಯದ ಒಬ್ಬ ಸೈನಿಕನ ಚಿತ್ರಣವಿರುತ್ತದೆ. ಬೈಬಲ್ ಹಲವಾರು ಭಕ್ತಿಹೀನ ನಡವಳಿಕೆಗಳ ಪಟ್ಟಿಯನ್ನು ಮಾಡುತ್ತದೆ: ಜಾರತನ (ಲೈಂಗಿಕ ಅನೈತಿಕತೆ), ಲೋಭ, ವಿಗ್ರಹಾರಾಧನೆ, ಬೈಯುವದು, ಕುಡಿಕತನ, ಸುಲುಕೊಳ್ಳುವಿಕೆ, ಭೇದಹುಟ್ಟಿಸುವದು, ಸುಳ್ಳು ಬೋಧನೆ, ಸೋಮಾರಿತನ, ಮತ್ತು ಹರಟೆ ಇವುಗಳು (1 ಕೊರಿಂಥ 5:11; ತೀತನಿಗೆ 3:10; 2 ಥೆಸಲೋನಿಕ 3:6-15; 2 ಯೋಹಾನ 9-11). ಇವುಗಳಲ್ಲಿ ಯಾವದಾದರೊಂದು ಕೃತ್ಯವು ಅಥವಾ ದೇವರ ಬೋಧನೆಗಳಿಗೆ ಬಂಡಾಯವನ್ನು ತೋರುವ ಬೇರೆ ಯಾವದೇ ಕೃತ್ಯಗಳೂ ಅಕ್ರಮ ಎಂದು ಪರಿಗಣಿಸಲ್ಪಟ್ಟಿರುತ್ತವೆ.

2 ಥೆಸಲೋನಿಕ 3ನೇ ಅಧ್ಯಾಯದಲ್ಲಿ ಪೌಲನು ಚರ್ಚಿಸುತ್ತಿದ್ದ ಒಂದು ನಿರ್ದಿಷ್ಟವಾದ ಸಮಸ್ಯೆಯು ಇತ್ತು. ಥೆಸಲೋನಿಕದವರಲ್ಲಿ ಕೆಲವರು ಎರಡನೆಯ ಬರೋಣದ ಕುರಿತು ಪೌಲನು ನೀಡಿದ ಬೋಧನೆಗಳನ್ನು ಅಪಾರ್ಥ ಮಾಡಿಕೊಂಡಿದ್ದರು (2 ಥೆಸಲೋನಿಕ 2:1-5). ಅವರು ಕೆಲಸ ಮಾಡುವದನ್ನು ನಿಲ್ಲಿಸಿ ಬಿಟ್ಟು ಬೇರೆಯವರ ಮೇಲೆ ಅವಲಂಭಿತರಾಗಿ ಜೀವಿಸುತ್ತಿದ್ದರೆಂಬುದು ಸ್ಪಷ್ಟವಾಗಿರುತ್ತದೆ (ವ. 8). 11ನೇ ವಚನದಲ್ಲಿ, ಪೌಲನು ಹೀಗೆ ಹೇಳಿದನು, “ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆ ಹಾಕಿ ಅಕ್ರಮವಾಗಿ ನಡೆಯುತ್ತಾರೆಂಬ ವರ್ತಮಾನ ಕೇಳಿದ್ದೇವೆ.” RSVಯು ಅವರು “ಮೈಗಳ್ಳತನದಿಂದ ಜೀವಿಸುತ್ತಿದ್ದರು” ಎಂದು ಹೇಳುತ್ತದೆ. ಈ ಜನರಿಗೆ ಬುದ್ಧಿ ಹೇಳತಕ್ಕದ್ದೆಂದು, ಅವರಿಗೆ ಭೌತಿಕವಾಗಿ ಸಹಾಯವನ್ನು ಮಾಡಕೂಡದೆಂದು ಅಪ್ಪಣೆ ಕೊಡುತ್ತಾನೆ (ವ. 15). ಮೈಗಳ್ಳರಾಗಿ ಇರಬಾರದೆಂದು ತಂದೆತಾಯಿಗಳು ಮಕ್ಕಳಿಗೆ ಕಲಿಸಬೇಕು. ಸಭೆಗಳ ನಾಯಕರು ಪರಿಶ್ರಮ ಪಡುವವರಾಗಿರುವಂತೆ ತಮ್ಮ ಸದಸ್ಯರಿಗೆ ಬೋಧಿಸಬೇಕು. ತಮ್ಮ ಜೀವನೋಪಾಯವನ್ನು ಸ್ವತಃ ನೋಡಿಕೊಳ್ಳಬೇಕೆಂದು ಸರ್ಕಾರಗಳು ತಮ್ಮ ಪ್ರಜೆಗಳಿಗೆ ಕಲಿಸಬೇಕು.

*“ಅಶಿಸ್ತಿನ ಜೀವನ”: ಅಪೊಸ್ತಲರ ಬೋಧನೆಯ ಒಂದು ಉಲ್ಲಂಘನೆ.* ಪೌಲನು ಥೆಸಲೋನಿಕದಲ್ಲಿದ್ದಂಥ ವೇಳೆಯಲ್ಲಿ, ಆತನು ವೈಯಕ್ತಿಕವಾಗಿ ಅವರಿಗೆ ಬೋಧನೆಗಳನ್ನು ಮತ್ತು ಸಂಪ್ರದಾಯಗಳನ್ನು ಹಸ್ತಾಂತರಿಸಿದನು (ವ. 6). ಆತನು ಇಲ್ಲಿ ಪ್ರಸ್ತಾಪಿಸಿದ ಅಶಿಸ್ತಿನ ವರ್ತನೆಯು ಆತನು ಅವರಿಗೆ ಕೊಟ್ಟಿದ್ದ ಮೌಖಿಕ ಬೋಧನೆಗಳನ್ನು ಉಲ್ಲಂಘಿಸಿದ್ದಾಗಿತ್ತು.

ಹಲವಾರು ಸಾರಿ ಪೌಲನು ಸೋಮಾರಿತನ ಅಥವಾ ಮೈಗಳ್ಳತನ ಕುರಿತು ತಾನು ನೀಡಿದ್ದ ಮೌಖಿಕ ಬೋಧನೆಗಳನ್ನು ಸೂಚಿಸುತ್ತಾನೆ. 6ನೇ ವಚನದಲ್ಲಿ, ಆತನು ಸಹೋದರರಿಗೆ “ನಮ್ಮಿಂದ ಹೊಂದಿದ ಬೋಧನೆಯನ್ನು (ಸಂಪ್ರದಾಯ) ಅನುಸರಿಸದೆ ಅಕ್ರಮವಾಗಿ ನಡೆಯುವ[ವನಿಂದ]” ದೂರವಿರಬೇಕೆಂದು ಆಜ್ಞಾಪಿಸುತ್ತಾನೆ. 10ನೇ ವಚನದಲ್ಲಿ, ಆತನು ಹೀಗೆ ಹೇಳುತ್ತಾನೆ, “ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ-ಕೆಲಸ ಮಾಡಲೊಲ್ಲದವನು ಊಟಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ.” 1 ಥೆಸಲೋನಿಕ 4:11ರಲ್ಲಿ, ಪೌಲನು ಸಭೆಗೆ “ಸುಮ್ಮಗಿದ್ದು [ಅವರ] ಸ್ವಂತ ಕಾರ್ಯವನ್ನೇ ನಡಿಸಿಕೊಂಡು ಕೈಯಾರೆ ಕೆಲಸ ಮಾಡಬೇಕು” ಎಂದು ಆಜ್ಞಾಪಿಸಿದ್ದನು. 2 ಥೆಸಲೋನಿಕ

3:12ರಲ್ಲಿ, ಪೌಲನು ಅದೇ ರೀತಿಯ ಬೋಧನೆಯನ್ನು ಪುನರಾವರ್ತಿಸುತ್ತಾನೆ, “ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸುತ್ತೇವೆ.”

ಪರಿಶ್ರಮ ಪಡಬೇಕೆಂಬ ಕುರಿತಾದ ಆತನ ನೇರವಾದ ಆಜ್ಞೆಯನ್ನು ಅನುಸರಿಸುವದರ ಜೊತೆಗೆ, ತನ್ನ ಮಾದರಿಯನ್ನು ಅನುಸರಿಸಬೇಕೆಂದು ಸಹ ಪೌಲನು ಸಭೆಗೆ ಕೇಳಿಕೊಳ್ಳುತ್ತಾನೆ (ವಚನಗಳು 7-9; 1 ಕೊರಿಂಥ 11:1 ರೊಂದಿಗೆ ಹೋಲಿಸಿರಿ). ಒಂದು ನಮೂನೆಯನ್ನು ನೋಡಿ ಅದರಂತೆಯೇ ಬಟ್ಟೆಯೊಂದನ್ನು ಹೊಲಿಗೆ ಮಾಡುವ ದರ್ಜಿಯವಳಂತೆ, ಥೆಸಲೋನಿಕದವರು ತನ್ನ ನಮೂನೆಯ ಅನುಗುಣವಾಗಿ ಜೀವಿಸಬೇಕೆಂಬುದು ಪೌಲನ ಬಯಕೆಯಾಗಿತ್ತು. ಪೌಲನು ಅವರೊಳಗೆ ಹೇಗೆ ಜೀವಿಸಿದನು? ಆತನು ಯಾರ ಮೇಲೆಯೂ “ಭಾರವಾಗಬಾರದು” ಎಂಬುದಕ್ಕಾಗಿ ಆತನು ಕಷ್ಟಪಟ್ಟು ದುಡಿದನು (ವ. 8). ಆತನಿಗೆ ಸಹಾಯವನ್ನು ಮಾಡುವಂತೆ ಸಭೆಯನ್ನು ಕೇಳುವ ಹಕ್ಕು ಆತನಿಗಿತ್ತಾದರೂ (1 ಕೊರಿಂಥ 9:1-14), ಆತನು ಸಭೆಗೆ ಒಂದು “ಮಾದರಿ” ತೋರಿಸುವವನಾಗಿರಬೇಕು ಎಂಬುದಕ್ಕಾಗಿ ಆ ಹಕ್ಕನ್ನು ತ್ಯಾಗ ಮಾಡಿದನು (ವ. 9). ಆತನು ಅವರ ಆತ್ಮೀಕ ಅಗತ್ಯತೆಗಳನ್ನು ಸಂಧಿಸುವಂತೆ ಮತ್ತು ತನ್ನ ಸ್ವಂತ ಖರ್ಚುಗಳನ್ನು ಸ್ವತಃ ನೋಡಿಕೊಳ್ಳುವಂತೆ ಅವರ ಮಧ್ಯದಲ್ಲಿರುವ ವೇಳೆ ಕೆಲಸವನ್ನು ಮಾಡಿದನು. ಅಶಿಸ್ತಿನ ಜನರು ತಮ್ಮ ಮಧ್ಯದಲ್ಲಿ ಬೋಧಿಸಿದ ಮತ್ತು ಜೀವಿಸಿದ ಪೌಲನ ಮಾದರಿಯನ್ನು ಅಸಡ್ಡೆ ಮಾಡಿದರು. ಅವರು ಪೌಲನಿಗೆ ಅಲ್ಪ ಮರ್ಯಾದೆ ತೋರಿದರು ಮತ್ತು ಆತನನ್ನು ಕಳುಹಿಸಿದಾತನಿಗೆ ಇನ್ನೂ ಸ್ವಲ್ಪವಾದ ಮರ್ಯಾದೆಯನ್ನು ತೋರಿದರು.

*ಅಶಿಸ್ತಿನ ಜೀವನದ ವಿಷಯದಲ್ಲಿ ದೇವರ ಆಜ್ಞೆಗಳು.* “ಅಶಿಸ್ತಿನವರಿಗೆ” ಪೌಲನು ಆಜ್ಞಾಪಿಸಿದ್ದೇನೆಂದರೆ, ಅವರು “ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕು” ಎಂಬದೆ (ವ. 12). ಅವರು ಪೋಕರಿಗಳಾಗಿರುವದನ್ನು ಅಥವಾ ಹರಟೆ ಹೊಡೆಯುವದನ್ನು ಬಿಟ್ಟು ಕೆಲಸ ಮಾಡುವದಕ್ಕಾರಂಭಿಸಬೇಕಿತ್ತು. ಅವರು ತಮ್ಮ ಜವಾಬ್ದಾರಿಗಳನ್ನು ಸ್ವತಃ ನೋಡಿಕೊಳ್ಳಬೇಕಿತ್ತು, ಹೀಗೆ ತಮ್ಮ ಜೀವಿತಗಳಲ್ಲಿ ಕ್ರೈಸ್ತೀಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಿತ್ತು.

ನಂಬಿಗಸ್ತರಾದವರಿಗೆ, ಪೌಲನು ಹೀಗೆ ಹೇಳುತ್ತಾನೆ, “ಸಹೋದರರೇ, ನೀವಾದರೋ ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳಬೇಡಿರಿ. ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನನ್ನ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತು ಇಟ್ಟು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ” (ವಚನಗಳು 13, 14). ಈ ಅಪ್ಪಣೆಯು ಸಭೆಯಲ್ಲಿದ್ದ ಪ್ರತಿಯೊಬ್ಬರಿಗಾಗಿಯೂ ಆಗಿತ್ತು. ಆತನು ಅವರನ್ನು “ಬೇಸರಗೊಳ್ಳಬೇಡಿರಿ” ಎಂದು ಮತ್ತು ಕೆಟ್ಟ ನಡವಳಿಕೆಯನ್ನು ನೋಡಿಯೂ ಸುಮ್ಮನಿರಬೇಡಿರಿ, ಆದರೆ “ವಿಶೇಷವಾಗಿ ಗಮನಕ್ಕೆ ತೆಗೆದುಕೊಳ್ಳಿರಿ”, ಹೀಗೆ ಸಭೆಯು ಅಶಿಸ್ತಿನ ವಿಷಯದಲ್ಲಿ ಸಮರ್ಪಕವಾಗಿ ಕ್ರಮವನ್ನು ಕೈಗೊಳ್ಳುವದಕ್ಕೆ ಶಕ್ತವಾಗುವದು ಎಂದು ಹೇಳುತ್ತಾನೆ.

ಇಂದಿನ ಸಂಸ್ಕೃತಿಯು ಯಾವನನ್ನಾದರೂ ಒಬ್ಬನು ತಿದ್ದುವದಕ್ಕೆ, ಖಂಡಿಸುವದಕ್ಕೆ,

ಅಥವಾ ಶಿಸ್ತುಗೊಳಿಸುವದಕ್ಕೆ ಪ್ರಯತ್ನಿಸಿದರೆ ಅದನ್ನು ಅನುಮೋದಿಸುವದಿಲ್ಲ. ಹೇಗೂ, ಒಬ್ಬ ಸಹೋದರ ಅಥವಾ ಸಹೋದರಿಗೆ ಶಿಸ್ತುಕ್ರಮದ ಅಗತ್ಯವಿದ್ದರೆ ಅದನ್ನು ಹೇಗೆ ಮಾಡಬೇಕೆಂಬ ಕುರಿತು ಬೈಬಲ್ ನೇರವಾದ ಮಾತುಗಳಲ್ಲಿ ತಿಳಿಸುತ್ತದೆ. ಶಿಸ್ತುಕ್ರಮವು ದಾರಿ ತಪ್ಪಿರುವವನ ಒಳ್ಳೇದಕ್ಕಾಗಿಯೇ ಇರುತ್ತದೆ, ಹೊರತು ಆ ಕ್ರಮವನ್ನು ಕೈಗೊಳ್ಳುತ್ತಿರುವವರ ಲಾಭಕ್ಕಾಗಿ ಅಲ್ಲ ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಜೊತೆಯ ಕ್ರೈಸ್ತರನ್ನು ಪ್ರೀತಿ ಮತ್ತು ದಯೆಯಿಂದ ಖಂಡಿಸಬೇಕೆಂದು ಹೊಸ ಒಡಂಬಡಿಕೆಯು ಕಲಿಸುತ್ತದೆ. ಎರಡನೆಯ ಥೆಸಲೋನಿಕ 3:15 ಹೀಗೆ ಹೇಳುತ್ತದೆ, "ಆದರೂ ಅವನನ್ನು ವೈರಿಯೆಂದು ಎಣಿಸದೆ ಸಹೋದರನೆಂದು ಎಣಿಸಿಕೊಂಡು ಬುದ್ಧಿಹೇಳಿರಿ." ಮತ್ತಾಯ 18ರಲ್ಲಿ, ಒಬ್ಬ ಅಶಿಸ್ತಿನ ಸಹೋದರನಿಗೆ ಮೊದಲು ಏಕಾಂತದಲ್ಲಿ ಬುದ್ಧಿ ಹೇಳಬೇಕು, ನಂತರ ಒಬ್ಬರು ಅಥವಾ ಇಬ್ಬರು ಸಾಕ್ಷಿಗಳ ಮುಂದೆ ಬುದ್ಧಿ ಹೇಳಬೇಕು ಮತ್ತು ಅಂತಿಮವಾಗಿ ಎಚ್ಚರಿಕೆಗಳು ಪರಿಣಾಮ ತೋರದಿದ್ದರೆ, ವಿಷಯವನ್ನು ಸಭೆಯ ಮುಂದೆ ತರಬೇಕು ಎಂಬದಾಗಿ ಯೇಸು ಹೇಳಿದನು. ಗಲಾತ್ಯ 6:1ರಲ್ಲಿ, ಒಬ್ಬನು ಪಾಪದಲ್ಲಿ ಸಿಕ್ಕಿದರೆ ಅಂಥವನನ್ನು "ಶಾಂತಭಾವ"ದಿಂದ ತಿದ್ದಿ ಸರಿಮಾಡಿರಿ ಎಂದು ಪೌಲನು ಬರೆಯುತ್ತಾನೆ.

ಆ ವ್ಯಕ್ತಿಯು ಬದಲಾಗುವದಕ್ಕೆ ನಿರಾಕರಿಸುವದಾದರೆ ಏನು ಮಾಡುವದು? ಹಾಗಿರುವದಾದಲ್ಲಿ "ಅವನ ಸಹವಾಸದಲ್ಲಿ ಸೇರಬೇಡಿರಿ" ಎಂಬದಾಗಿ ಪೌಲನು ಹೇಳುತ್ತಾನೆ (ವ. 14). ಇದರಲ್ಲಿ ಒಂದು ಸಾರ್ವಜನಿಕವಾದ ಪ್ರಕಟನೆಯನ್ನು ಮಾಡುವದು ಸೇರಿರಬಹುದಾಗಿದೆ (ನೋಡಿರಿ 1 ಕೊರಿಂಥ 5:4, 5). ಇದರಲ್ಲಿ ಆತನಿಗೆ ಇನ್ನಷ್ಟು ಬುದ್ಧಿವಾದ ಹೇಳುವದನ್ನು ಬಿಟ್ಟರೆ ಬೇರೆ ಸಹವಾಸವನ್ನು ಇಟ್ಟುಕೊಳ್ಳದಿರುವದು ಸೇರಿರುತ್ತದೆ.

ಏಕೆ ಅಷ್ಟೊಂದು ಕಠಿಣವಾದ ಕ್ರಮಗಳು? ಮೊದಲನೆಯ ಉದ್ದೇಶವು "ಅಶಿಸ್ತಿನಿಂದ ನಡೆಯುವವನನ್ನು" ರಕ್ಷಣೆಯಲ್ಲಿ ಕಾಪಾಡುವದು, "ಕರ್ತನಾದ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಅಂಥವನ ಆತ್ಮವು ರಕ್ಷಣೆಹೊಂದುವದಕ್ಕಾಗಿ" (1 ಕೊರಿಂಥ 5:5). ಒಬ್ಬನನ್ನು ಸಭೆಯಿಂದ ಕಿತ್ತು ಹಾಕುವ ಉದ್ದೇಶವು ಆತನು ಸಭೆಯೊಂದಿಗೆ ಹೊಂದಿದ್ದ ಅನ್ಯೋನ್ಯತೆಯನ್ನು ನೆನಸಿ ಪರಿತಪಿಸಿ ಬದಲಾದ ಹೃದಯದೊಂದಿಗೆ ಪುನಃ ಕ್ರಿಸ್ತನ ಬಳಿಗೆ ಮತ್ತು ಸಭೆಗೆ ಹಿಂದಿರುಗುವಂತಾಗಲಿ ಎಂಬದೆ. ಎರಡನೆಯ ಉದ್ದೇಶವು ಸಭೆಯನ್ನು ಪವಿತ್ರವಾಗಿಡುವದೇ. ಪೌಲನು ಹೀಗೆ ಬರೆಯುತ್ತಾನೆ, "ಸ್ವಲ್ಪ ಹುಳಿ ಕಲಸಿದರೆ ಕಣಕವೆಲ್ಲಾ ಹುಳಿಯಾಗುತ್ತದೆಂಬದು ನಿಮಗೆ ತಿಳಿಯದೋ?" (1 ಕೊರಿಂಥ 5:6). ಖಂಡಿಸದೆ ಬಿಟ್ಟ ಚಿಕ್ಕ ಪಾಪವು ಮುಂದೆ ಒಂದು ದೊಡ್ಡ ಸಭೆಯನ್ನೇ ಹಾಳು ಕೆಡಿಸುವದು.

ಅನ್ಯೋನ್ಯತೆಯಿಂದ ದೂರವಿರುವದರಲ್ಲಿ ಒಬ್ಬ ನಂಬಿಕೆಯನ್ನು ಹೊಂದಿಲ್ಲವೆಂದರೆ ಏನು ಮಾಡುವದು? ಈ ಬೋಧನೆಯನ್ನು ತಿರಸ್ಕರಿಸುವದೆಂದರೆ ಒಬ್ಬನು ತನ್ನನ್ನು ಯೇಸುವಿನ ಹಾಗೂ ಆತನ ಅಪೊಸ್ತಲರ ಆಜ್ಞೆಗಳಿಗಿಂತ ಹೆಚ್ಚಿನವನನ್ನಾಗಿ ಮಾಡಿಕೊಂಡಂತಾಗುವದು. ಪೌಲನು ಯೇಸುವಿನ ಅಧಿಕಾರದೊಂದಿಗೆ ಬರೆದನು, "ಸಹೋದರರೇ, . . . *ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ* ನಿಮಗೆ ಆಜ್ಞಾಪಿಸುತ್ತೇವೆ" (ವ. 6; ಒತ್ತಿ ಹೇಳಿದ್ದು ನನ್ನದು). ಕೆಲವು ಸಭೆಗಳು ಸಹವಾಸದಿಂದ ದೂರವಿರುವದನ್ನು ಅನುಸರಿಸುತ್ತವೆ, ಆದರೆ ಶಾಸ್ತ್ರಗಳಲ್ಲಿನ ಬೋಧನೆಯು ಸ್ಪಷ್ಟವಾಗಿದೆ.

ಶಾಸ್ತ್ರಗಳ ಅನುಗುಣವಾಗಿ ಪಾಪಿಯ ನಿಮಿತ್ತವಾಗಿ ಮತ್ತು ಕರ್ತನ ಸಭೆಯ ನಿಮಿತ್ತವಾಗಿ ಸಮರ್ಪಕವಾಗಿರುವಾಗ ಒಂದು ವಿಧೇಯತೆಯುಳ್ಳ ಸಭೆಯು ಶಿಸ್ತುಕ್ರಮವನ್ನು ಕೈಕೊಳ್ಳುವದು.

ದೇವರು ಕೋರಹನನ್ನು, ದಾತಾನ್, ಮತ್ತು ಅಬೀರಾಮ ಇವರನ್ನು ಪ್ರೀತಿಸಲಿಲ್ಲ ಎಂದು ನೀವು ನಂಬುತ್ತೀರಾ? ಖಂಡಿತವಾಗಿಯೂ ದೇವರು ಅವರನ್ನು ಪ್ರೀತಿಸಿದನು, ಆದರೆ ಅವರ ಬಂಡಾಯವು ಸಾಂಕ್ರಾಮಿಕವಾಗಬಹುದಾಗಿದ್ದ ಕಾರಣ ದೇವರು ಅವರನ್ನು ನಾಶಗೊಳಿಸಿದನು. ಶಿಸ್ತುಕ್ರಮವು ಪಾಪಿಯ ಹಿತಕ್ಕಾಗಿ ಮತ್ತು ಸಭೆಯ ಹಿತಕ್ಕಾಗಿ ಆಗಿರುತ್ತದೆ. ದೇವರು ಸಭೆಯಲ್ಲಿನ ನಮ್ಮೆಲ್ಲರನ್ನೂ ಕಳೆದುಕೊಳ್ಳುವದಕ್ಕಿಂತ ಕೆಲವರನ್ನು ರಕ್ಷಿಸುವದನ್ನು ಇಷ್ಟ ಪಡುತ್ತಾನೆ. ನಾವು ದೇವರನ್ನು ಗಂಭೀರವಾಗಿ ತೆಗೆದುಕೊಂಡು ಆತನ ಆಜ್ಞೆಗಳಿಗೆ ವಿಧೇಯರಾಗುವಂತೆ ಆತನು ನಮಗೆ ಸಹಾಯ ಮಾಡಲಿ! EE

**ಒಂದು ವಿದಾಯದ ಬುದ್ಧಿವಾದ (3:13-15)**

ಅಂತಿಮ ಮಾತುಗಳು. ಅವುಗಳು ನಮ್ಮ ನೆನಪಿನಲ್ಲಿ ದೀರ್ಘಕಾಲದ ತನಕ ಉಳಿಯುವವು ಮತ್ತು ಅವುಗಳು ನಾವು ಕೊಡಬಹುದಾದ ಅತ್ಯಂತ ಪ್ರಾಮುಖ್ಯವಾದ ಆಲೋಚನೆಗಳಾಗಿರುತ್ತವೆ. ಹೀಗೆ ಅವುಗಳು ಮಹತ್ವಪೂರ್ಣತೆಯನ್ನು ಹೊಂದಿವೆ ಮತ್ತು ದೀರ್ಘಾಯುಷ್ಯವನ್ನು ಹೊಂದಿವೆ. ಈ ಪ್ರಿಯರಾದ ಥೆಸಲೋನಿಕದವರಿಗೆ ಪೌಲನು ಹೇಳಿದ ಕೆಲವು ಕಡೇ ಮಾತುಗಳಾವವು?

*“ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳಬೇಡಿರಿ.”* “ಬೇಸರಗೊಳ್ಳಬೇಡಿರಿ” ಎಂದರೆ “ಹತಾಶರಾಗಬೇಡಿರಿ” ಎಂದಾಗಿದೆ. “ಒಳ್ಳೇದನ್ನು ಮಾಡುವದು” ಎಂದರೆ “ಉದಾತ್ತವಾದ ಕಾರ್ಯಗಳನ್ನು ಮಾಡುವದು” ಎಂದರ್ಥವಾಗಿದೆ. ಕರ್ತನು ತನ್ನ ಬರೋಣವನ್ನು ಎಷ್ಟೇ ತಡಮಾಡಿದರೂ ಸರಿಯೇ, ಮತ್ತು ಬೇರೆಯವರು ಯಾವ ಅಕ್ರಮಗಳಲ್ಲಿ ತೊಡಗಿಸಿಕೊಂಡರೂ ಸರಿಯೇ, ನಾವು ಅತ್ಯುನ್ನತ ಮಾನದಂಡಗಳನ್ನು ಅನುಸರಿಸಿ ನಡೆಯುವದನ್ನು ಮುಂದುವರೆಸಬೇಕು.

*“ಅವಿಧೇಯರಾಗಿರಬೇಡಿರಿ.”* ತಾನು ಬರೆದ ಪತ್ರಿಕೆಯು ಪವಿತ್ರಾತ್ಮನಿಂದ ಪ್ರೇರಿತವಾದದ್ದೆಂದು ಪೌಲನು ಪರಿಗಣಿಸಿದ್ದನು. ಅವರು ಅದಕ್ಕೆ ವಿಧೇಯರಾಗಬೇಕಿತ್ತು. ಆದ್ದರಿಂದ ಆತನು ಅವರಿಗೆ, “ನಾನು ಆಜ್ಞಾಪಿಸಿರುವದಕ್ಕೆ ವಿಧೇಯರಾಗಲು ಜಾಗ್ರತೆ ವಹಿಸಿರಿ” ಎಂದು ಹೇಳುತ್ತಾನೆ.

*“ಕಠಿಣವಾದ ಪ್ರೀತಿಯಿಂದ ಒಬ್ಬರನ್ನೊಬ್ಬರು ಪ್ರೀತಿಸಿರಿ.”* ಹೆಚ್ಚು ಮೊಂಡುತನದ ತಪ್ಪಿತಸ್ಥರು ತನ್ನ ಆಜ್ಞೆಗಳನ್ನು ಅಸಡ್ಡೆ ಮಾಡುವಾದದರೆ ಸಭೆಯು ಹೇಗೆ ಪ್ರತ್ಯುತ್ತರವನ್ನು ನೀಡತಕ್ಕದ್ದೆಂಬ ಕುರಿತು ಪೌಲನು ಸಭೆಗೆ ತಿಳಿಯಪಡಿಸಿದ್ದನು. ಆತನ ಅಪ್ಪಣೆಗಳು ಮೂರು ವಿಧವಾಗಿದ್ದವು. (1) ಅವಿಧೇಯನನ್ನು ಗುರುತು ಇಟ್ಟುಕೊಳ್ಳತಕ್ಕದ್ದು (ವ. 14). “ಗುರುತು ಇಟ್ಟುಕೊಂಡು” ಎಂಬ ಕ್ರಿಯಾಪದವು ಒಂದಕ್ಕೆ ಹೆಸರನ್ನು ಲಗತ್ತಿಸುವದಕ್ಕಾಗಿ ಚೆನ್ನಾಗಿ ಗುರುತು ಹಾಕುವದು ಎಂಬ ಅರ್ಥವನ್ನು ಕೊಡುತ್ತದೆ. ಸಭೆಯು ಅವನಿಗೆ ಅಸಮ್ಮತಿಯ ಗುರುತು ಹಾಕಬೇಕಿತ್ತು. (2) ಈ ಆಜ್ಞೆಗಳಿಗೆ ಅವಿಧೇಯನಾದವನೊಂದಿಗೆ ವಿಶ್ವಾಸಿಗಳು

"ಸಹವಾಸದಲ್ಲಿ ಸೇರಬಾರದಿತ್ತು" (ವ. 14). ಗ್ರೀಕ್ ಪದಗುಚ್ಛದ ಅಕ್ಷರಶಃ ಅರ್ಥವು "ಆತನೊಂದಿಗೆ ಒಡನಾಟವನ್ನು ಇಟ್ಟುಕೊಳ್ಳಬೇಡಿರಿ" ಎಂದಾಗಿರುತ್ತದೆ. (3) ಪಾಪ ಮಾಡುವ ಸಹೋದರನಿಗೆ ಬುದ್ಧಿ ಹೇಳತಕ್ಕದ್ದಾಗಿತ್ತು. ಕ್ರಿಯಾಪದದ ಅರ್ಥವು "ಆತನನ್ನು ಸತ್ಯದ ಮನಸ್ಸಿನಲ್ಲಿ ಇಡು" ಎಂದರ್ಥವಾಗಿದೆ. ಈ ಮೂರು ಅಪ್ಪಣೆಗಳನ್ನು ಒಂದುಗೂಡಿಸಿದಾಗ, ನಾವು ಒಂದು ನಿರಂತರವಾದ, ದೀರ್ಘಕಾಲ ಉಳಿಯುವ ಪ್ರೀತಿಯ ಒಂದು ಸ್ಪಷ್ಟವಾದ ವ್ಯಕ್ತಗೊಳಿಸುವಿಕೆಯನ್ನು ಕಾಣುತ್ತೇವೆ.

ಕ್ರಿಸ್ತನಿಗೋಸ್ಕರ ಜೀವಿಸುವದಕ್ಕೆ ಪೌಲನು ಹೊಂದಿದ್ದ ಯೋಜನೆ ಏನು? ದೇವರ ವಾಕ್ಯಕ್ಕೆ ಅವಿಧೇಯರಾಗದಿರಿ, ಒಬ್ಬರನ್ನೊಬ್ಬರು ತಪ್ಪನ್ನು ತಿದ್ದುವಂತಹ ಪ್ರೀತಿಯಿಂದ ಪ್ರೀತಿಸಿರಿ, ಮತ್ತು ನಿಮ್ಮ ಒಳ್ಳೇದನ್ನು ಮಾಡುವಿಕೆಯಲ್ಲಿ ಮತ್ತು ಜೀವಿಸುವಿಕೆಯಲ್ಲಿ ಬೇಸರಗೊಳ್ಳಬೇಡಿರಿ. EC

**ಅಂತ್ಯಾಶೀರ್ವಾದ (3:16, 17)**

ಒಂದು ಸಭೆಯು ಕೂಡಿ ಬಂದಿರುವಾಗ ಅಂತಿಮ ಮಾತುಗಳಾಗಿ ಒಂದು ಅಂತ್ಯಾಶೀರ್ವಾದವನ್ನು ಹೇಳಲಾಗುತ್ತದೆ. ವಾಚಕರನ್ನು ಹೋಗಲು ಬಿಡುವದಕ್ಕೆ ಮತ್ತು ಅವರೊಂದಿಗಿನ ತನ್ನ ಸಮಯವನ್ನು ಮುಕ್ತಾಯಗೊಳಿಸುವದಕ್ಕೆ ಇವುಗಳು ಪೌಲನು ಬಳಸಿದ ಮಾತುಗಳಾಗಿವೆ.

ಪತ್ರಿಕೆಯಲ್ಲಿ ಈ ಹಂತದ ತನಕ, ಒಬ್ಬ ಲೇಖಕನು ಪೌಲನ ಮಾತುಗಳನ್ನು ಬರೆದಿದ್ದನು. ಈಗ ಆತನು ಲೇಖನಿಯನ್ನು ತೆಗೆದುಕೊಂಡು ಮುಕ್ತಾಯದ ಮಾತುಗಳನ್ನು ಬರೆಯುತ್ತಾನೆ. ಈ ಅಂತಿಮ ಹಸ್ತಾಕ್ಷರವು ತನ್ನ ಪ್ರತಿಯೊಂದು ಪತ್ರಿಕೆಯಲ್ಲಿ ಗುರುತು ಆಗಿರುತ್ತದೆಂದು ಆತನು ಹೇಳುತ್ತಾನೆ.

*"ನಿಮಗೆ ಶಾಂತಿಯು ದೊರಕಲಿ."* ಅವರು ತಮ್ಮೊಂದಿಗೆ ("ಸದಾಕಾಲವೂ") ಉಳಿಯುವಂತಹ ಮತ್ತು ಬದಲಾಗುವ ಪರಿಸ್ಥಿತಿಗಳಲ್ಲಿ ("ಸಕಲವಿಧದಲ್ಲಿಯೂ") ಮಾರ್ಪಡದೆ ಇರುವಂತಹ ಶಾಂತಿಯನ್ನು ಹೊಂದಲಿ ಎಂದು ಪ್ರಾರ್ಥಿಸಿದನು. ಅದು ಕರ್ತನ ಪ್ರಸನ್ನತೆಯ ಕಾರಣದಿಂದ ("ಕರ್ತನು ನಿಮ್ಮೆಲ್ಲರೊಂದಿಗೆ ಇರಲಿ") ಅವರ ಹೃದಯಗಳಲ್ಲಿರುತ್ತದೆಂದು ಪ್ರಾರ್ಥಿಸಿದನು.

*"ಆತನ ಕೃಪೆಯು ನಿಮ್ಮ ಸಂಗಡವಿರಲಿ."* ಕರ್ತನ ಕೃಪೆಯೆಂದರೆ ಕ್ಷಮಾಪಣೆ ಮತ್ತು ರಕ್ಷಣೆ ಎಂದರ್ಥ.

*"ಕರ್ತನು ನಿಮ್ಮೆಲ್ಲರ ಸಂಗಡ ಇರಲಿ."* ಕರ್ತನ ಪ್ರಸನ್ನತೆಯೆಂದರೆ ಅನ್ಯೋನ್ಯತೆ, ಭದ್ರತೆ, ಮತ್ತು ಉದ್ದೇಶ ಎಂದಾಗಿರುತ್ತದೆ. ಆತನ ಪ್ರಸನ್ನತೆಯು ನಾವು ಆತನ ಚಿತ್ತವನ್ನು ಮಾಡುತ್ತಿದ್ದೇವೆ ಮತ್ತು ಆತನ ಗುರಿಗಳನ್ನು ನೆರವೇರಿಸುತ್ತಿದ್ದೇವೆ ಎಂಬುದನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ.

ಈ ಹಾರೈಕೆಯಲ್ಲಿ ಆತ್ಮೀಕ ಸಮಗ್ರತೆ ಮತ್ತು ಸಮೃದ್ಧಿಗಳ ಅಗತ್ಯವಿರುತ್ತದೆ. ಕೃಪೆಯು ನಮ್ಮ ಪಾಪಗಳನ್ನು ಮುಚ್ಚುತ್ತದೆ ಮತ್ತು ನಮ್ಮನ್ನು ದೇವರ ಸಂಗಡದ ಸರಿಯಾದ ಸಂಬಂಧದೊಳಗೆ ಕರೆ ತರುತ್ತದೆ. ಸಮಾಧಾನವು ದೇವರ ಮುಂದೆ ನಮ್ಮ ಹೃದಯಗಳನ್ನು

ಪ್ರಶಾಂತಗೊಳಿಸುತ್ತದೆ. ನಮ್ಮ ಜೀವಿತಗಳಲ್ಲಿರುವ ಯೇಸುವಿನ ಪ್ರಸನ್ನೆಯು ನಮಗೆ ಅನುದಿನವೂ ಉದ್ದೇಶದ ಅರ್ಥವನ್ನು ಒದಗಿಸುತ್ತದೆ. ಪೌಲನು ತನ್ನ ವಾಚಕರಿಗಾಗಿ ಅತ್ಯಂತ ಉದಾತ್ತವಾದದ್ದನ್ನು ಮತ್ತು ಅತ್ಯುತ್ತಮವಾದದ್ದನ್ನು ಅಪೇಕ್ಷಿಸುತ್ತಿದ್ದಾನೆ. EC

**ನಿಜವಾದ ಶಾಂತಿ (3:16, 17)**

ಪೌಲನು ಶಾಂತಿಯ ಕುರಿತು ಮಾತಾಡಿದಾಗ, ಆತನು ಆತ್ಮದ ಮತ್ತು ಮನಸ್ಸಿನ ಪ್ರಶಾಂತತೆಯನ್ನು ಕುರಿತು ಹೇಳುತ್ತಿದ್ದಾನೆ. ಈ ಶಾಂತಿಯು ಒಬ್ಬ ವ್ಯಕ್ತಿಯು ತಾನು ದೇವರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿದ್ದೇನೆಂದು ತಿಳಿದಿರುವ ಕಾರಣ ಹಾಗೂ ದೇವರ ವಿಶ್ರಮಿಸುತ್ತಾ ವಾಸಿಸುವ ಕಾರಣದಿಂದ ಆತನಿಗೆ ದೇವರ ಮುಂದೆ ಇರುವ ಪ್ರಶಾಂತತೆಯನ್ನು ಪ್ರತಿನಿಧಿಸುತ್ತದೆ. ಈ ಪ್ರಮಾಣಪೂರಿತ ಶಾಂತಿಯು ತನ್ನಲ್ಲಿ ಅನೇಕ ಭಾಗಗಳನ್ನು ಹೊಂದಿದೆ.

*ಒಂದು ದೈವಿಕ ಸ್ವಭಾವ.* ಕರ್ತನು ಮಾತ್ರವೇ ಈ ಶಾಂತಿಯನ್ನು ಕೊಡಬಲ್ಲನು. ಕರ್ತನು ನಮ್ಮನ್ನು ಕ್ಷಮಿಸುತ್ತಾನೆ ಮತ್ತು ನಮ್ಮನ್ನು ಹಾಗೂ ಬೇರೆಯವರನ್ನು ಕ್ಷಮಿಸುವಂತೆ ಸ್ಫೂರ್ತಿಗೊಳಿಸುತ್ತಾನೆ.

*ಒಂದು ನಿರಂತರವಾದ ಗುಣ.* ನಾವು ಎಲ್ಲಾ ವಿಧವಾದ ದಿನಗಳನ್ನು ಎದುರುಗೊಳ್ಳುತ್ತೇವೆ-ಸಂತೋಷದ ದಿನಗಳು, ದುಃಖದ ದಿನಗಳು, ಸಾಧಾರಣವಾದ ದಿನಗಳು. ಈ ಶಾಂತಿಯು ಎಲ್ಲಾ ದಿನಗಳಿಗಾಗಿಯೂ ಇರುತ್ತದೆ, ಅವುಗಳ ಗುಣವು ಏನೇ ಆಗಿದ್ದರೂ ಸರಿಯೇ.

*ಒಂದು "ಯಾವದನ್ನೂ ಲೆಕ್ಕಿಸದ" ಪ್ರಸನ್ನತೆ.* ಜೀವನವು ನಮ್ಮನ್ನು ಅನೇಕ ವಿಧವಾದ ಪರಿಸ್ಥಿತಿಗಳಲ್ಲಿ ಎಸೆಯುತ್ತದೆ. ಈ ಪರಿಸರಗಳು ಕ್ರೂರ ಹಾಗೂ ಹಿಂಸಾತ್ಮಕವಾಗಿರಬಲ್ಲವು. ನಮ್ಮ ಸುತ್ತಲಿನ ವಾತಾವರಣವು ಏನೇ ಆಗಿದ್ದರೂ ಸರಿಯೇ, ಕರ್ತನ ಶಾಂತಿಯು ನೆಲೆಯಾಗಿರುತ್ತದೆ.

ಬಹಳಷ್ಟು ಸಂದರ್ಭಗಳಲ್ಲಿ, ಲೋಕವು ಶಾಂತಿಯೊಂದನ್ನು ಬಿಟ್ಟು ಬೇರೆ ಎಲ್ಲವನ್ನೂ ಹೊಂದಿರುತ್ತದೆ. ಅದು ಹಣದಿಂದ ಕೊಂಡುಕೊಳ್ಳಬಹುದಾದ ಸಂಗತಿಗಳನ್ನು ಹೊಂದಿದೆ, ಸ್ನೇಹಿತರು ಕೊಡಬಹುದಾದ, ಮತ್ತು ಕುಟುಂಬವು ಒದಗಿಸಬಹುದಾದ ಸಂಗತಿಗಳನ್ನು ಹೊಂದಿದೆ, ಆದರೆ ನಿಜವಾದ ಶಾಂತಿಯನ್ನು ಹೊಂದಿಲ್ಲ. ಶಾಂತಿಗಾಗಿ ಬಯಕೆಯು ನಮ್ಮ ಅಂತರಾಳದಿಂದ ಬರುವದಾಗಿದೆ; ಅದನ್ನು ಯಾವನೂ ಕಾಣಲಾರನು, ಆದರೆ ನಾವೆಲ್ಲರೂ ಅದರ ಅನುಭವ ಮಾಡುತ್ತೇವೆ. ನಮಗೆ ಶಾಂತಿಯ ಅಗತ್ಯವಿದೆಯೆಂಬುದನ್ನು ನಾವು ಗುರುತಿಸುವಾಗ ಮತ್ತು ಕರ್ತನು ಅದನ್ನು ಹೇಗೆ ಒದಗಿಸುವನೆಂಬುದನ್ನು ಕಾಣದಿದ್ದಾಗ, ನಾವು ನಮ್ಮ ಅತ್ಯಂಥ ದೊಡ್ಡ, ಅತ್ಯಂಥ ಆಳವಾದ ವೈಯಕ್ತಿಕ ಹಂಬಲಿಕೆ ನಡಿಸುವಂತಹ ದಾರಿಯ ಕುರಿತು ಕುರುಡರಾಗಿರುತ್ತೇವೆಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು.

ಕರ್ತನ ಶಾಂತಿಯು ನಮಗೆ ಆತನ ಕೃಪೆ ಮತ್ತು ಪ್ರಸನ್ನತೆಯನ್ನು ಕೊಡುವ ಮೂಲಕ ಆತನ ಶಾಂತಿಯನ್ನು ಅನುಗ್ರಹಿಸಲಿ. EC

## ದೇವರ ಕೆಲಸಗಾರರು (3:6-18)

ಕೆಲಸವು ಬಹಳಷ್ಟು ಜನರಿಗೆ ಅವಶ್ಯಕವಾಗಿರುತ್ತದೆ. ನಮ್ಮ ಅನುದಿನದ ಅಗತ್ಯತೆಗಳನ್ನು ಒದಗಿಸಿಕೊಳ್ಳುವದಕ್ಕೆ ನಾವು ಕೆಲಸ ಮಾಡಬೇಕು. ಹೊಸ ಒಡಂಬಡಿಕೆಯ ಪತ್ರಿಕೆಗಳು ಕ್ರೈಸ್ತರನ್ನು "ಕೆಲಸಗಾರರು," "ಕೂಲಿಯವರು," "ಸೇವಕರು," "ದಾಸರ," ಅಥವಾ "ಸತ್ಕಾರ್ಯಗಳನ್ನು ಮಾಡುವವರು" ಎಂದು ಕರೆಯುತ್ತದೆ. ಹೊಸ ಒಡಂಬಡಿಕೆಯ ಬೋಧನೆಯ ಒತ್ತು ಯಾವದರ ಮೇಲಿರುತ್ತದೆಂದರೆ ನಾವು ಕ್ರಿಸ್ತನ ಮೂಲಕವಾಗಿ ದೇವರ ಕೆಲಸಗಾರರು ಎಂಬದೆ. ನಮ್ಮ ಕೆಲಸದ ಕುರಿತು ಥೆಸಲೋನಿಕದ ಕ್ರೈಸ್ತರಿಗೆ ಕೊಡಲಾದ ಸಂದೇಶದಿಂದ ನಮಗೆ ಯಾವ ಅಂತರ್ದೃಷ್ಟಿಗಳು ಸಿಕ್ಕಬಲ್ಲವು? ನಾವು ದೇವರಿಗೆ ಕೆಲಸಗಾರರಾಗಿರುವಂತೆ ನಾವೇನು ತಿಳುಕೊಳ್ಳಬೇಕೆಂದು ಆತನು ಬಯಸುತ್ತಾನೆ?

*ಕೆಲಸವು ಭಕ್ತಿಯ ಚಟುವಟಿಕೆಯಾಗಿದೆ (3:6-9).* ತಮ್ಮ ಜೀವನದ ಹೊಸ ದಾರಿಯಾಗಿ ಕೆಲಸದ ಕುರಿತಾಗಿ ದೇವರ ಮನೋಭಾವವನ್ನು ಅಳವಡಿಸಿಕೊಳ್ಳಬೇಕೆಂದು ಥೆಸಲೋನಿಕದ ಹೊಸ ಕ್ರೈಸ್ತರಿಗೆ ಬೋಧಿಸಲಾಯಿತು. ಈ ಹೊಸ ಸೇವಕರು ತಮ್ಮ ಪರಲೋಕದಲ್ಲಿರುವ ಹೊಸ ಯಜಮಾನನ ಸೇವೆಯನ್ನು ಮಾಡುವವರಾದಂತೆ ಅನುದಿನ ಕೆಲಸ ಮಾಡುವದು ಅವರಿಗೆ ಒಂದು ಪ್ರಾಮುಖ್ಯವಾದ ಸದವಕಾಶ ಮತ್ತು ಕರ್ತವ್ಯವಾಯಿತು.

ಮೊದಲನೆಯದಾಗಿ, ಅವರು ಕೆಲಸದ ಪ್ರಾಮುಖ್ಯತೆಯ ಕುರಿತು ಬೋಧನೆಯ ಮೂಲಕ ತಿಳಿದುಕೊಂಡರು. ಪೌಲನು ಅವರಿಗೆ ಹೀಗೆ ಹೇಳಿದನು, "ಸುಮ್ಮಗಿದ್ದು ಸ್ವಂತ ಕಾರ್ಯವನ್ನೇ ನಡಿಸಿಕೊಂಡು ಕೈಯಾರೆ ಕೆಲಸಮಾಡುವದೇ ಮಾಣವೆಂದೆಣಿಸಿರಿ" (1 ಥೆಸಲೋನಿಕ 4:11). ಅವರು ಒಂದು ದೇವಾಲಯದಲ್ಲಿ ಅಥವಾ ವಿಶೇಷ ಪವಿತ್ರ ದಿನಗಳಲ್ಲಿ ಮಾತ್ರವೇ ಅಲ್ಲದೆ, ತಾವು ಕೆಲಸ ಮಾಡುವ ಯಾವದೇ ಸ್ಥಳದಲ್ಲಿ ಸಹ ಅನುದಿನವೂ ದೇವರ ಸೇವೆಯನ್ನು ಮಾಡಬಹುದಿತ್ತು.

ದೇವರಿಗಾಗಿ ಕೆಲಸ ಮಾಡುವದು ಆಜ್ಞಾಪಿಸಲ್ಪಟ್ಟಿರುತ್ತದೆ, ಆದರೆ ವಿಶ್ವದ ಒಡೆಯನಿಂದ ಕೆಲಸಕ್ಕೆ ನೇಮಿಸಿಕೊಳ್ಳಲ್ಪಡುವದನ್ನು ದೇವರ ಕುಟುಂಬದಲ್ಲಿ ಸೇರಿಕೊಳ್ಳುವದರ ಒಂದು ದೊಡ್ಡ ಆಶೀರ್ವಾದ ಎಂದು ಸಹ ಕಾಣತಕ್ಕದ್ದು. ನಮ್ಮನ್ನು ಪ್ರೀತಿಸುವ ಮತ್ತು ನಮ್ಮನ್ನು ಸಂಪೂರ್ಣವಾಗಿ ತಿಳಿದಿರುವಂತಹ ಒಬ್ಬ ಧಣಿಯು ನಮಗೆ ಇದ್ದಾನೆ. ಕೆಲಸವು ಅವಶ್ಯಕ, ಆದರೆ ಅದು ದೇವರಿಂದ ಕೊಡಲ್ಪಟ್ಟಿರುವ ಒಂದು ಆಶೀರ್ವಾದ ಸಹ ಆಗಿದೆ!

ಎರಡನೆಯದಾಗಿ, ಥೆಸಲೋನಿಕದವರು ಕೆಲಸದ ಪ್ರಾಮುಖ್ಯತೆ ಬಗ್ಗೆ ಮಾದರಿಯನ್ನು ನೋಡಿ ಕಲಿತರು (3:7-9). ಈ ಬೋಧಕರು ವಾಸ್ತವದಲ್ಲಿ ಎರಡು ಉದ್ಯೋಗಗಳನ್ನು ಮಾಡುತ್ತಿದ್ದರು. ಒಂದು ಕೆಲಸವು ತಮ್ಮ ಜೀವನೋಪಾಯಕ್ಕೆ ಹಣವನ್ನು ಸಂಪಾದಿಸಲು ತಮ್ಮ ಕೈಯಾರೆ ಮಾಡುತ್ತಿದ್ದ ಕೆಲಸವಾಗಿತ್ತು. ಇನ್ನೊಂದು ಕೆಲಸವೆಂದರೆ, ಸಂಬಳವಿಲ್ಲದಂತಹ, ಈ ಹೊಸ ಕ್ರೈಸ್ತರ ಆತ್ಮೀಕ ಭಕ್ತಿವೃದ್ಧಿಗಾಗಿ ಅವರನ್ನು "ಪ್ರಬೋಧಿಸುವದು ಮತ್ತು ಪ್ರೋತ್ಸಾಹಿಸುವದು ಮತ್ತು ಬೇಡಿಕೊಳ್ಳುವದು" ಆಗಿತ್ತು

(1 ಥೆಸಲೋನಿಕ 2:11). ಅವರಿಗೆ ಇವುಗಳಲ್ಲಿ ಯಾವದಾದರೂ ಒಂದು ಕೆಲಸವನ್ನು ಮಾಡುವ ಹಕ್ಕನ್ನು ದೇವರಿಂದ ಹೊಂದಿದ್ದರು; ಆದರೆ ಅವರು ಎರಡನ್ನೂ ಮಾಡಿದರು, ಹೀಗೆ ಅವರ ಕೆಲಸವು ಹೊಸ ಕ್ರೈಸ್ತರಿಗೆ ತಮ್ಮ ಅನುದಿನದ ಜೀವಿತಗಳಲ್ಲಿ ದೇವರ ಕೆಲಸಗಾರರಾಗಿರುವಂತೆ ಕಲಿಸುವಂತಾಗಿತ್ತು. ದೇವರಿಗಾಗಿ ಒಬ್ಬ ಕೆಲಸಗಾರನಾಗಿರು!

*ಕೆಲವು ಜನರು ಕೆಲಸ ಮಾಡುವದಿಲ್ಲ (3:10-12).* ಕೆಲಸದ ಕುರಿತಾಗಿ ಎಲ್ಲರಿಗೂ ಒಳ್ಳೇ ಮನೋಭಾವವು ಇರುವದಿಲ್ಲ. ಕೆಲವರು ಅದನ್ನು "ಅವಶ್ಯಕವಾಗಿರುವ ಕೆಡುಕು" ಎಂದು ಕಾಣುತ್ತಾರೆ; ಇನ್ನು ಕೆಲವರು ಅದರಿಂದ ದೂರವಿರುತ್ತಾರೆ. ಕೆಲವರು ಪೋಲಿಯಾಗಿ ಸುತ್ತಾಡುವದನ್ನು ಅಥವಾ ಬೇರೆಯವರ ಕೆಲಸದಿಂದ ಬದುಕುವದರ ಬಗ್ಗೆ ಹೆಚ್ಚಳಪಟ್ಟುಕೊಳ್ಳುತ್ತಾರೆ. ಸೋಮಾರಿತನ ಮತ್ತು ಪೋಲಿಯಾಗಿ ಸುತ್ತಾಡುವದು ಇಂದಿನ ಸಮಸ್ಯೆಯು ಮಾತ್ರವೇ ಆಗಿರುವದಿಲ್ಲ, ಆದರೆ ಅದು ಪ್ರಥಮ ಶತಮಾನದಲ್ಲಿ ಥೆಸಲೋನಿಕದ ಸಭೆಯೊಳಗಿದ್ದ ಸಮಸ್ಯೆಯು ಸಹ ಆಗಿತ್ತು. 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ಪೋಲಿಯಾಗಿ ಸುತ್ತಾಡುವವರನ್ನು "ಅಕ್ರಮವಾಗಿ ನಡೆಯುವವವರು" ಅಥವಾ "ಅಶಿಸ್ತಿನಿಂದ ನಡೆಯುವವರು" ಎಂದು ಪರಿಗಣಿಸಲಾಗಿತ್ತು (3:6, 7, 11). ಈ ಜನರು ಸೋಮಾರಿಗಳಾಗಿದ್ದರು, ಮತ್ತು ಅವರು ಬೇರೆಯವರಿಗೆ ಕೆಟ್ಟ ಮಾದರಿಯನ್ನು ತೋರುವವರಾಗಿದ್ದರು. ದೇವರ ಆಜ್ಞೆಗಳ ಬೆಳಕಿನಲ್ಲಿ, ಅಂತಹ ಸೋಮಾರಿತನವು ಪಾಪವಾಗಿರುತ್ತದೆ.

ಹೇಗೂ, ಅದಕ್ಕಿಂತಲೂ ದೊಡ್ಡ ಸಮಸ್ಯೆಯು ಇತ್ತು. ಈ ಸೋಮಾರಿ ಜನರು ಸಭೆಯ ಮಾದರಿಯ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತಿದ್ದದ್ದು ಮಾತ್ರವೇ ಅಲ್ಲ, ಆದರೆ ಅವರು ಬೇರೆಯವರ ಕೆಲಸಗಳಲ್ಲಿ ತಲೆ ಹಾಕುತ್ತಿದ್ದರು. ಹೊಸ ಕ್ರೈಸ್ತರಿಗೆ ತಮ್ಮ ಸ್ವಂತ ಕಾರ್ಯವನ್ನು ನೋಡಿಕೊಂಡು ಕೈಯಾರೆ ಕೆಲಸ ಮಾಡಬೇಕೆಂದು ಕಲಿಸಲಾಯಿತು (1 ಥೆಸಲೋನಿಕ 4:11), ಆದರೆ ಈ ಸೋಮಾರಿಗಳು ಮತ್ತೊಬ್ಬರ ವ್ಯವಹಾರಗಳಲ್ಲಿ ತಲೆ ಹಾಕುವವರಾಗಿದ್ದರು. ಅಕ್ಷರಶಃ, "ಅವರು ಕೆಲಸ ಮಾಡುತ್ತಿರಲಿಲ್ಲ, ಆದರೆ ಸುತ್ತಲಿನರ ಕೆಲಸಗಳಲ್ಲಿ ಕೈಯಾಡಿಸುತ್ತಿದ್ದರು." ಅವರು ಜನರ ಕೆಲಸವನ್ನು ತಮ್ಮ ಕೆಲಸವನ್ನಾಗಿ ಮಾಡಿಕೊಂಡಿದ್ದರು; ಬೇರೆಯವರು ಮಾಡುತ್ತಿದ್ದ ಒಳ್ಳೇ ಕೆಲಸದಲ್ಲಿ ಅವರು ಅಡಚಣೆಯನ್ನು ಉಂಟು ಮಾಡುತ್ತಿದ್ದರು.

ಅದೇ ರೀತಿಯಲ್ಲಿ, ಇಂದು ಕೆಲಸ ಮಾಡದ ಕೆಲವು ಜನರು ಮತ್ತೊಬ್ಬರ ಕೆಲಸಗಳಲ್ಲಿ ತಲೆ ಹಾಕುವವರಾಗಬಲ್ಲರು, ಬೇರೆಯವರ ಕೆಲಸಕ್ಕೆ ಅಡಚಣೆಯಾಗಬಲ್ಲರು. ಇದು ಸೋಮಾರಿತನದ ರೀತಿಯಲ್ಲಿಯೇ ಒಂದು ಪಾಪವಾಗಿದೆ.

ನಮ್ಮ ಕೆಲಸವು ದೇವರ ಕೆಲಸವಾಗಿರಬೇಕಾದ ಅಗತ್ಯವಿದೆ! ಕ್ರೈಸ್ತರಾಗಿ ಪರಿವರ್ತನೆಗೊಂಡ ದಾಸರಿಗೆ ಪೌಲನು ಅಪ್ಪಣೆ ಕೊಟ್ಟ ಪ್ರಕಾರವೇ, "ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರ ಎಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ" (ಕೊಲೊಸ್ಸೆ 3:23).

*ಕೆಲಸ ಮಾಡದವರನ್ನು ಹೊರಗಿಡಬೇಕು (3:13-15).* ಸದಸ್ಯರು ಕೆಲಸ ಮಾಡುವದಕ್ಕೆ ನಿರಾಕರಿಸುವದಾದರೆ ಸಭೆಯಲ್ಲಿ ಏನು ಮಾಡಬಹುದಾಗಿದೆ? ಬೈಬಲಧಾರಿತ ಉತ್ತರವು

ಸರಳವಾಗಿದೆ: "ಕೆಲಸ ಮಾಡಲೊಲ್ಲದವನು ಊಟಮಾಡಬಾರದು" (3:10b). ನಾವು ಸೋಮಾರಿಗಳಿಗೆ ಊಟವನ್ನು ಹಾಕಬಾರದು; ಆದರೆ "ಅವರಿಂದ ದೂರವಾಗಿರಬೇಕು" ಮತ್ತು ಅಂಥ ಸಹೋದರರ "ಸಹವಾಸದಲ್ಲಿ ಸೇರಬಾರದು" (3:6, 14)! ನಾವು ಅವರ ಸ್ನೇಹ ಮಾಡಬಾರದು! ಅವರನ್ನು ನಾವು ನಮ್ಮ ಅನ್ಯೋನ್ಯತೆಯಲ್ಲಿ ಸೇರಿಸಿಕೊಳ್ಳಬಾರದು ಅಥವಾ ನಮ್ಮ ಊಟವನ್ನು ಹಂಚಿಕೊಳ್ಳುವದಕ್ಕೆ ಬಿಡಬಾರದು! ಈ ವಿಷಯದ ಮೇಲೆ ಅದು ದೇವರ ಸಂದೇಶವಾಗಿದೆ.

ಸೋಮಾರಿಗಳಾಗಿರುವವರ ವಿಷಯದಲ್ಲಿ ಹೀಗೆ ನಡೆದುಕೊಳ್ಳುವದು ಕಠೋರವೆಂದೆಣಿಸಬಹುದು, ಆದರೆ ಈ ರೀತಿಯಾಗಿ ನಡೆದುಕೊಳ್ಳುವ ಲಕ್ಷ್ಯವು ಅವರನ್ನು ಹಸಿವೆಯಿಂದ ಬಳಲುವಂತೆ ಮಾಡುವದಲ್ಲ. ಅವರು ದೇವರಂತೆಯೂ ಅತನ ಜನರಂತೆಯೂ ನಡೆದುಕೊಳ್ಳುತ್ತಿಲ್ಲ, ಆದರೆ ಆತನು ನೇಮಿಸಿರುವ ಜೀವನದ ದಾರಿಯಿಂದ ತಮ್ಮನ್ನು ಬೇರ್ಪಡಿಸಿಕೊಂಡಿರುತ್ತಾರೆಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡುವದೇ ಆಗಿದೆ. ಅವರು ಈ ರೀತಿಯಲ್ಲಿ ನಡೆದುಕೊಳ್ಳುತ್ತಿರುವ ವೇಳೆ ಅವರನ್ನು ನಂಬಿಗಸ್ತರಾದ ಸಹೋದರರು ಹಾಗೂ ಸಹೋದರಿಯರೆಂದು ಕಾಣುವದು ಅಂಗೀಕಾರವಾದದ್ದಲ್ಲ. ಅವರ ಸೋಮಾರಿತನವು ಎಷ್ಟು ನಾಚಿಕೆಯುಳ್ಳದ್ದೆಂಬುದನ್ನು ಅವರು ಅರಿತುಕೊಳ್ಳುವಂತಾಗಬೇಕು. ಉಪದೇಶಿಸುವಿಕೆ, ಎಚ್ಚರಿಸುವಿಕೆ, ಮತ್ತು ಉತ್ತಮ ಮಾದರಿಗಳನ್ನು ತೋರುವ ಮೂಲಕ, ಜೊತೆಯ ಕ್ರೈಸ್ತರು ಅಕ್ರಮವಾಗಿರುವ ಸಹೋದರರಿಗೆ ಅವರ ಸ್ವಂತ ಕಾರ್ಯವನ್ನು ನೋಡಿಕೊಂಡು ಕೆಲಸದಲ್ಲಿ ತೊಡಗಿಸಿಕೊಳ್ಳುವಂತೆ ಸಹಾಯ ಮಾಡಬಲ್ಲರು.

ದೇವರ ಕುಟುಂಬದಲ್ಲಿರುವದೆಂದರೆ ಆತನ ಶಿಸ್ತಿನಲ್ಲಿ ಪಾಲುಗಾರರಾಗುವದೆಂದರ್ಥವಾಗಿದೆ. ಈ ಶಿಸ್ತನ್ನು ಸೋಮಾರಿಗಳಾದ ಸಹೋದರರು ಅಂಗೀಕರಿಸಿಕೊಳ್ಳಲಿಲ್ಲವೆಂದರೆ, ಅವರು ದೇವರ ಪ್ರಯೋಜನಗಳನ್ನು ಕಳೆದುಕೊಳ್ಳುವರು. ನಮ್ಮ ಕ್ರಿಯೆಗಳು ಆ ತೀರ್ಮಾನವನ್ನು ಕಾರ್ಯರೂಪದಲ್ಲಿ ಪ್ರತಿಬಿಂಭಿಸಬೇಕು; ಆಗ ದಾರಿ ತಪ್ಪಿರುವವನು ಕೆಲಸದ ಪ್ರಾಮುಖ್ಯತೆಯನ್ನು ಮತ್ತು ದೇವರ ಶಿಸ್ತನ್ನು ತಿರಸ್ಕರಿಸುವದರ ಅಪಾಯವನ್ನು ಕಾಣುವನು. ಅವರು ಪಶ್ಚಾತ್ತಾಪ ಪಡುವದಕ್ಕೆ, ಬೇರೆಯವರ ಕೆಲಸದಲ್ಲಿ ತಲೆ ಹಾಕುವದನ್ನು ನಿಲ್ಲಿಸಲು, ಮತ್ತು ಕೆಲಸ ಮಾಡುವದಕ್ಕೆ ತೀರ್ಮಾನಿಸಿಕೊಳ್ಳುತ್ತಾರೋ ಅಥವಾ ಇಲ್ಲವೋ ಎಂಬುದು ಅವರಿಗೆ ಬಿಟ್ಟಿದ್ದು; ಆದರೆ ಅವರ ವರ್ತನೆಯಿಂದಾಗುವ ಅಪಾಯದ ಕುರಿತಾಗಿ ಅವರು ಯಾವ ಸಂಶಯವನ್ನು ಹೊಂದಿರುವದಿಲ್ಲ.

ಕೆಲಸ ಮಾಡದವರಿಗೆ ಅವರು ತಮ್ಮ ಮನೋಭಾವಗಳನ್ನು ಜೀವಿತಗಳನ್ನು ಬದಲಾಯಿಸಿಕೊಳ್ಳುವಂತೆ ನಮ್ಮ ಸಹಾಯದ ಅಗತ್ಯವಿರುತ್ತದೆ. ಕೆಲಸದ ಕುರಿತು ದೇವರ ಚಿತ್ತವೇನೆಂಬ ಬಗ್ಗೆ ಅವರಿಗೆ ಕಲಿಸುವ ಮೂಲಕ, ನಮ್ಮ ಸ್ವ ಕೆಲಸದ ಮೂಲಕ ಅವರಿಏ ಒಳ್ಳೇ ಮಾದರಿಯನ್ನು ತೋರಿಸುವ ಮೂಲಕ, ಅವರ ಭಕ್ತಿಹೀನ ವರ್ತನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಅವರನ್ನು ಎಚ್ಚರಿಸುವ ಮೂಲಕ ಅವರಿಗೆ ಸಹಾಯವನ್ನು ಮಾಡಬಲ್ಲೆವು.

*ಮುಕ್ತಾಯ.* ಕ್ರೈಸ್ತರಿಗಾದರೋ, ಎಲ್ಲಾ ಕೆಲಸವು ದೇವರ ಕೆಲಸವಾಗಿದೆ. ನಾವು

ಮನೆಯಲ್ಲಿ ಅಥವಾ ಉದ್ಯೋಗ ಸ್ಥಳದಲ್ಲಿ ಮಾಡುವ ಎಲ್ಲಾ ಕೆಲಸಗಳಿಗೆ ದೇವರ ಯಜಮಾನನು, ಧಣಿ, ಒಡೆಯನಾಗಿದ್ದಾನೆ. ಅದು ದೇವರ ಕೆಲಸ, ದೇವರಿಗಾಗಿ ಮಾಡುವ ಕೆಲಸವಾದ ಕಾರಣ, ಅದು ವಿಶೇಷ, ಪರಿಶುದ್ಧ, ಮತ್ತು ಪವಿತ್ರವಾದದ್ದು. ಅದು ಪ್ರಾಮುಖ್ಯವಾದದ್ದು. ಒಳ್ಳೇ ಕೆಲಸವನ್ನು ಮಾಡುವದು ಒಬ್ಬ ಪರಿಪಕ್ವವುಳ್ಳ ಕ್ರೈಸ್ತನ ಗುರುತಾಗಿದೆ.

ನಮ್ಮ ಉದ್ಯೋಗದಲ್ಲಿ ಉತ್ತಮ ಕೆಲಸವನ್ನು ಮಾಡುವಾಗ, ನಾವು ದೇವರಿಗೆ ವಿಧೇಯರಾಗುವದು ಮಾತ್ರವಲ್ಲ, ಆದರೆ ನಾವು ಒಂದು ಉತ್ತಮ ಮಾದರಿಯನ್ನು ತೋರಿಸುವವರು ನಮ್ಮ ಅಗತ್ಯತೆಗಳನ್ನು ಸಂಧಿಸಿಕೊಳ್ಳುವವರು, ಮತ್ತು ದೇವರಿಗೆ ಫಲವನ್ನು ಕೊಡುವವರು ಸಹ ಆಗಿದ್ದೇವೆ. ನಮ್ಮ ಒಳ್ಳೇ ಕೆಲಸದ ಮೂಲಕ ನಮ್ಮ ಯಜಮಾನನಿಗೆ ಗೌರವವುಂಟಾಗುತ್ತದೆ. ಅನುದಿನವೂ ಆತನ ದಾರಿಯಲ್ಲಿ ಕೆಲಸ ಮಾಡುವ ಮೂಲಕ ನಮ್ಮ ಯಜಮಾನನ ಸೇವೆಯನ್ನು ಮಾಡೋಣ ಮತ್ತು ಆತನನ್ನು ಗೌರವ ಪಡಿಸೋಣ! TP

---

**ಅಡಿಟಿಪ್ಪಣಿಗಳು**

[1]C. F. Hogg and W. E. Vine, *The Epistles of Paul the Apostle to the Thessalonians* (Shreveport, La.: Lambert Publishing Co., 1977), 282. [2]Henry Alford, *The Greek Testament*, rev. Everett F. Harrison (Chicago: Moody Press, 1958), 3:295. [3]I. Howard Marshall, *1 and 2 Thessalonians*, The New Century Bible Commentary (Grand Rapids, Mich.: Wm. B. Eerdmans Publishing Co., 1983), 215. [4]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 57. [5]John Stott, *The Gospel and the End of Time* (Downer's Grove, Ill.: InterVarsity Press, 1991), 191. [6]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 148. [7]Robertson, 58. [8]David J. Williams, *1 and 2 Thessalonians*, New International Biblical Commentary: New Testament Series, vol. 12 (Peabody, Mass.: Hendrickson Publishers, 1992), 135–36. [9]Robertson, 58.[10]Leon Morris, *The First and Second Epistle to the Thessalonians*, The New International Bible Commentary on the New Testament (Grand Rapids, Mich.: Wm. B. Eerdmans Publishing Co., 1959), 253. The Hebrew word for "bread" and "food" is the same: לֶחֶם (*lechem*). See Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1972), 536–37.

[11]Hogg and Vine, 287. [12]Ibid., 288. [13]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati, Ohio: Standard Publishing Foundation, 1916), 46. [14]Marshall, 225. [15]Hogg and Vine, 290. [16]Robertson, 60. [17]See Morris, 258. [18]Marshall, 228. [19]Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 180. [20]Bauer, 148.

[21]Robertson, 58.